ಕರ್ನಾಟಕ ಸರ್ಕಾರ

(ಕರ್ನಾಟಕ ಅಧಿನಿಯಮ 1962ರ ಸಂಖ್ಯೆ 8)

# ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961
# ನಿಯಮಗಳು, 1963

(1986ರ ಮೇ ವರೆಗೆ ತಿದ್ದುಪಡಿಯಾದಂತೆ)

ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ.
1988

# ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 ನಿಯಮಗಳು, 1963

**ಅಧಿಸೂಚನೆ**

**ಕ್ರಮಾಂಕ ಲಾ 3 ಎಲ್‌ಎಂಪಿ 88, ಬೆಂಗಳೂರು, ದಿನಾಂಕ 28ನೇ ಮಾರ್ಚ 1988**

ಕರ್ನಾಟಕ ರಾಜಭಾಷಾ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ, 26ರ)ರ–5ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ಶ್ರೀ ಎ.ಎನ್. ಬ್ಯಾನರ್ಜಿ ಎಂಬ ನಾನು, ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ ಅಧಿನಿಯಮ, 1961 ಕನ್ನಡ ಭಾಷೆಯಲ್ಲಿರುವ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ ಅಧಿನಿಯಮ, 1961 ಇದು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಎ.ಎನ್. ಬ್ಯಾನರ್ಜಿ,**
ಕರ್ನಾಟಕರ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ವಿ. ರಾಮಚಂದ್ರ ರಾಜು**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ, (ಪ್ರಕಟಣೆಗಳು)

# ವಿಷಯಾನುಕ್ರಮಣಿಕೆ

## ಅಧ್ಯಾಯ–I

## ಪ್ರಾರಂಭಿಕ


ಪುಟಸಂಖ್ಯೆ

1. ಚಿಕ್ಕ ಹೆಸರು, ವ್ಯಾಪ್ತಿ ಪ್ರಾರಂಭ ಮತ್ತು ಅನ್ವಯ –
2. ಪರಿಭಾಷೆಗಳು –
3. ವಿನಾಯಿತಿಗಳು –


## ಅಧ್ಯಾಯ–II
## ಕಾರ್ಯ ಸಂಸ್ಥೆಗಳ ನೋಂದಣಿ


4. ಕಾರ್ಯ ಸಂಸ್ಥೆಗಳ ನೋಂದಣಿ –
5. ಪರಿಶೀಲಕನಿಗೆ ಬದಲಾವಣೆಯನ್ನು ತಿಳಿಸತಕ್ಕದ್ದು –
6. ಕಾರ್ಯ ಸಂಸ್ಥೆಯನ್ನು ಮುಚ್ಚುವ ಬಗ್ಗೆ ಪರಿಶೀಲಕನಿಗೆ ತಿಳಿಸತಕ್ಕದ್ದು –


## ಅಧ್ಯಾಯ–III
## ಕೆಲಸದ ವೇಳೆಗಳು


7. ದೈನಂದಿನ ಮತ್ತು ವಾರದ ವೇಳೆಗಳು –
8. ಅಧಿಕ ಕಾಲಿಕ ಕೆಲಸಕ್ಕಾಗಿ ಹೆಚ್ಚಿನ ಮಜೂರಿಗಳು –
9. ವಿಶ್ರಾಂತಿಗಾಗಿ ಬಿಡುವು –
10. ಹರವು –
11. ತೆರೆಯುವ ಮತ್ತು ಮುಚ್ಚುವ ವೇಳೆಗಳು –
12. ವಾರದ ರಜಾ ದಿವಸಗಳು –
13. ಕಾರ್ಯ ಸಂಸ್ಥೆಗಳ ಹೊರಗಡೆ ಮುಚ್ಚುವ ವೇಳೆಗಳ ತರುವಾಯ ನಿಷೇಧ –


## ಅಧ್ಯಾಯ–IV
## ಮಜೂರಿಗಳೊಂದಿಗೆ ವಾರ್ಷಿಕ ರಜೆ


14. ಅಧ್ಯಾಯದ ಅನ್ವಯ –
15. ಮಜೂರಿಗಳ ಸಹಿತ ವಾಷಿಕ ರಜೆ –
16. ರಜಾ ಅವಧಿಯಲ್ಲಿ ಮಜೂರಿಗಳು –
17. ಕೆಲವು ಸಂದರ್ಭಗಳಲ್ಲಿ ಮುಂಗಡವಾಗಿ ಸಂದಾಯ –
18. ಸಂದಾಯ ಮಾಡದ ಮಜೂರಿಗಳ ವಸೂಲಿಯ ವಿಧಾನ –

19. ನಿಯಮ ರಚನಾಧಿಕಾರ –
20. ಕಾರ್ಯಸಂಸ್ಥೆಗಳನ್ನು ವಿನಾಯಿತಿಗೊಳಿಸಲು ಅಧಿಕಾರ –

## ಅಧ್ಯಾಯ–V

## ಮಜೂರಿಗಳು ಮತ್ತು ನಷ್ಟ ಪರಿಹಾರ ಮತ್ತು ಪ್ರಸೂತಿ ಸೌಕರ್ಯ

21. ಮಜೂರಿಗಳ ಸಂದಾಯ ಅಧಿನಿಯಮದ ಅನ್ವಯ –
22. ಕಾರ್ಮಿಕ ನಷ್ಟ ಪರಿಹಾರ ಅಧಿನಿಯಮದ ಅನ್ವಯ –
23. [* * * * *] –

## ಅಧ್ಯಾಯ–VI

## ಮಕ್ಕಳ ಮತ್ತು ಮಹಿಳೆಯರ ನಿಯೋಜನೆ

24. ಮಕ್ಕಳ ನಿಯೋಜನೆಯ ನಿಷೇಧ –
25. ರಾತ್ರಿ ವೇಳೆಯಲ್ಲಿ ಮಹಿಳೆಯರು ಮತ್ತು ಯುವ ವ್ಯಕ್ತಿಗಳ ನಿಯೋಜನೆಯ ನಿಷೇಧ –

## ಅಧ್ಯಾಯ–VII

## ಜಾರಿ ಮತ್ತು ಪರಿಶೀಲನೆ

26. ಪರಿಶೀಲಕರು –
27. ಪರಿಶೀಲಕರ ಅಧಿಕಾರಗಳು ಮತ್ತು ಕರ್ತವ್ಯಗಳು –
28. ಪರಿಶೀಲಕರು ಲೋಕ ನೌಕರರಾಗಿರುತ್ತಾರೆ –
29. ಪರಿಶೀಲನೆಗಾಗಿ ನಿಯೋಜಕನು ರಿಜಿಸ್ಟರುಗಳು, ದಾಖಲೆಗಳು ಇತ್ಯಾದಿಗಳು ಹಾಜರುಪಡಿಸತಕ್ಕದ್ದು. –

## ಅಧ್ಯಾಯ–VIII

## ಅಪರಾಧಗಳು ದಂಡನೆಗಳು ಮತ್ತು ಪ್ರಕ್ರಿಯೆ

30. ದಂಡನೆಗಳು –
31. ಪ್ರತಿಕ್ರಿಯೆ –
32. ಪ್ರಾಸಿಕ್ಯೂಷನ್‌ಗಳ ಕಾಲಪರಿಮಿತಿ –
33. ಪರಿಶೀಲಕರು ಇತ್ಯಾದಿಯವರನ್ನು ಅಡ್ಡಿಪಡಿಸಿದ್ದಕ್ಕಾಗಿ ದಂಡನೆ

## ಅಧ್ಯಾಯ–IX

### ಸಂಕೀರ್ಣ


34. ರಿಜಿಸ್ಟರುಗಳ ಮತ್ತು ದಾಖಲೆಗಳನ್ನು ಇಟ್ಟುಕೊಂಡು ಬರುವುದು ಮತ್ತು ನೋಟೀಸುಗಳ ಪ್ರದರ್ಶನ –

35. ಕೆಲವು ಹಕ್ಕುಗಳು ಮತ್ತು ವಿಶೇಷ ಅಧಿಕಾರಗಳನ್ನು ಉಳಿಸುವಿಕೆ –

36. ರಕ್ಷಣೆ –

37. ಅಧಿಕಾರಗಳ ಪ್ರತ್ಯಾಯೋಜನೆ –

38. ಜಾತ್ರೆಗಳು ಮತ್ತು ಹಬ್ಬಗಳ ಕಾಲದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಅಮಾನತ್ತಿನಲ್ಲಿಡುವ ಸರ್ಕಾರದ ಅಧಿಕಾರ –

39. ವಜಾ ನೋಟೀಸು –

40. ನಿಯಮ ರಚನಾಧಿಕಾರ –

41. ಅಧಿಸೂಚನೆಗಳನ್ನು ಮತ್ತು ನಿಯಮಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಇರಿಸತಕ್ಕದ್ದು –

42. ನಿರಸನ ಮತ್ತು ಉಳಿಸುವಿಕೆಗಳು –

43. ಕೇಂದ್ರ ಅಧಿನಿಯಮ, 1942 ರXVIII ದ ನಿರಸನ –

44. ತೊಂದರೆಗಳನ್ನು ನಿವಾರಿಸಲು ಅಧಿಕಾರ –


### ಅನುಸೂಚಿ

### ನಿಯಮಗಳು

**ಕರ್ನಾಟಕ ಅಧಿನಿಯಮ 1962ರ ಸಂಖ್ಯೆ 8**

**(1962ನೇ ಮಾರ್ಚ್ ಮೊದಲನೆಯ ದಿನದಂದು ಮೈಸೂರು ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಯಿತು)**

# ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961

**(1962ನೇ ಫೆಬ್ರವರಿ ಹದಿನೈದನೆಯ ದಿವಸದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆಯಿತು.)**

(1966ರ 33: 1969ರ 4; 1982ರ 33 ಮತ್ತು 1986ರ 17ನೇ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ)

ಅಂಗಡಿಗಳು, ವಾಣಿಜ್ಯ ಕಾರ್ಯಸಂಸ್ಥೆಗಳಲ್ಲಿ ಕೆಲಸ ಮತ್ತು ನಿಯೋಜನೆಯ ಷರತ್ತುಗಳನ್ನು ವಿನಿಮಯಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳಲ್ಲಿ ಕೆಲಸ ಮತ್ತು ನಿಯೋಜನೆಯ ಷರತ್ತುಗಳನ್ನು ಮತ್ತು ಇತರ ಪ್ರಾಸಂಗಿಕ ವಿಷಯಗಳನ್ನು ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹನ್ನೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ– I

## ಪ್ರಾರಂಭಿಕ

**1) ಚಿಕ್ಕ ಹೆಸರು, ವ್ಯಾಪ್ತಿ ಪ್ರಾರಂಭ ಮತ್ತು ಅನ್ವಯ:–** 1) ಈ ಅಧಿನಿಯಮವನ್ನು ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳು ಅಧಿನಿಯಮ, 1961 ಎಂದು ಕರೆಯತಕ್ಕದ್ದು.

2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

3) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

4) (ಕ) ಅದು ಮೊದಲನೆಯದಾಗಿ, ಈ ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶಗಳಿಗೆ ಮತ್ತು 42 ನೇ ಪ್ರಕರಣದ ಮೂಲಕ ನಿರಸನಗೊಂಡ ಯಾವುದೇ ಅಧಿನಿಯಮವು ಅನ್ವಯವಾಗಿದ್ದಂಥ ಇತರ ಪ್ರದೇಶಗಳಿಗೆ ಅನ್ವಯವಾಗತಕ್ಕದ್ದು.

(ಖ) ಅದು, ಯಾವುದೇ ಇತರ ಪ್ರದೇಶಕ್ಕೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮವುಳ್ಳಂತೆ ಅನ್ವಯವಾಗತಕ್ಕದ್ದು; ಆ ದಿನಾಂಕವು ಸರ್ಕಾರೀ ರಾಜ್ಯಪತ್ರದಲ್ಲಿ ಅಂಥ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಮೂರು ತಿಂಗಳುಗಳು ಮುಕ್ತಾಯವಾಗುವುದಕ್ಕೆ ಮುಂಚಿನದಾಗಿರತಕ್ಕದ್ದಲ್ಲ

**2. ಪರಿಭಾಷೆಗಳು:** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಕ) 'ವಯಸ್ಕ' ಎಂದರೆ ಅವನ ಹದಿನೆಂಟನೆಯ ವರ್ಷವನ್ನು ಪೂರ್ಣಗೊಳಿಸಿರುವ ವ್ಯಕ್ತಿ;

(ಖ) 'ಉಮೇದುದಾರ' ಎಂದರೆ ಯಾವುದೇ ಕಾರ್ಯಸಂಸ್ಥೆಯಲ್ಲಿ ಯಾವುದೇ ಕಸುಬು, ಕುಶಲಕಲೆ ಅಥವಾ ನಿಯೋಜನೆಯಲ್ಲಿ ತರಬೇತಿ ಪಡೆಯುವ ಉದ್ದೇಶಕ್ಕಾಗಿ ಮಜೂರಿಗಳ ಸಂದಾಯದ ಮೇಲಾಗಲೀ ಅಥವಾ ಅದಿಲ್ಲದೆ ನಿಯೋಜಿತರಾಗಿರುವ ಹನ್ನೆರಡು ವರ್ಷಗಳಿಗಿಂತ ಕಡಿಮೆ ಇಲ್ಲದ ವ್ಯಕ್ತಿ;

(ಗ) 'ಮಗು'– ಎಂದರೆ ಅವನ ಹನ್ನೆರಡನೇ ವರ್ಷವನ್ನು ಪೂರ್ಣಗೊಳಿಸದೇ ಇರುವ ವ್ಯಕ್ತಿ;

(ಘ) 'ಮುಚ್ಚಿರುವುದು' ಎಂದರೆ ಯಾವನೇ ಗಿರಾಕಿಯ ಸೇವೆಗಾಗಿ ಅಥವಾ ಕಾರ್ಯಸಂಸ್ಥೆಗೆ ಸಂಬಂಧಿಸಿದ ಯಾವುದೇ ವ್ಯವಹಾರಕ್ಕಾಗಿ ತೆರೆದಿಲ್ಲದೇ ಇರುವುದು;

(ಙ) 'ವಾಣಿಜ್ಯ ಕಾರ್ಯಸಂಸ್ಥೆ' ಎಂದರೆ ವಾಣಿಜ್ಯ ಅಥವಾ ವ್ಯಾಪಾರದ ಅಥವಾ ಬ್ಯಾಂಕಿಗ್ ಅಥವಾ ವಿಮಾ ಕಾರ್ಯಸಂಸ್ಥೆ, ಯಾವುದರಲ್ಲಿ ವ್ಯಕ್ತಿಗಳನ್ನು ನಿಯೋಜಿಸಲಾಗಿದೆಯೋ ಅಥವಾ ಕಚೇರಿ ಕೆಲಸದಲ್ಲಿ ಮುಖ್ಯವಾಗಿ ತೊಡಗಿಸಿರುವರೋ ಆ ಕಾರ್ಯಸಂಸ್ಥೆ ಅಥವಾ ಆಡಳಿತಾತ್ಮಕ ಸೇವೆ, ಹೋಟೆಲ್ ಉಪಹಾರ ಗೃಹ, ಭೋಜನ ಅಥವಾ ಊಟದ ಗೃಹ, ಕೆಫೆ ಅಥವಾ ಯಾವುದೇ ಇತರ ಉಪಹಾರ ಗೃಹ, ಥಿಯೇಟರ್ ಅಥವಾ ಯಾವುದೇ ಇತರ ಸಾರ್ವಜನಿಕ ವಿನೋದ ಅಥವಾ ಮನರಂಜನೆಯ ಸ್ಥಳ ಮತ್ತು ಅದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳಿಗಾಗಿ ವಾಣಿಜ್ಯ ಕಾರ್ಯಸಂಸ್ಥೆಯೆಂಬುದಾಗಿ ಘೋಷಿಸುವಂಥ ಕಾರ್ಯಸಂಸ್ಥೆಗಳನ್ನು ಒಳಗೊಳ್ಳುತ್ತದೆ

(ಚ) 'ದಿವಸ' ಎಂದರೆ ಮಧ್ಯರಾತ್ರಿಯಲ್ಲಿ ಪ್ರಾರಂಭವಾಗುವ ಇಪ್ಪತ್ನಾಲ್ಕು ಗಂಟೆಗಳ ಅವಧಿ:

ಪರಂತು, ಮಧ್ಯರಾತ್ರಿಯಿಂದಾಚೆಗೆ ಕೆಲಸದ ವೇಳೆಗಳನ್ನು ವಿಸ್ತರಿಸಲಾದ ನಿಯೋಜಿತನ ಸಂದರ್ಭದಲ್ಲಿ 'ದಿವಸ' ಎಂದರೆ ಮಧ್ಯರಾತ್ರಿಯನ್ನು ಗಣನೆಗೆ ತೆಗೆದುಕೊಳ್ಳದೆ ಅಂಥ ನಿಯೋಜನೆಯು ಆ ಕಾಲದಿಂದ ಪ್ರಾರಂಭವಾಗುವ ಇಪ್ಪತ್ನಾಲ್ಕು ಗಂಟೆಗಳ ಅವಧಿ;

(ಛ) 'ನಿಯೋಜಿತ' ಎಂದರೆ ಯಾವುದೇ ಕಾರ್ಯಸಂಸ್ಥೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಖಾಯಂ ಆಗಿಯಾಗಲೀ ನಿಯತಕಾಲಿಕವಾಗಿಯೇ ಆಗಲಿ ಕರಾರಿನ ಮೇಲಾಗಲೀ ಅಥವಾ ತುಂಡು ದರದ ಮಜೂರಿಗಳ ಮೇಲೆ ಆಗಲೀ ಅಥವಾ ರುಸುಂಮಿನ ಆಧಾರದ ಮೇಲೆ ಆಗಲೀ ಅವನು ತನ್ನ ದುಡಿಮೆಗಾಗಿ ಯಾವುದೇ ಪ್ರತಿಫಲವನ್ನು ಪಡೆಯದೇ ಇದ್ದಾಗ್ಯೂ ಸಂಪೂರ್ಣವಾಗಿ ಅಥವಾ ಮುಖ್ಯವಾಗಿ ನಿಯೋಜಿತನಾದ ವ್ಯಕ್ತಿ ಮತ್ತು ಕಾರ್ಖಾನೆಗಳ ಅಧಿನಿಯಮ, 1948ರ ವ್ಯಾಪ್ತಿಯ ಹೊರಗೆ ಬರುವ ಕಾರ್ಖಾನೆ ಅಥವಾ ಕೈಗಾರಿಕಾ ಕಾರ್ಯಸಂಸ್ಥೆಯ ಉಮೇದುದಾರರ ಸಿಬ್ಬಂಧಿಯ ಯಾವನೇ ಲಿಪಿಕ ಅಥವಾ ಇತರ ಸದಸ್ಯನನ್ನು ಒಳಗೊಳ್ಳುತ್ತದೆ, ಆದರೆ 'ನಿಯೋಜಕನ' ಕುಟುಂಬದ ಸದಸ್ಯನನ್ನು ಒಳಗೊಳ್ಳುವುದಿಲ್ಲ; ಮತ್ತು 'ನಿಯೋಜಿತನಾಗಿರುವುದು' ಎನ್ನುವುದನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

(ಜ) 'ನಿಯೋಜಕ' ಎಂದರೆ ಕಾರ್ಯಸಂಸ್ಥೆಯ ಪ್ರಭಾರವನ್ನು ಹೊಂದಿರುವ ಅಥವಾ ಒಡೆತನವನ್ನು ಹೊಂದಿರುವ ಅಥವಾ ಆದರೆ ವ್ಯವಹಾರಗಳ ಮೇಲೆ ಅಂತಿಮ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿ ಮತ್ತು ಇದು ಕಾರ್ಯಸಂಸ್ಥೆಯ ಸಾಮಾನ್ಯ ವ್ಯವಸ್ಥಾಪನೆ ಅಥವಾ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಯೋಜಕನ ಕುಟುಂಬದ ಸದಸ್ಯರು, ವ್ಯವಸ್ಥಾಪಕ, ಏಜೆಂಟ್ ಅಥವಾ ಇತರ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಝ) 'ಕಾರ್ಯಸಂಸ್ಥೆ' ಎಂದರೆ ಅಂಗಡಿ ಅಥವಾ ವಾಣಿಜ್ಯ ಕಾರ್ಯಸಂಸ್ಥೆ;

(ಞ) ನಿಯೋಜಕನಿಗೆ ಸಂಬಂಧಪಟ್ಟಂತೆ 'ಕುಟುಂಬ' ಎಂದರೆ ನಿಯೋಜಕನ ಜೊತೆಯಲ್ಲಿ ವಾಸಿಸುವ ಅಥವಾ ಅವನ ಮೇಲೆ ಅವಲಂಬಿತನಾಗಿರುವ ಗಂಡ ಅಥವಾ ಹೆಂಡತಿ, ಮಗ, ಮಗಳು, ತಂದೆ–ತಾಯಿ, ಸಹೋದರ ಅಥವಾ ಸಹೋದರಿ.

(ಟ) 'ಪರಿಶೀಲಕ' ಎಂದರೆ 26ನೇ ಪ್ರಕರಣದ ಮೇರೆಗೆ ನೇಮಕಗೊಂಡ ಪರಿಶೀಲಕ ಮತ್ತು ಇದು ಮುಖ್ಯ ಪರಿಶೀಲಕ ಮತ್ತು ಸಹಾಯಕ ಪರಿಶೀಲಕವನ್ನು ಒಳಗೊಳ್ಳುತ್ತದೆ,

(ಠ) 'ರಜೆ' ಎಂದರೆ ಈ ಅಧಿನಿಯಮದ IV ನೇ ಅಧ್ಯಾಯದಲ್ಲಿ ಉಪಬಂಧಿಸಿರುವ ರಜೆ;

(ಡ) 'ರಾತ್ರಿ' ಎಂದರೆ, ರಾತ್ರಿ 8ರಿಂದ ಮತ್ತು ಬೆಳಿಗ್ಗೆ 6ರ ನಡುವಣ ಮಧ್ಯಂತರವನ್ನು ಒಳಗೊಳ್ಳುವಂಥ ಕನಿ ಪಕ್ಷ ಒಂದಾದ ಮೇಲೊಂದರಂತೆ ಬರುವ ಹನ್ನೆರಡು ಗಂಟೆಗಳ ಅವಧಿ;

(ಢ) 'ಅಧಿಸೂಚನೆ' ಎಂದರೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ಅಧಿಸೂಚನೆ;

(ಣ) 'ತೆರೆದಿರುವುದು' ಎಂದರೆ ಆ ಕಾರ್ಯಸಂಸ್ಥೆಗೆ ಸಂಬಂಧಿಸಿದಂತೆ ಯಾವನೇ ಗಿರಾಕಿಯ ಸೇವೆಗಾಗಿ ಅಥವಾ ಯಾವುದೇ ವ್ಯವಹಾರಕ್ಕಾಗಿ ತೆರೆದಿರುವುದು;,

(ತ) 'ಕೆಲಸದ ಅವಧಿ' ಎಂದರೆ ನಿಯೋಜಕನ ನಿಯಂತ್ರಣದಲ್ಲಿ ನಿಯೋಜಿತನು ಇರುವಂಥ ಕಾಲ;

(ಥ) 'ನಿಯಮಿಸಲಾದುದು' ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ದ) 'ನಿಯಮಿಸಲಾದ ಪ್ರಾಧಿಕಾರ' ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ನಿಯಮಿಸಲಾದ ಪ್ರಾಧಿಕಾರ;

(ಧ) 'ಕಾರ್ಯಸಂಸ್ಥೆಗಳ ರಿಜಿಸ್ಟರು' ಎಂದರೆ ಈ ಅಧಿನಿಯಮದ ಮೇರೆಗೆ ಕಾರ್ಯಸಂಸ್ಥೆಗಳ ನೋಂದಣಿಗಾಗಿ ಇಟ್ಟುಕೊಂಡು ಬಂದಿರುವ ರಿಜಿಸ್ಟರು;

(ನ) 'ನೋಂದಣಿ ಪ್ರಮಾಣಪತ್ರ' ಎಂದರೆ ಕಾರ್ಯಸಂಸ್ಥೆಯ ನೋಂದಣಿಯನ್ನು ತೋರಿಸುವ ಪ್ರಮಾಣ ಪತ್ರ;

(ಪ) 'ಅಂಗಡಿ' ಎಂದರೆ ಯಾವುದೇ ವ್ಯಾಪಾರ ಅಥವಾ ವ್ಯವಹಾರವನ್ನು ನಡೆಸುತ್ತಿರುವ ಅಥವಾ ಗಿರಾಕಿಗಳಿಗೆ ಸೇವೆಗಳನ್ನು ಸಲ್ಲಿಸುತ್ತಿರುವ ಯಾವುದೇ ಆವರಣ ಮತ್ತು ಅದು ಅಂಥ ವ್ಯಾಪಾರ ಅಥವಾ ಅದೇ ವ್ಯವಹಾರಕ್ಕೆ ಸಂಬಂಧಿಸಿದಂತೆ ಅದೇ ಆವರಣದಲ್ಲಿಯೇ ಆಗಲಿ ಅಥವಾ ಅನ್ಯಥಾ ಉಪಯೋಗಿಸಲಾದ ಕಚೇರಿಗಳು, ಉಗ್ರಾಣಗಳು, ಗೋದಾಮು ಅಥವಾ ಸರಕುಗಳ ಉಗ್ರಾಣಗಳನ್ನು ಒಳಗೊಂಡಿರುತ್ತದೆ. ಆದರೆ ಕಾರ್ಖಾನೆಗಳ ಅಧಿನಿಯಮ, 1948ರ ವ್ಯಾಪ್ತಿಯಲ್ಲಿ ಬರುವ ಅಂಗಡಿಯಲ್ಲಿ ವ್ಯಕ್ತಿಗಳು ನಿಯೋಜಿತರಾಗಿರುವ ಕಾರ್ಖಾನೆಗೆ ಲಗತ್ತಾದ ವಾಣಿಜ್ಯ ಕಾರ್ಯಸಂಸ್ಥೆ ಅಥವಾ ಅಂಗಡಿಯನ್ನು ಒಳಗೊಳ್ಳುವುದಿಲ್ಲ;

(ಫ) 'ಹರವು' ಎಂದರೆ ಯಾವುದೇ ದಿವಸದಂದು ನಿಯೋಜಿತನ ಕೆಲಸದ ಪ್ರಾರಂಭ ಮತ್ತು ಅದು ಕೊನೆಗೊಳ್ಳುವ ನಡುವಣ ಅವಧಿ;

(ಬ) 'ಮಜೂರಿಗಳು' ಎಂಬುದು ಮಜೂರಿಗಳ ಸಂದಾಯ ಅಧಿನಿಯಮ, 1936 (1936ರ ಕೇಂದ್ರ ಅಧಿನಿಯಮ iv) ರಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಭ) 'ವಾರ' ಎಂದರೆ ಶನಿವಾರದ ಮಧ್ಯರಾತ್ರಿಯಲ್ಲಿ ಅಥವಾ ನಿಯಮಿಸಲಾದ ಪ್ರಾಧಿಕಾರವು ನಿರ್ದಿಷ್ಟ ಪ್ರದೇಶಕ್ಕಾಗಿ ಬರಹದಲ್ಲಿ ಅನುಮೋದಿಸಬಹುದಾದಂಥ ಇತರ ರಾತ್ರಿಯಲ್ಲಿ ಪ್ರಾರಂಭವಾಗುವ ಏಳು ದಿವಸಗಳ ಅವಧಿ;

(ಮ) 'ವರ್ಷ' ಎಂದರೆ ಜನವರಿ ಮೊದಲನೇ ದಿವಸದಂದು ಪ್ರಾರಂಭವಾಗುವ ವರ್ಷ;

(ಯು) 'ಯುವ ವ್ಯಕ್ತಿ' ಎಂದರೆ ಮಗುವಾಗಿರದ ಮತ್ತು ಅವನ ಹದಿನೆಂಟನೇ ವರ್ಷವನ್ನು ಪೂರ್ಣಗೊಳಿಸಿದೇ ಇರುವ ವ್ಯಕ್ತಿ.

**3. ವಿನಾಯಿತಿಗಳು:–** ಈ ಅಧಿನಿಯಮದಲ್ಲಿ ಇರುವುದಾವುದೂ,–

(ಕ) ವಾಣಿಜ್ಯ ಉದ್ಯಮಗಳನ್ನು ಹೊರತುಪಡಿಸಿ, ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಅಥವಾ ಸ್ಥಳೀಯ ಪ್ರಾಧಿಕಾರಗಳ ಅಥವಾ ಅವುಗಳ ಅಧೀನದಲ್ಲಿರುವ ಕಚೇರಿಗಳು:

(ಖ) ಯಾವುದೇ ರೈಲ್ವೆ ಸೇವೆ, ಜನಸಾರಿಗೆ ಅಂಚೆ, ತಂತಿ ಅಥವಾ ದೂರವಾಣಿ ಸೇವೆ, ಸಾರ್ವಜನಿಕ ನಿರ್ಮಲೀಕರಣದ ಅಥವಾ ನೈರ್ಮಲ್ಯದ ಯಾವುದೇ ವ್ಯವಸ್ಥೆ ಅಥವಾ ಸಾರ್ವಜನಿಕರಿಗೆ ವಿದ್ಯುತ್ ದೀಪ ಅಥವಾ ನೀರನ್ನು ಸರಬರಾಜು ಮಾಡುವಂಥ ಯಾವುದೇ ಕೈಗಾರಿಕೆ, ವ್ಯವಹಾರ ಅಥವಾ ಉದ್ಯಮಕ್ಕೆ;

(ಗ) ರೈಲ್ವೆಯಲ್ಲಿನ ಊಟದ ಬಂಡಿಗಳು;

(ಘ) ರೋಗಿ, ದುರ್ಬಲ ಅಥವಾ ಮಾನಸಿಕವಾಗಿ ಅನರ್ಹರ ಶುಶ್ರೂಷೆ ಅಥವಾ ಪಾಲನೆಗಾಗಿ ಕಾರ್ಯಸಂಸ್ಥೆಗಳು;

(ಘಘ) ಭಾರತದಲ್ಲಿ ಆಹಾರ ನಿಗಮದ ಕಾರ್ಯಸಂಸ್ಥೆಗಳು

(ಙ) ಮೂರಕ್ಕಿಂತ ಹೆಚ್ಚಿಲ್ಲದ ವ್ಯಕ್ತಿಗಳು ನಿಯೋಜಿತವಾಗಿರುವಂಥ ನ್ಯಾಯಾವಾದಿಗಳ ಮತ್ತು ವೈದ್ಯಕೀಯ ವೃತ್ತಿಗರ ಕಚೇರಿಗಳು

(ಚ) ಬ್ಯಾಕಿಂಗ್ ಕಂಪನಿಯ ಕಚೇರಿಗಳು

(ಛ) ಹಿಂದೆ ಹೇಳಿದ (ಕ) ದಿಂದ (ಚ) ಖಂಡಗಳಲ್ಲಿ ನಮೂದಿಸಿದ ಯಾವುದೇ ಕಾರ್ಯಸಂಸ್ಥೆಯ ವ್ಯವಹಾರದಲ್ಲಿ ನಿಯೋಜಿತನಾದ ಯಾವನೇ ವ್ಯಕ್ತಿ;

(ಜ) ಯಾವುದೇ ಕಾರ್ಯಸಂಸ್ಥೆಯಲ್ಲಿ ವ್ಯವಸ್ಥಾಪನಾ ಸ್ಥಾನಗಳಲ್ಲಿರುವ ವ್ಯಕ್ತಿಗಳು

(ಝ) ಚಾಲಕರು, ಉಸ್ತುವಾರಿ ಮಾಡುವವರು, ಪಹರೆ ಮತ್ತು ರಕ್ಷಣಾ ಸಿಬ್ಬಂದಿ ಅಥವಾ ಪ್ರಚಾರಕರಾಗಿರುವಂಥ ಯಾವ ವ್ಯಕ್ತಿಗಳ ಕೆಲಸವು ಅಂತರ್ನಿಹಿತವಾಗಿ ಬಿಟ್ಟು ಬಿಟು ಬರುವುದೋ ಅಂಥ ವ್ಯಕ್ತಿಗಳು; ಮತ್ತು

(ಞ) ಸರಕುಗಳ ರವಾನೆಗಾಗಿ ಜವಬ್ದಾರರಾಗಿರುವ ಸರಕು ಖಾಲಿ ಮಾಡುವ ಮತ್ತು ರವಾನೆ ಗುಮಾಸ್ತರುಗಳಂಥ ಪೂರ್ವಭಾವೀ ಅಥವಾ ಪೂರಕ ಕೆಲಸದಲ್ಲಿ ನೇರವಾಗಿ ತೊಡಗಿರುವ ವ್ಯಕ್ತಿಗಳು;

ಇವರಿಗೆ/ ಇವುಗಳಿಗೆ ಅನ್ವಯವಾಗತಕ್ಕದ್ದಲ್ಲ;

(2) 11ನೇ ಪ್ರಕರಣ ಅಥವಾ 12ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ,–

(ಕ) ಮುಖ್ಯವಾಗಿ ಔಷಧಿಗಳು ಅಥವಾ ವೈದ್ಯಕೀಯ ಅಥವಾ ಶಸ್ತ್ರಚಿಕಿತ್ಸಾ ಅಗತ್ಯತೆಗಳು ಅಥವಾ ಸಾಧನ ಸಾಮಾಗ್ರಿಗಳಲ್ಲಿ ವ್ಯವಹರಿಸುತ್ತಿರುವ ಅಂಗಡಿಗಳು;

(ಖ) ಕ್ಲಬ್ಬುಗಳು, ವಸತಿ, ಹೋಟೆಲುಗಳು, ಭೋಜನ ಗೃಹಗಳು, ಶಾಲೆಗಳು ಮತ್ತು ಕಾಲೇಜುಗಳಿಗೆ ಲಗತ್ತಾದ ಹಾಸ್ಟೆಲುಗಳು ಮತ್ತು ವಿದ್ಯಾರ್ಥಿಗಳು ಮತ್ತು ನಿವಾಸಿ ಮಾಸ್ತರುಗಳ ಊಟ ಮತ್ತು ವಸತಿಗೆ ಸಂಬಂಧಿಸಿದ ಬೋರ್ಡಿಂಗ್ ಶಾಲೆಯಲ್ಲಿ ನಿರ್ವಹಿಸಿಕೊಂಡು ಬರಲಾದ ಕಾರ್ಯಸಂಸ್ಥೆಗಳು;

– ಇವುಗಳಿಗೆ ಅನ್ವಯವಾಗತಕ್ಕದ್ದಲ್ಲ

**ವಿವರಣೆ:** 'ವಸತಿ ಹೋಟಲು' ಎಂದರೆ ಪ್ರಯಾಣಿಕನಿಗೆ ಅಥವಾ ಸಾರ್ವಜನಿಕ ಅಥವಾ ಯಾವನೇ ಸಾರ್ವಜನಿಕ ಅಥವಾ ಸಾರ್ವಜನಿಕ ವರ್ಗದ ಸದಸ್ಯನಿಗೆ ಹಣದ ಮೊತ್ತವನ್ನು ಸಂದಾಯ ಮಾಡಿದ ಮೇಲೆ ವಾಸದ ಸ್ಥಳಾವಕಾಶ ಅಥವಾ ಊಟದ ಸರಬರಾಜಿಗಾಗಿ ಸದ್ಭಾವನೆಯಿಂದ ವ್ಯವಹಾರವನ್ನು ನಡೆಸಲಾಗುತ್ತಿರುವ ಯಾವುದೇ ಆವರಣ;

(ಗ) ರೈಲ್ವೆ ನಿಲ್ದಾಣಗಳು, ಬಸ್ ನಿಲ್ದಾಣಗಳು, ಬಂದರುಗಳು, ಮತ್ತು ವಿಮಾನ ನಿಲ್ದಾಣಗಳಲ್ಲಿನ ಸ್ಟಾಲುಗಳು ಮತ್ತು ಉಪಹಾರ ಕೋಣೆಗಳು;

(ಘ) ಕ್ಷೌರಿಕರು ಮತ್ತು ಹೇರ್ ಡ್ರೆಸರುಗಳ ಅಂಗಡಿಗಳು;

(ಙ) ಮುಖ್ಯವಾಗಿ ಮಾಂಸ, ಮೀನು, ಕೋಳಿ ಮೊಟ್ಟೆಗಳು, ಡೈರಿ ಉತ್ಪನ್ನಗಳು (ತುಪ್ಪವನ್ನು ಹೊರತುಪಡಿಸಿ) ಬ್ರೆಡ್ದು, ಮಿಠಾಯಿ, ಸಿಹಿತಿಂಡಿಗಳು, ಚಾಕಲೇಟುಗಳು, ಐಸ್, ಐಸ್‌ಕ್ರೀಮು, ಬೇಯಿಸಿದ ಆಹಾರ, ಹಣ್ಣುಗಳು, ಹೂವುಗಳು, ತರಕಾರಿಗಳು ಮತ್ತು ಹಸಿರು ಮೇವು– ಇವುಗಳಲ್ಲಿ ವ್ಯವಹಾರ ನಡೆಸುತ್ತಿರುವ ಅಂಗಡಿಗಳು;

(ಚ) ಶವ ಸಂಸ್ಕಾರಗಳು, ಹೂಳುವುದು ಅಥವಾ ಶವದಹನಗಳಿಗಾಗಿ ಅಗತ್ಯವಾದ ವಸ್ತುಗಳಲ್ಲಿ ವ್ಯವಹಾರ ನಡೆಸುತ್ತಿರುವ ಅಂಗಡಿಗಳು;

(ಛ) ಆವರಣದಲ್ಲಿ ಬಳಸುವುದಕ್ಕಾಗಿ ಚಿಲ್ಲರೆಯಾಗಿ ಮಾರಲಾಗುವ ಪಾನಂ, ವೀಳ್ಯದೆಲೆ, ಬೀಡಿಗಳು ಅಥವಾ ಸಿಗರೇಟುಗಳೊಡನೆ ಪಾನು, ದ್ರವ ಉಪಹಾರಗಳಲ್ಲಿ ವ್ಯವಹಾರ ನಡೆಸುತ್ತಿರುವ ಅಂಗಡಿಗಳು;

(ಜ) ವೃತ್ತಪತ್ರಿಕೆಗಳು ಅಥವಾ ನಿಯತಕಾಲಿಕಗಳಲ್ಲಿ ವ್ಯವಹಾರ ನಡೆಸುತ್ತಿರುವ ಅಂಗಡಿಗಳು, ವೃತ್ತಪತ್ರಿಕಾ ಕಚೇರಿಗಳಲ್ಲಿನ ಸಂಪಾದನ ವಿಭಾಗಗಳು ಮತ್ತು ವಾರ್ತಾ ಏಜೆನ್ಸಿಗಳ ಕಚೇರಿಗಳು;

(ಝ) ಸಿನಿಮಾಗಳು, ಥಿಯೇಟರುಗಳು ಮತ್ತು ಸಾರ್ವಜನಿಕ ಮನೋರಂಜನೆಯ ಇತರ ಸ್ಥಳಗಳು ಮತ್ತು ಅಂಥ ಸಿನಿಮಾಗಳು ಥಿಯೇಟರುಗಳು ಮತ್ತು ಸಾರ್ವಜನಿಕ ಮನೋರಂಜನಾ ಸ್ಥಳಗಳಿಗೆ ಲಗತ್ತಾದ ಸ್ಟಾಲುಗಳು ಮತ್ತು ಉಪಹಾರ ಕೋಣೆಗಳು;

(ಞ) ಪೆಟ್ರೋಲಿನ ಚಿಲ್ಲರೆ ಮಾರಾಟಕ್ಕಾಗಿನ ಕಾರ್ಯಸಂಸ್ಥೆಗಳು;

(ಟ) ರೆಜಿಮೆಂಟಲ್ ಸಂಸ್ಥೆಗಳಲ್ಲಿನ ಅಂಗಡಿಗಳು, ದಂಡು ಪ್ರದೇಶಗಳಲ್ಲಿನ ಗ್ಯಾರಿಸನ್ ಅಂಗಡಿಗಳು ಮತ್ತು ಸೇನಾ ಕ್ಯಾಂಟೀನುಗಳು:

(ಠ) ಚರ್ಮ ಹದ ಮಾಡುವ ಸ್ಥಳಗಳು:

(ಡ) ವಸ್ತುಪ್ರದರ್ಶನ ಅಥವಾ ಪ್ರದರ್ಶನದ ಮುಖ್ಯ ಉದ್ದೇಶಕ್ಕೆ ಪೂರಕ ಅಥವಾ ಸಹಾಯಕವಾದ ಚಿಲ್ಲರೆ ವ್ಯಾಪರವಾಗಿದ್ದರೆ ವಸ್ತುಪ್ರದರ್ಶನ ಅಥವಾ ಪ್ರದರ್ಶನದಲ್ಲಿ ನಡೆಸಲಾಗುತ್ತಿರುವ ಅಂಥ ಚಿಲ್ಲರೆ ವ್ಯಾಪಾರ;

(ಢ) ಕಾರ್ಖಾನೆಗಳ ಅಧಿನಿಯಮ, 1948ರ ಮೇರೆಗೆ ನೋಂದಾಯಿತವಾಗಿಲ್ಲದ ಎಣ್ಣೆ ಗಿರಣಿಗಳು ಮತ್ತು ಹಿಟ್ಟಿನ ಗಿರಣಿಗಳು:

(ಣ) ಇಟ್ಟಿಗೆ ಮತ್ತು ಸುಣ್ಣದ ಗೂಡುಗಳು;

(ತ) ಕಂಚು ಮತ್ತು ಹಿತ್ತಾಳೆಯ ಮನೆ ಬಳಕೆಯ ಪಾತ್ರೆಗಳ ತಯಾರಿಕೆಯಲ್ಲಿ ಕುಲುಮೆಗಳಲ್ಲಿ ಕರಗಿಸುವ ಕಾರ್ಯವಿಧಾನಕ್ಕೆ ಸೀಮಿತವಾಗಿರುಷ್ಟರ ಮಟ್ಟಿಗೆ ವಾಣಿಜ್ಯ ಕಾರ್ಯಸಂಸ್ಥೆಗಳು;

– ಇವುಗಳಿಗೆ ಅನ್ವಯವಾಗತಕ್ಕದ್ದಲ್ಲ.

(3) (1ನೇ) ಉಪ–ಪ್ರಕರಣ ಅಥವಾ (2) ನೇ ಉಪ–ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕಾರ್ಯಸಂಸ್ಥೆ ಅಥವಾ ವ್ಯಕ್ತಿಯು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾಂಥ ಈ ಅಧಿನಿಯಮದ ಉಪಬಂಧಗಳ ಪ್ರವರ್ತನೆಯಿಂದ ವಿನಾಯಿತಿಗೊಳ್ಳತಕ್ಕದ್ದಲ್ಲವೆಂದು ಮತ್ತು ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಈ ಅಧಿನಿಯಮದ ಉಪಬಂಧಗಳು ಅಂಥ ಕಾರ್ಯಸಂಸ್ಥೆ ಅಥವಾ ವ್ಯಕ್ತಿಗೆ ಅನ್ವಯವಾಗುತಕ್ಕದ್ದೆಂದು ಘೋಷಿಸಬಹುದು.

(4) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಯಾವ ಕಾರ್ಯಸಂಸ್ಥೆಯಲ್ಲಿ ಕೆಲಸದ ಸ್ವರೂಪವು,–

(i) ಬಿಟ್ಟ ಬಿಟ್ಟು ಬರುವುದೋ, ಅಥವಾ

(ii) ಕಾಲಿಕವಾಗಿರುವುದೋ, ಅಥವಾ

(iii) ಎರಡು ತಿಂಗಳುಗಳಿಗೆ ಮೀರದ ಕಡಿಮೆ ಅವಧಿಯಾಗಿರುವುದೋ ಮತ್ತು ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸಲಿ ಕಷ್ಟವಾಗಿರುವುದೋ–

ಆ ಕಾರ್ಯಸಂಸ್ಥೆಗಳನ್ನು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉಪಬಂಧದಿಂದ ವಿನಾಯಿತಿಗೊಳಿಸಬಹುದು.

## ಅಧ್ಯಾಯ–II

## ಕಾರ್ಯಸಂಸ್ಥೆಗಳ ನೋಂದಣಿ

**4. ಕಾರ್ಯಸಂಸ್ಥೆಗಳ ನೋಂದಣಿ:–** (1) (3)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಪ್ರತಿಯೊಂದು ಕಾರ್ಯಸಂಸ್ಥೆಯ ನಿಯೋಜಕನು ಸಂಬಂಧಪಟ್ಟ ಪ್ರದೇಶದ ಪರಿಶೀಲಕನಿಗೆ ನಿಯಮಿಸಬಹುದಾದಂಥ ಫೀಜುಗಳೊಂದಿಗೆ ನಿಯಮಿಸಿದ ನಮೂನೆಯಲ್ಲಿ,–

(ಕ) ನಿಯೋಜಕನು ಮತ್ತು ವ್ಯವಸ್ಥಾಪಕನು ಯಾವನಾದರೂ ಇದ್ದರೆ ಅವನ ಹೆಸರು;

(ಖ) ಆ ಕಾರ್ಯಸಂಸ್ಥೆಯ ಅಂಚೆ ವಿಳಾಸ;

(ಗ) ಆ ಕಾರ್ಯಸಂಸ್ಥೆಯ ಹೆಸರು ಯಾವುದಾದರೂ ಇದ್ದರೆ;

(ಘ) ನಿಯಮಿಸಬಹುದಾದಂಥ ಇತರ ವಿವರಗಳು–

– ಇವುಗಳನ್ನೊಳಗೊಂಡ ವಿವರ ಪತ್ರವನ್ನು ಕಳುಹಿಸತಕ್ಕದ್ದು;

(2) ಆ ವಿವರಪತ್ರ ಮತ್ತು ಫೀಜುಗಳನ್ನು ಸ್ವೀಕರಿಸಿದ ಮೇಲೆ ಪರಿಶೀಲಕನು ಆ ವಿವರಪತ್ರದ ಸರಿತನದ ಬಗ್ಗೆ ಮನದಟ್ಟುಮಾಡಿಕೊಂಡ ಮೇಲೆ, ನಿಯಸವಿಬಹುದಾದಂಥ ರೀತಿಯಲ್ಲಿ ಕಾರ್ಯಸಂಸ್ಥೆಗಳ ರಿಜಿಸ್ಟರಿನಲ್ಲಿ ಆ ಕಾರ್ಯಸಂಸ್ಥೆಯನ್ನು ನೋಂದಾಯಿಸತಕ್ಕದ್ದು ಮತ್ತು ನಿಯಮಿಸಿದ ನಮೂನೆಯಲ್ಲಿ ನಿಯೋಜಕನಿಗೆ ನೋಂದಣಿ ಪ್ರಮಾಣ ಪತ್ರವನ್ನು ಕೊಡತಕ್ಕದ್ದು, ನೋಂದಣಿ ಪ್ರಮಾಣ ಪತ್ರವನ್ನು ಆ ಕಾರ್ಯ ಸಂಸ್ಥೆಯಲ್ಲಿ ಎದ್ದು ಕಾಣುವಂತೆ ಪ್ರದರ್ಶಿಸತಕ್ಕದ್ದು.

(3) ಈ ಕೆಳಗಿನ (1) ನೇ ಅಂಕಣದಲ್ಲಿ ನಮೂದಿಸಿದ ಕಾರ್ಯಸಂಸ್ಥೆಗೆ ಸಂಬಂಧಿಸಿದಂತೆ (2)ನೇ ಅಂಕಣದಲ್ಲಿ ನಮೂದಿಸಿದ ದಿನಾಂಕದಿಂದ ಮೂವತ್ತು ದಿವಸದೊಳಗೆ ಫೀಜುಗಳೊಂದಿಗೆ ಆ ವಿವರಪತ್ರವನ್ನು (1)ನೇ ಉಪಪ್ರಕರಣ ಮೇರೆಗೆ ಪರಿಶೀಲಕನಿಗೆ ಕಳುಹಿಸತಕ್ಕದ್ದು.

ಯಾವ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯು ಪ್ರಾರಂಭವಾಗಬೇಕೋ ಆ ದಿನಾಂಕ

ಕಾರ್ಯಸಂಸ್ಥೆಗಳು:

| (1) | | (2) | |
|---|---|---|---|
| (i) | ಈ ಅಧಿನಿಯಮವು ಜಾರಿಗೆ ಬರುವಂಥ ದಿನಾಂಕದಂದು ಅಸ್ತಿತ್ವದಲ್ಲಿರುವ ಕಾರ್ಯಸಂಸ್ಥೆ. | (i) | ಈ ಅಧಿನಿಯಮ ಜಾರಿಗೆ ಬರುವಂಥ ದಿನಾಂಕ |
| (ii) | ಹೊಸ ಕಾರ್ಯಸಂಸ್ಥೆಗಳು | (ii) | ಕಾರ್ಯಸಂಸ್ಥೆಯು ಅದರ ಕೆಲಸವನ್ನು ಪ್ರಾರಂಭಿಸುವ ದಿನಾಂಕ |

(4) (2)ನೇ ಉಪ–ಪ್ರಕರಣದ ಮೇರೆಗೆ ಕೊಟ್ಟ ನೋಂದಣಿ ಪ್ರಮಾಣಪತ್ರವು ಒಂದು ವರ್ಷಕ್ಕೆ ಸಿಂಧುವಾಗಿರತಕ್ಕದ್ದು ಮತ್ತು ವರ್ಷದಿಂದ ವರ್ಷಕ್ಕೆ ನಿಯಮಿಸಬಹುದಾದಂಥ ಪೀಜುಗಳ ಸಂದಾಯ ಮೇಲೆ ಮತ್ತು ಅಂಥ ರೀತಿಯಲ್ಲಿ ನವೀಕರಿಸತಕ್ಕದ್ದು.

(5) ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 1982ರ ಪ್ರಾರಂಭಕ್ಕೆ ಮುಂಚೆ, ನೋಂದಾಯಿಸಲಾದ ಪ್ರತಿಯೊಂದು ಕಾರ್ಯಸಂಸ್ಥೆಯ ನೋಂದಣಿಯು ಅಂಥ ಪ್ರಾರಂಭವಾದ ಮೇಲೆ ಕೊನೆಗೊಳ್ಳತಕ್ಕದ್ದು ಮತ್ತು ಅಂಥ ಪ್ರತಿಯೊಂದ ಕಾರ್ಯಸಂಸ್ಥೆ ನಿಯೋಜಕನು (4)ನೇ ಉಪ–ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಅಂಥ ಪ್ರಾರಂಭದ ತೊಂಬತ್ತು ದಿವಸಗಳ ಒಳಗೆ ಅವನ ಲೈಸನ್ಸ್‌ನ್ನು ನವೀಕರಿಸತಕ್ಕುದ್ದು.

**5. ಪರಿಶೀಲಕನಿಗೆ ಬದಲಾವಣೆಯನ್ನು ತಿಳಿಸತಕ್ಕದ್ದು.–** ಬದಲಾವಣೆಯು ಆದ ತರುವಾಯ ಹದಿನೈದು ದಿವಸಗಳೊಳಗೆ 4ನೇ ಪ್ರಕರಣದ ಮೇರೆಗಿನ ನಿಯೋಜಕನ ವಿವರ ಪತ್ರದಲ್ಲಿ ಅಡಕವಾದ ಯಾವುದೇ ಮಾಹಿತಿಗೆ ಸಂಬಂಧಿಸಿದಂತೆ ಯಾವುದೇ ಬದಲಾವಣೆಯನ್ನು ನಿಯಮಿಸಿದ ನಮೂನೆಯಲ್ಲಿ ಪರಿಶೀಲಕನಿಗೆ ತಿಳಿಸುವುದು ಅವನ ಕರ್ತವ್ಯವಾಗಿರತಕ್ಕದ್ದು, ಪರಿಶೀಲಕನು, ಅಂಥ ನೋಟೀಸನ್ನು ಸ್ವೀಕರಿಸಿದ ಮೇಲೆ ಮತ್ತು ಅದರ ಸರಿತನದ ಬಗ್ಗೆ ಮನದಟ್ಟುಮಾಡಿಕೊಂಡ ಮೇಲೆ ಕಾರ್ಯಸಂಸ್ಥೆಗಳ ರಿಜಿಸ್ಟರಿನಲ್ಲಿ ಆ ಬದಲಾವಣೆಯನ್ನು ಮಾಡತಕ್ಕದ್ದು, ಮತ್ತು ನೋಂದಣಿ ಪ್ರಮಾಣಪತ್ರವನ್ನು ತಿದ್ದುಪಡಿ ಮಾಡತಕ್ಕದ್ದು ಅಥವಾ ಅವಶ್ಯವಾದರೆ ಹೊಸ ನೋಂದಣಿ ಪ್ರಮಾಣ ಪತ್ರವನ್ನು ಕೊಡತಕ್ಕದ್ದು.

**6. ಕಾರ್ಯಸಂಸ್ಥೆಯನ್ನು ಮುಚ್ಚುವ ಬಗ್ಗೆ ಪರಿಶೀಲಕನಿಗೆ ತಿಳಿಸತಕ್ಕದ್ದು:–** ನಿಯೋಜಕನು ಅವನ ಕಾರ್ಯಸಂಸ್ಥೆಯನ್ನು ಮುಚ್ಚಿದ ಹದಿನೈದು ದಿವಸಗಳೊಳಗಾಗಿ ಅಂಥ ಮುಚ್ಚುವಿಕೆಯ ದಿನಾಂಕವನ್ನು ಪರಿಶೀಲಕನಿಗೆ ಬರಹದಲ್ಲಿ ತಿಳಿಸತಕ್ಕದ್ದು ಮತ್ತು ನೋಂದಣಿ ಪ್ರಮಾಣಪತ್ರವನ್ನು ಹಿಂತಿರುಗಿಸತಕ್ಕದ್ದು. ಪರಿಶೀಲಕನು ಮಾಹಿತಿಯನ್ನು ಸ್ವೀಕರಿಸಿದ ಮೇಲೆ ಮತ್ತು ಅದರ ಸರಿತನದ ಬಗ್ಗೆ ಮನದಟ್ಟುಮಾಡಿಕೊಂಡ

ಮೇಲೆ ಅಂಥ ಕಾರ್ಯಸಂಸ್ಥೆಯನ್ನು ಕಾರ್ಯಸಂಸ್ಥೆಗಳ ರಿಜಿಸ್ಟ್ರರಿನಿಂದ ತೆಗೆದು ಹಾಕತಕ್ಕದ್ದು ಮತ್ತು ನೋಂದಣಿ ಪ್ರಮಾಣಪತ್ರವನ್ನು ರದ್ದುಪಡಿಸತಕ್ಕದ್ದು:

ಪರಂತು ಪರಿಶೀಲಕನು ಮಾಹಿತಿಯನ್ನು ಸ್ವೀಕರಿಸದಿದ್ದರೆ ಆದರೆ ಕಾರ್ಯಸಂಸ್ಥೆಯನ್ನು ಮುಚ್ಚಲಾಗಿದೆಯೆಂದು ಅಥವಾ ಮನದಟ್ಟು ಮಾಡಿಕೊಂಡರೆ ಅವನು ಅಂಥ ರಿಜಿಸ್ಟರಿನಿಂದ ಅಂಥ ಕಾರ್ಯಸಂಸ್ಥೆಯನ್ನು ತೆಗೆದುಹಾಕಬಹುದು.

## ಅಧ್ಯಾಯ–III

## ಕೆಲಸದ ವೇಳೆಗಳು

**7. ದೈನಂದಿನ ಮತ್ತು ವಾರದ ವೇಳೆಗಳು:–** ಯಾವುದೇ ಕಾರ್ಯಸಂಸ್ಥೆಯಲ್ಲಿ ಯಾವನೇ ನಿಯೋಜಿತನನ್ನು ಯಾವುದೇ ದಿವಸದಂದು ಒಂಬತ್ತು ಗಂಟೆಗಳಿಗಿಂತ ಅಥವಾ ಯಾವುದೇ ವಾರದಲ್ಲಿ ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚಾಗಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವನಿಗೆ ಹಾಗೆ ಮಾಡಲು ಅನುಮತಿಸತಕ್ಕದ್ದಲ್ಲ:

ಪರಂತು, ಅಧಿಕ ಕಾಲಿಕ ಕೆಲಸವನ್ನು ಒಳಗೊಂಡ ಕೆಲಸದ ಗಂಟೆಗಳ ಒಟ್ಟು ಸಂಖ್ಯೆಯು ದಾಸ್ತಾನಿನ ಲೆಕ್ಕ ತೆಗೆದುಕೊಳ್ಳುವುದು ಮತ್ತು ಲೆಕ್ಕಪತ್ರಗಳ ತಯಾರಿಕೆಯ ದಿವಸಗಳನ್ನು ಹೊರತುಪಡಿಸಿ, ಯಾವುದೇ ದಿವಸದಲ್ಲಿ ಹತ್ತು ಗಂಟೆಗಳನ್ನು ಮೀರತಕ್ಕದ್ದಲ್ಲ:

ಮತ್ತು ಪರಂತು ನಿಯೋಜಿತನು ಕೆಲಸ ಮಾಡಿದ ಅಧಿಕ ಕಾಲಿಕ ಗಂಟೆಗಳ ಒಟ್ಟು ಸಂಖ್ಯೆಯು ಮೂರು ತಿಂಗಳುಗಳ ಅವಧಿಯಲ್ಲಿ ಐವತ್ತು ಗಂಟೆಗಳನ್ನು ಮೀರಕೂಡದು.

(2) ಹನ್ನೆರಡು ಮತ್ತು ಹದಿನೈದು ವರ್ಷಗಳ ನಡುವಣ ಯಾವನೇ ಯುವ ವ್ಯಕ್ತಿಯನ್ನು ದಿವಸದಲ್ಲಿ ಐದು ಗಂಟೆಗಳಿಗಿಂಥ ಹೆಚ್ಚಾಗಿ ಯಾವುದೇ ಕಾರ್ಯಸಂಸ್ಥೆಯಲ್ಲಿ ಕೆಲಸ ಮಾಡಲು ಅನುಮತಿಸತಕ್ಕದ್ದು.

**8. ಅಧಿಕ ಕಾಲಿಕ ಕೆಲಸಕ್ಕಾಗಿ ಹೆಚ್ಚಿನ ಮಜೂರಿಗಳು:–** (1) ನಿಯೋಜಿತನು ಯಾವುದೇ ಕಾರ್ಯಸಂಸ್ಥೆಯಲ್ಲಿ ಯಾವುದೇ ದಿವಸದಂದು ಒಂಬತ್ತು ಗಂಟೆಗಳಿಗಿಂತ ಹೆಚ್ಚಾಗಿ ಅಥವಾ ಯಾವುದೇ ವಾರದಲ್ಲಿ ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚಾಗಿ ಕೆಲಸ ಮಾಡುವಲ್ಲಿ ಅವನು ಅಂಥ ಅಧಿಕ ಕಾಲಿಕ ಕೆಲಸಕ್ಕೆ ಸಂಬಂದಿಸಿದಂತೆ ಸಾಮಾನ್ಯ ಮಜೂರಿಗಳ ದರದ ಎರಡರಷ್ಟು ಮಜೂರಿಗಳಿಗೆ ಹಕ್ಕುಳ್ಳನಾಗಿರತಕ್ಕದ್ದು.

(2) ಈ ಪ್ರಕರಣದ ಉದ್ದೇಶಗಳಿಗಾಗಿ 'ಸಾಮಾನ್ಯ ಮಜೂರಿಗಳು' ಎಂದರೆ ಆಹಾರ ಧಾನ್ಯಗಳು ಮತ್ತು ಇತರ ವಸ್ತುಗಳನ್ನು ಕೆಲಸಗಾರರಿಗೆ ಮಾರಾಟದ ಮೂಲಕ ಒದಗಿಬರುವ ಪ್ರಯೋಜನಕ್ಕೆ ಸಮಾನ ನಗದನ್ನು ಒಳಗೊಂಡ ಮೂಲ ಮಜೂರಿಗಳು ಮತ್ತು ಅಂಥ ಭತ್ಯೆಗಳು ಆದರೆ ಬೋನಸನ್ನು ಒಳಗೊಳ್ಳುವುದಿಲ್ಲ.

(3) ಆಹಾರ ಧಾನ್ಯಗಳು ಮತ್ತು ಇತರ ವಸ್ತುಗಳ ರಿಯಾಯಿತಿ ಮಾರಾಟದ ಮೂಲಕ ಒದಗಿಬರುವ ಪ್ರಯೋಜನಕ್ಕೆ ಸಮಾನ ನಗದನ್ನು ನಿಗದಿತ ಕುಟುಂಬಕ್ಕೆ ಕೊಡಬಹುದಾದ ಆಹಾರ ಧಾನ್ಯಗಳ ಮತ್ತು ಇತರ ವಸ್ತುಗಳ ಗರಿಷ್ಠ ಪ್ರಮಾಣದ ಆಧಾರದ ಮೇಲೆ ನಿಯಮಿಸಬಹುದಾದಷ್ಟು ಸಲ ಲೆಕ್ಕ ಹಾಕತಕ್ಕದ್ದು.

**ವಿವರಣೆ 1:–** 'ನಿಗದಿತ ಕುಟುಂಬ' ಎಂದರೆ ಒಟ್ಟು ಮೂರು ವಯಸ್ಕ ಬಳಕೆ ಘಟಕಗಳು ಬೇಕಾಗುವ ನಿಯೋಜಿತ ಅವನ ಅಥವಾ ಅವಳ ಗಂಡ/ಹೆಂಡತಿ ಮತ್ತು ಹದಿನಾಲ್ಕು ವರ್ಷಗಳ ವಯಸ್ಸಿಗಿಂತ ಕಡಿಮೆಯ ಎರಡು ಮಕ್ಕಳನ್ನು ಒಳಗೊಂಡ ಕುಟುಂಬ.

**ವಿವರಣೆ 2:** **'ವಯಸ್ಕರ ಬಳಕೆ ಘಟಕ'** ಎಂದರೆ ಹದಿನಾಲ್ಕು ವರ್ಷಗಳ ವಯಸ್ಸಿಗೆ ಮೇಲ್ಪಟ್ಟ ಪುರುಷನ ಬಳಕೆ ಘಟಕ ಮತ್ತು ಹದಿನಾಲ್ಕು ವರ್ಷಗಳ ಕಡಿಮೆ ಇರುವ ಮಗುವಿನದನ್ನು ಒಂದು ವಯಸ್ಕನ ಬಳಕೆ ಘಟಕದ ಅನುಕ್ರಮವಾದ 8 ಮತ್ತು 6ರ ದರಗಳಲ್ಲಿ ಲೆಕ್ಕ ಹಾಕತಕ್ಕದ್ದು.

(4) ರಾಜ್ಯ ಸರ್ಕಾರವು,–

(ಕ) ಆಹಾರ ಧಾನ್ಯಗಳು ಮತ್ತು ಇತರ ವಸ್ತುಗಳ ರಿಯಾಯಿತಿ ಮಾರಾಟದ ಮೂಲಕ ಕೆಲಸಗಾರನಿಗೆ ಒದಗಿಸಿರುವ ಪ್ರಯೋಜನಕ್ಕೆ ಸಮಾನವಾದ ನಗದನ್ನು ಲೆಕ್ಕಹಾಕ ತಕ್ಕ ರೀತಿ;

(ಖ) ಈ ಅಧಿನಿಯಮದ ಉಪಬಂಧಗಳ ಪಾಲನೆಯನ್ನು ಸುನಿಶ್ಚಿತಗೊಳಿಸಿಕೊಳ್ಳುವ ಉದ್ದೇಶಕ್ಕಾಗಿ ಕಾರ್ಯಸಂಸ್ಥೆಯಲ್ಲಿ ಇಟ್ಟುಕೊಂಡು ಬರತಕ್ಕ ರಿಜಿಸ್ಟರು, ಇವುಗಳನ್ನು ನಿಯಮಿಸುವ ನಿಯಮಗಳನ್ನು ರಚಿಸಬಹುದು.

**9. ವಿಶ್ರಾಂತಿಗಾಗಿ ಬಿಡುವು:–** ಪ್ರತಿ ದಿವಸ ಕಾರ್ಯಸಂಸ್ಥೆಯಲ್ಲಿನ ನಿಯೋಜಿತನ ಕೆಲಸದ ಅವಧಿಗಳನ್ನು, ಯಾವುದೇ ಅವಧಿಯು ಐದು ಗಂಟೆಗಳನ್ನು ಮೀರದಂತೆ ನಿಗದಿ ಮಾಡತಕ್ಕದ್ದು ಮತ್ತು ಅಂಥ ಯಾವನೇ ವ್ಯಕ್ತಿಯು ಅವನು ಕನಿಷ್ಟ ಪಕ್ಷ ಒಂದು ಗಂಟೆ ವಿಶ್ರಾಂತಿಯ ಬಿಡುವನ್ನು ಹೊಂದಿರುವುದಕ್ಕೆ ಮುಂಚೆ ಐದು ಗಂಟೆಗಳನ್ನು ಮೀರಿ ಕೆಲಸ ಮಾಡತಕ್ಕದ್ದಲ್ಲ.

**10. ಹರವು:–** ಕಾರ್ಯಸಂಸ್ಥೆಯಲ್ಲಿನ ನಿಯೋಜಿತನ ಕೆಲಸದ ಅವಧಿಗಳನ್ನು ಅವನ ವಿಶ್ರಾಂತಿಗಾಗಿನ ಬಿಡುವನ್ನೊಳಗೊಂಡು ಅವುಗಳ ಯವುದೇ ದಿವಸದಲ್ಲಿ ಹನ್ನೆರಡು ಗಂಟೆಗಳಿಗಿಂತ ಹೆಚ್ಚಾಗಿ ಹರಡಿರತಕ್ಕುದಲ್ಲ.

**11. ತೆರೆಯುವ ಮತ್ತು ಮುಚ್ಚುವ ವೇಳೆಗಳು:–** (1) ಯಾವುದೇ ದಿವಸದಂದು ಯಾವುದೇ ಕಾರ್ಯಸಂಸ್ಥೆಯನ್ನು ರಾಜ್ಯ ಸರ್ಕಾರವು ಹೊರಡಿಸಿದ ಅಧಿಸೂಚನೆಯ ಮೂಲಕ ನಿಗದಿಪಡಿಸಬಹುದಾದಂಥ ವೇಳೆಗಳಿಗಿಂತ ಮುಂಚೆ ತೆರೆಯತಕ್ಕುದಲ್ಲ ಮತ್ತು ಅಂಥ ವೇಳೆಗಳ ತರುವಾಯ ಮುಚ್ಚುತಕ್ಕದ್ದಲ್ಲ.

ಯಾವುದೇ ಕಾರ್ಯಸಂಸ್ಥೆಯನ್ನು ಮುಚ್ಚುವುದಕ್ಕಾಗಿ ನಿಗದಿಪಡಿಸಿದ ವೇಳೆಯಲ್ಲಿ ಅದರಲ್ಲಿ ಉಪಚರಿಸಲಾಗುತ್ತಿದ್ದ ಅಥವಾ ಉಪಚಾರಕ್ಕಗಿ ಕಾಯುತ್ತಿದ್ದ ಯಾವನೇ ಗಿರಾಕಿಗೆ ಅಂಥ ವೇಳೆಯ ನಿಕಟೋತ್ತರದ ಕಾಲು ಗಂಟೆಯ ಅವಧಿಯಲ್ಲಿ ಉಪಚರಿಸಬಹುದು.

(2) (1)ನೇ ಉಪ–ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂದೆ, ರಾಜ್ಯ ಸರ್ಕಾರವು ನಿಯಮಿಸಿದ ರೀತಿಯಲ್ಲಿ ವಿಚಾರಣೆಯನ್ನು ನಡೆಸಪಡಿಸತಕ್ಕದ್ದ:

(3) ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಕ್ಕಾಗಿ ಬೇರೆ ಬೇರೆ ಕಾರ್ಯಸಂಸ್ಥೆಗಳು ಅಥವಾ ಕಾರ್ಯಸಂಸ್ಥೆಯ ಬೇರೆ ಬೇರೆ ವರ್ಗಗಳಿಗೆ ಅಥವಾ ಬೇರೆ ಪ್ರದೇಶಗಳಿಗಾಗಿ ಅಥವಾ ವರ್ಷದ ಬೇರೆ ಬೇರೆ ಕಾಲಗಳಿಗೆ ಬೇರೆ ಬೇರೆ ವೇಳೆಗಳನ್ನು ನಿಗದಿಪಡಿಸಬಹುದು

**12. ವಾರದ ರಜಾ ದಿವಸಗಳು:–** (1) ಪ್ರತಿಯೊಂದು ಕಾರ್ಯಸಂಸ್ಥೆಯನ್ನು ವಾರದಲ್ಲಿ ಒಂದು ದಿವಸ ಮುಚ್ಚಿರತಕ್ಕದ್ದ, ನಿಯೋಜಕನು ಅಂಥ ದಿನಾಂಕವನ್ನು ಆ ವರ್ಷದ ಪ್ರಾರಂಭದಲ್ಲಿ ನಿಗದಿಪಡಿಸತಕ್ಕದ್ದು. ಅದನ್ನು ಪರಿಶೀಲಕನಿಗೆ ತಿಳಿಸತಕ್ಕದ್ದು ಮತ್ತು ಅದನ್ನು ಕಾರ್ಯಸಂಸ್ಥೆಯಲ್ಲಿ ಎದ್ದು ಕಾಣುವ ಸ್ಥಳದಲ್ಲಿ ಎದ್ದು ಕಾಣುವಂತೆ ಪ್ರದರ್ಶಿಸಿದ ನೋಟಿಸಿನಲ್ಲಿ ಅದನ್ನು ನಿರ್ದಿಷ್ಟಪಡಿಸತಕ್ಕದ್ದು. ನಿಯೋಜಕನು ಅಂಥ ದಿನಾಂಕವನ್ನು ಮೂರು ತಿಂಗಳಿಗೆ ಒಂದು ಬಾರಿಗಿಂತ ಹೆಚ್ಚು ಬದಲಾಯಿಸತಕ್ಕದ್ದಲ್ಲ; ಆ ಬದಲಾವಣೆಯನ್ನು ಪರಿಶೀಲಕನಿಗೆ ತಿಳಿಸತಕ್ಕದ್ದು ಮತ್ತು ಕಾರ್ಯಸಂಸ್ಥೆಯಲ್ಲಿನ ನೋಟಿಸಿನಲ್ಲಿ ಅವಶ್ಯ ಬದಲಾವಣೆಗಳನ್ನು ಮಾಡತಕ್ಕದ್ದು.

(2) (1)ನೇ ಉಪ–ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ರಾಜ್ಯ ಸರ್ಕಾರವು ಈ ಪ್ರಕರಣದ (3)ನೆ ಉಪ–ಪ್ರಕರಣದ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ಹೆಚ್ಚುವರಿ ಸಿಬ್ಬಂದಿಯನ್ನು ಕಾರ್ಯಸಂಸ್ಥೆಯು ನಿಯೋಜಿಸಿಕೊಂಡಿದೆ ಎಂದು ಅದಕ್ಕೆ ಮನದಟ್ಟಾದರೆ ಆ ಕಾರ್ಯಸಂಸ್ಥೆಯನ್ನು ವಾರದಾದ್ಯಂತ ತೆರೆದಿರಲು ಅನುಮತಿಸಬಹುದು.

(3) ಕಾರ್ಯಸಂಸ್ಥೆಯಲ್ಲಿನ ಪ್ರತಿಯೊಬ್ಬ ನಿಯೋಜಿತನಿಗೆ ವಿಶ್ರಾಂತಿಗಾಗಿನ ರಜೆ ದಿವಸವಾಗಿ ವಾರದಲ್ಲಿ ಕನಿಷ್ಠ ಪಕ್ಷ ಒಂದು ಇಡೀ ದಿನವನ್ನು ಕೊಡತಕ್ಕದ್ದು:

ಪರಂತು ವಾರದಲ್ಲಿ ಒಂದೂವರೆ ದಿವಸಗಳ ವಿಶ್ರಾಂತಿಯನ್ನು ಕೊಟ್ಟಿರುವಂಥ ಕಾರ್ಯಸಂಸ್ಥೆಗಳಲ್ಲಿ ವಿಶ್ರಾಂತಿಯ ಅಂಥ ಅವಧಿಯನ್ನು ಮುಂದುವರಿಸತಕ್ಕದ್ದು.

(4) (3)ನೆ ಉಪ–ಪ್ರಕರಣದ ಮೇರೆಗೆ ನಿಯೋಜಿತನಿಗೆ ಕೊಟ್ಟ ವಾರದ ರಜಾ ದಿವಸದಂದು ಅಥವಾ ಅಂಥ ಕಾರ್ಯಸಂಸ್ಥೆಯು ಮುಚ್ಚಿರುವಂಥ ದಿವಸದಂದು ಅವನ ಕಾರ್ಯಸಂಸ್ಥೆಯ ಕಾರ್ಯವ್ಯವಹಾರಕ್ಕೆ ಸಂಬಂಧಪಟ್ಟ ಯಾವುದೇ ಕೆಲಸಕ್ಕಾಗಿ ನಿಯೋಜಕನು ನಿಯೋಜಿತನನ್ನು ಅವನ ಕಾರ್ಯಸಂಸ್ಥೆಗೆ ಕರೆಯುವುದು ಅಥವಾ ಇತರ ಯಾವುದೇ ಸ್ಥಳದಲ್ಲಿ ನಿಯೋಜಿತನು ಅಲ್ಲಿಗೆ ಹೋಗುವುದು ಕಾನೂನು ಬದ್ಧವಾಗಿರತಕ್ಕದ್ದಲ್ಲ.

(5) (3)ನೇ ಉಪ–ಪ್ರಕರಣದ ಮೇರೆಗೆ ನಿಯೋಜಿತನಿಗೆ ಕೊಟ್ಟ ರಜಾದಿನಕ್ಕಾಗಿ ಯಾವುದೇ ಕಾರ್ಯಸಂಸ್ಥೆಯಲ್ಲಿ ಅವನ ಮಜೂರಿಗಳಿಂದ ಯಾವುದೇ ಕಳೆತವನ್ನು ಮಾಡತಕ್ಕದ್ದಲ್ಲ ಯಾವನೇ ನಿಯೋಜಿತನು ದೈನಂದಿನ ಮಜೂರಿಗಳ ಮೇಲೆ ಯೋಜಿಸಿಕೊಂಡಿದ್ದರೆ ವಾರದ ರಜಾ ದಿವಸಕ್ಕಾಗಿ ಅವನ ಮಜೂರಿಗಳನ್ನು ಹೀಗಿದ್ಯಾಗ್ಯೂ ಸಂದಾಯ ಮಾಡತಕ್ಕದ್ದು.

**13 ಕಾರ್ಯಸಂಸ್ಥೆಗಳ ಹೊರಗಡೆ ಮುಚ್ಚುವ ವೇಳೆಗಳ ತರುವಾಯ ನಿಷೇಧ:–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮಿತಿಯ ಮೂಲಕ ಅಥವಾ ಮೇರೆಗೆ ಉಪಸಂಬಂಧಿಸಿರುವಂತೆ ಹೊರತು ಯಾವನೇ ವ್ಯಕ್ತಿಯು ಬೀದಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಅಥವಾ ಅವರ ಪಕ್ಕದಲ್ಲಿ ಅಂಥ ಬೀದಿ ಅಥವಾ ಸಾರ್ವಜನಿಕ ಸ್ಥಳವು ಇರುವಂಥ ಸ್ಥಳದಲ್ಲಿ ಅದೇ ವರ್ಗದ ಸರಕುಗಳಲ್ಲಿ ವ್ಯವಹರಿಸುವ ಕಾರ್ಯಸಂಸ್ಥೆಗಳನ್ನು ಮುಚ್ಚುವುದಕ್ಕಾಗಿ 11ನೇ ಪ್ರಕರಣದ ಮೇರೆಗೆ ನಿಗದಿಪಡಿಸಿದ ವೇಳೆಯು ತರುವಾಯ ಯಾವುದೇ ಸರಕುಗಳ ಮಾರಾಟವನ್ನು ನಡೆಸತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದಾವುದೂ ವೃತ್ತಪತ್ರಿಕೆಗಳ ಮತ್ತು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ವಿನಾಯಿತಿಗೊಳಿಸಬಹುದಾದಂಥ ಇತರ ವಸ್ತುಗಳ ಮಾರಾಟಕ್ಕೆ ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ–IV

## ಮಜೂರಿಗಳೊಂದಿಗೆ ವಾರ್ಷಿಕ ರಜೆ

**14. ಅಧ್ಯಾಯದ ಅನ್ವಯ:–** ಈ ಅಧ್ಯಾಯದ ಉಪಬಂಧಗಳು, ಯಾವುದೇ ಇತರ ಕಾನೂನಿನ ಮೇರೆಗೆ ಅಥವಾ ಯಾವುದೇ ಐತೀರ್ಪು, ಒಪ್ಪಂದ ಅಥವಾ ಸೇವಾ ಕರಾರಿನ ಮೇರೆಗೆ ನಿಯೋಜಿತನು ಪಡೆಯಲು ಹಕ್ಕುಳ್ಳವನಾಗಿರುವ ಯಾವುದೇ ಹಕ್ಕುಗಳಿಗೆ ಪ್ರತಿಕೂಲವಾಗಿ ಪ್ರವರ್ತಿಸತಕ್ಕದ್ದಲ್ಲ:

ಪರಂತು, ಅಂಥ ಐತೀರ್ಪು, ಒಪ್ಪಂದ ಅಥವಾ ಸೇವಾ ಕರಾರು ಈ ಅಧ್ಯಾಯದಲ್ಲಿ ಉಪಸಂಬಂಧಿಸಿರುವುದಕ್ಕಿಂತ ಮಜೂರಿ ಸಹಿತ ದೀರ್ಘ ರಜೆ ಅಥವಾ ವಾರದ ರಜಾ ದಿವಸಗಳಿಗಾಗಿ

ಉಪಬಂಧಿಸಿರುವಲ್ಲಿ, ನಿಯೋಜಿತನು ಸಂದರ್ಭಾನುಸಾರ ಅಂಥ ದೀರ್ಘ ರಜೆ ಅಥವಾ ವಾರದ ರಜಾದಿವಸಗಳಿಗೆ ಮಾತ್ರ ಹಕ್ಕುಳ್ಳವನಾಗಿರತಕ್ಕದ್ದು.

**15. ಮಜೂರಿಗಳ ಸಹಿತ ವಾರ್ಷಿಕ ರಜೆ:–** (1) ಒಂದು ಕ್ಯಾಲೆಂಡರು ವರ್ಷದ ಅವಧಿಯಲ್ಲಿ ಕಾರ್ಯಸಂಸ್ಥೆಯಲ್ಲಿ ಇನ್ನೂರ ನಲವತ್ತು ದಿವಸಗಳು ಅಥವಾ ಅದಕ್ಕೂ ಹೆಚ್ಚಿನ ದಿವಸಗಳ ಅವಧಿಗಾಗಿ ಕೆಲಸ ಮಾಡುವ ಪ್ರತಿಯೊಬ್ಬ ನಿಯೋಜಿತನಿಗೆ ತರುವಾಯ ಕ್ಯಾಲೆಂಡರ್ ವರ್ಷದಲ್ಲಿ,

(i) ವಯಸ್ಕನಾಗಿದ್ದರೆ ಹಿಂದಿನ ಕ್ಯಾಲೆಂಡರ್ ವರ್ಷದಲ್ಲಿ ಅವನು ನೆರವೇರಿಸಿದ ಕೆಲಸದ ಪ್ರತಿಯೊಂದು ಇಪ್ಪತ್ತು ದಿವಸಗಳಿಗಾಗಿ ಒಂದು ದಿವಸ;

(ii) ಯುವ ವ್ಯಕ್ತಿಯಾಗಿದ್ದರೆ ಹಿಂದಿನ ಕ್ಯಾಲೆಂಡರ್ ವರ್ಷದಲ್ಲಿ ಅವನು ನೇರವೇರಿಸಿದ ಪ್ರತಿಯೊಂದು ದಿವಸಗಳಿಗಾಗಿ ಒಂದು ದಿವಸದ ದರದಲ್ಲಿ ಲೆಕ್ಕ ಹಾಕಿದ ಸಂಖ್ಯೆಯ ದಿವಸಗಳಿಗಾಗಿ ಮಜೂರಿಗಳ ಸಹಿತ ರಜೆಗೆ ಅವಕಾಶ ಕೊಡತಕ್ಕದ್ದು.

**ವಿವರಣೆ:** 1. ಈ ಉಪ–ಪ್ರಕರಣದ ಉದ್ದೇಶಕ್ಕಾಗಿ:–

(ಕ) ಒಪ್ಪಂದ ಅಥವಾ ಕರಾರಿನ ಮೂಲಕ ಅಥವಾ ಸ್ಥಾಯೀ ಆದೇಶದ ಮೇರೆಗೆ ಅನುಮತಿಸಲಾದಂತೆ ಅಥವಾ ನಿಯೋಜಕನ ನಿಯಂತ್ರಣ ಮೀರಿದ ಇತರ ಯಾವುದೇ ಕಾರಣಕ್ಕಗಿ ಹಂಗಾಮಿಯಾಗಿ ಕೆಲಸಗಾರರನ್ನು ವಜಾ ಮಾಡಿದ ಯಾವುದೇ ದಿವಸಗಳು;

(ಖ) ನಿಯೋಜಿತಳ ಸಂದರ್ಭದಲ್ಲಿ ಹನ್ನೆರಡು ವಾರಗಳಿಗೆ ಮೀರದ ಯಾವುದೇ ಸಂಖ್ಯೆಯ ದಿವಸಗಳ ಹೆರಿಗೆ ರಜೆಯನ್ನು ಮತ್ತು

(ಗ) ರಜೆಯನ್ನು ಅನುಭವಿಸಿದಂಥ ವರ್ಷದ ಹಿಂದಿನ ವರ್ಷದಲ್ಲಿ ಗಳಿಸಿದ ರಜೆಯನ್ನು 240 ದಿವಸಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯನ್ನು ಗಣನೆಗೆ ತೆಗೆದುಕೊಳ್ಳುವ ಉದ್ದೇಶಕ್ಕಾಗಿ ನಿಯೋಜಿತನು ಕಾರ್ಯಸಂಸ್ಥೆಯಲ್ಲಿ ಕೆಲಸ ಮಾಡಿದ ದಿವಸಗಳೆಂದು ಭಾವಿಸತಕ್ಕದ್ದ ಆದರೆ ಈ ದಿವಸಗಳಿಗಾಗಿ ನಿಯೋಜಿತನು ರಜೆಯನ್ನು ಗಳಿಸತಕ್ಕದ್ದುದಲ್ಲ.

**ವಿವರಣೆ 2:–** ಈ ಉಪ–ಪ್ರಕರಣದ ಮೇರೆಗೆ ಅನುಮತಿಸಲಾಗುವ ರಜೆಯು ರಜೆಯ ಅವಧಿಯಲ್ಲಿಯೇ ಆಗಲಿ ಅದರ ಯಾವುದೇ ಕೊನೆಯಲ್ಲಿಯೇ ಆಗಲಿ ಸಂಭವಿಸುವ ಎಲ್ಲಾ ರಜಾ ದಿವಸಗಳನ್ನು ಹೊರತುಪಡಿಸಿ ಇರತಕ್ಕದ್ದು.

(2) ಯಾವ ನಿಯೋಜಿತನ ಸೇವೆಯು ಜನವರಿ ಮೊದಲ ದಿವಸವನ್ನು ಹೊರತುಪಡಿಸಿ ಅನ್ಯಥಾ ಪ್ರಾರಂಭವಾಗುವುದೋ ಆ ನಿಯೋಜಿತನು ಆ ಕ್ಯಾಲೆಂಡರ್ ವರ್ಷದ ಉಳಿದ ಭಾಗಗಳಲ್ಲಿನ ದಿವಸಗಳ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟಕ್ಕಾಗಿ ಅವನು ಕೆಲಸ ಮಾಡಿದ್ದರೆ (1) ನೇ ಉಪ–ಪ್ರಕರಣದ (i) ನೇ ಖಂಡದ ಅಥವಾ ಸಂದಾರ್ಭಾನುದಾರ (ii) ನೇ ಖಂಡದಲ್ಲಿ ಹೇಳಿರುವ ದರದಲ್ಲಿ ಮಜೂರಿಗಳ ಸಹಿತ ರಜೆಗೆ ಹಕ್ಕುಳ್ಳವನಾಗಿರತಕ್ಕದ್ದು.

(3) ಪ್ರತಿಯೊಬ್ಬ ನಿಯೋಜಿತನು ಯಾವುದೇ ಕಾರ್ಯಸಂಸ್ಥೆಯಲ್ಲಿ ನಿರಂತರ ಸೇವೆಯ ಮೊದಲ ಹನ್ನೆರಡು ತಿಂಗಳಲ್ಲಿ ಅಥವಾ ಅಂಥ ಸೇವೆಯ ತರುವಾಯದ ಪ್ರತಿ ಹನ್ನೆರಡು ತಿಂಗಳಲ್ಲಿ ಗುರಿಯಾದ ಯಾವುದೇ ಕಾಯಿಲೆ ಅಥವಾ ಅವನಿಗುಂಟಾದ ಅಪಘಾತದ ಕಾರಣದ ಮೇಲೆ ಅಥವಾ ಇತರ ಯಾವುದೇ ಯುಕ್ತ ಕಾರಣಕ್ಕಾಗಿ ಹನ್ನೆರಡು ದಿವಸಗಳಿಗೆ ಮೀರದ ಅವಧಿಗಾಗಿ ಮಜೂರಿಗಳ ಸಮೇತ ರಜೆಗೆ ಸದಾ ಹಕ್ಕುಳ್ಳವನಾಗಿರತಕ್ಕದ್ದು.

(4) ಯಾವನೇ ನಿಯೋಜಿತನನ್ನು ವರ್ಷದ ನಿರ್ವಹಣೆಯ ಕಾಲದಲ್ಲಿ ಸೇವೆಯಿಂದ ಬಿಡುಗಡೆ ಮಾಡಿದ್ದರೆ ಅಥವಾ ವಜಾ ಮಾಡಿದ್ದರೆ ರಜೆಯನ್ನು ಗಳಿಸಲು ಅವನನ್ನು ಹಕ್ಕುಳವನ್ನಾಗಿಸಲು (1)ನೇ ಉಪ–ಪ್ರಕರಣ ಅಥವಾ (2)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಇಡೀ ಅವಧಿಯವರೆಗೆ ಅವನು ಕೆಲಸ ಮಾಡಿರದಿದ್ದರೆ ಅವನು (1)ನೇ ಉಪ–ಪ್ರಕರಣದಲ್ಲಿ ಹೇಳಲಾದ ದರಗಳಲ್ಲಿ ಮಜೂರಿಗಳ ಸಮೇತ ರಜೆಗೆ ಹಕ್ಕುಳ್ಳವನಾಗಿರತಕ್ಕದ್ದು.

(5) (3)ನೇ ಉಪ–ಪ್ರಕರಣದ ಮೇರೆಗೆ ಯಾವುದೇ ರಜೆಗೆ ಹಕ್ಕುಳ್ಳವನಾಗಿರುವ ನಿಯೋಜಿತನನ್ನು ಅವನು ಅಪಘಾತದ ಪರಿಣಾಮದಿಂದಾಗಿ ಕಾಯಿಲೆ ಅಥವಾ ನೋವಿನಿಂದ ನರಳುತ್ತಿರುವಾಗ ಸೇವೆಯಿಂದ ಬಿಡುಗಡೆ ಮಾಡಿದ್ದರೆ ಅಥವಾ ವಜಾ ಮಾಡಿದ್ದರೆ ನಿಯೋಜಕನು (4) ನೇ ಉಪ–ಪ್ರಕರಣದ ಮೇರೆಗೆ ನಿಯೋಜಿತನಿಗೆ ಸಂದಾಯ ಮಾಡಬೇಕಾದ ಮೊಬಲಗು ಯಾವುದಾದರೂ ಇದ್ದರೆ ಅದರ ಜೊತೆಗೆ ಅವನನ್ನು ಸೇವೆಯಿಂದ ಬಿಡುಗಡೆ ಮಾಡಿದ್ದ ಅಥವಾ ವಜಾ ಮಾಡಿದ್ದ ಕಾಲದಲ್ಲಿ ಯಾವ ಅವಧಿಗೆ ಸಂಬಂಧಿಸಿದಂತೆ ಅವನು ರಜೆಗೆ ಹಕ್ಕುಳ್ಳವನಾಗಿದ್ದನೋ ಅದಕ್ಕೆ ಸಂಬಂಧಿಸಿದಂತೆ ಅವನಿಗೆ ಈ ಅಧಿನಿಯಮದ ಮೇರೆಗೆ ಮೊಬಲಗನ್ನು ಸಂದಾಯ ಮಾಡತಕ್ಕದ್ದು.

(6) ಈ ಪ್ರಕರಣದ ಮೇರೆಗೆ ರಜೆಯನ್ನು ಲೆಕ್ಕ ಹಾಕುವಲ್ಲಿ ಅರ್ಧ ದಿವಸ ಅಥವಾ ಅದಕ್ಕಿಂತ ಹೆಚ್ಚಿನ ರಜೆಯ ಭಾಗವನ್ನು ಒಂದು ಪೂರ್ಣ ದಿವಸ ರಜೆ ಎಂದು ಪರಿಗಣಿಸತಕ್ಕದ್ದು ಮತ್ತು ಅರ್ಧ ದಿನಕ್ಕಿಂತ ಕಡಿಮೆ ಭಾಗವನ್ನು ಬಿಟ್ಟುಬಿಡತಕ್ಕದ್ದು.

(7) ನಿಯೋಜಿತನು ಸಂದರ್ಭಾನುಸಾರ (1)ನೇ ಉಪ ಪ್ರಕರಣದ ಅಥವಾ (2) ನೇ ಉಪ–ಪ್ರಕರಣದ ಮೇರೆಗೆ ಅವನಿಗೆ ಅವಕಾಶವಿರುವ ಇಡೀ ರಜೆಯನ್ನು ಯಾವುದೇ ಒಂದು ಕ್ಯಾಲೆಂಡರ್ ವರ್ಷದಲ್ಲಿ ತೆಗೆದುಕೊಳ್ಳದಿದ್ದರೆ ಅವನು ತೆಗೆದುಕೊಂಡಿರುವ ಯಾವುದೇ ರಜೆಯನ್ನು ಮುಂದೆ ಬರುವ ಕ್ಯಾಲೆಂಡರ್ ವರ್ಷದಲ್ಲಿ ಅವನಿಗೆ ಕೊಡಬೇಕಾದ ರಜೆಗೆ ಸೇರಿಸತಕ್ಕದ್ದು:

ಪರಂತು ಮುಂದೆ ಬರುವ ವರ್ಷಕ್ಕೆ ಉಳಿಸಿಕೊಂಡು ಹೋಗಬಹುದಾದ ರಜಾ ದಿನಗಳ ಒಟ್ಟು ಸಂಖ್ಯೆ ವಯಸ್ಕನ ಸಂದರ್ಭದಲ್ಲಿ ಮೂವತ್ತು ದಿವಸಗಳನ್ನು ಯುವ ವ್ಯಕ್ತಿಯ ಸಂದರ್ಭದಲ್ಲಿ ನಲವತ್ತು ದಿವಸಗಳನ್ನು ಮೀರತಕ್ಕದ್ದಲ್ಲ:

ಮತ್ತು ಪರಂತು ಮಜೂರಿಗಳ ಸಹಿತ ರಜೆಗಾಗಿ ಅರ್ಜಿ ಸಲ್ಲಿಸಿರುವ ಆದರೆ (10) ಮತ್ತು(11) ನೇ ಉಪ–ಪ್ರಕರಣಗಳಲ್ಲಿ ಹೇಳಲಾದ ಯಾವುದೇ ಯೋಜನೆಗೆ ಅನುಸಾರವಾಗಿ ಅಂಥ ರಜೆಯನ್ನು ಕೊಟ್ಟಿಲ್ಲದೇ ಇರುವಲ್ಲಿ ನಿಯೋಜಿತನು ಯಾವುದೇ ಪರಿಮಿತಿ ಇಲ್ಲದೆ ಉಪಯೋಗಿಸಿಕೊಂಡಿಲ್ಲದ ಆ ರಜೆಯನ್ನು ಉಳಿಸಿಕೊಂಡು ಹೋಗಲು ಹಕ್ಕುಳ್ಳವನಾಗಿರತಕ್ಕದ್ದು.

(8) ನಿಯೋಜಿತನು ಕಾರ್ಯಸಂಸ್ಥೆಯ ವ್ಯವಸ್ಥಾಪಕನಿಗೆ ಬರಹದಲ್ಲಿ ಯಾವುದೇ ಕಾಲದಲ್ಲಿ ಅವನ ರಜೆಯು ಪ್ರಾರಂಭವಾಗಲು ಅವನು ಇಚ್ಛಿಸುವಂಥ ದಿನಾಂಕಕ್ಕೆ ಮುಂಚೆ ಹತ್ತು ದಿವಸಗಳಿಗೆ ಕಡಿಮೆ ಇರದಂತೆ ಆ ಕ್ಯಾಲೆಂಡರ್ ವರ್ಷದಲ್ಲಿ ಅವನಿಗೆ ಕೊಡಬೇಕಾಗಬಹುದಾದ ಎಲ್ಲ ರಜೆ ಅಥವಾ ಅದರ ಯಾವುದೇ ಭಾಗವನ್ನು ತೆಗೆದುಕೊಳ್ಳಲು ಬರಹದಲ್ಲಿ ಅರ್ಜಿ ಸಲ್ಲಿಸಬಹುದು:

ಪರಂತು, ಯಾವುದೇ ವರ್ಷದಲ್ಲಿ ಎಷ್ಟು ಸಾರಿ ರಜೆಯನ್ನು ತೆಗೆದುಕೊಳ್ಳಬಹುದೋ ಆ ವ್ಯಕ್ತಿಯು ಮೂರು ಸಾರಿ ಅಥವಾ ನಿಯೋಜಕ ಮತ್ತು ನಿಯೋಜಿತನ ನಡುವೆ ಒಪ್ಪಿ ಕೊಳ್ಳಬಹುದಾದಷ್ಟು ಸಾರಿಗಿಂತ ಮೀರತಕ್ಕದ್ದಲ್ಲ.

(9) ಯಾವನೇ ನಿಯೋಜಿತನು (3)ನೇ ಉಪ–ಪ್ರಕರಣದ ಮೇರೆಗೆ ಅವನಿಗೆ ಬರಬೇಕಾಗಿರುವ ಮಜೂರಿ ಸಮೇತ ರಜೆಯನ್ನು ಬಳಸಿಕೊಳ್ಳಲು ಇಚ್ಛಿಸಿದರೆ (8) ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ

ಕಾಲದೊಳಗೆ ಅರ್ಜಿಯನ್ನು ಸಲ್ಲಿಸದೇ ಇದ್ದಾಗೂ ಅವನಿಗೆ ಅಂಥ ರಜೆಯನ್ನು ಕೊಡಬಹುದು ಮತ್ತು ಅಂಥ ಸಂದರ್ಭದಲ್ಲಿ 17ನೇ ಪ್ರಕರಣದ ಮೇರೆಗೆ ಕೊಡಬಹುದಾದ ಮಜೂರಿಗಳನ್ನು ರಜೆಯು ಪ್ರಾರಂಭವಾಗುವ ದಿನಾಂಕದಿಂದ ಹದಿನೈದು ದಿವಸಗಳಿಗೆ ಹೆಚ್ಚಾಗದಂತೆ ಸಂದಾಯ ಮಾಡತಕ್ಕದ್ದು.

(10) ಕಾರ್ಯಸಂಸ್ಥೆಯಲ್ಲಿ ಕೆಲಸದ ಮುಂದುವರಿಕೆಯನ್ನು ಸಂನಿಶ್ಚಿತಗೊಳಿಸುವ ಉದ್ದೇಶಕ್ಕಾಗಿ ನಿಯೋಜಕನು ನಿಯಮಿಸಿದ ರೀತಿಯಲ್ಲಿ ಆಯ್ಕೆ ಮಾಡಿದ ಅದರಲ್ಲಿನ ನಿಯೋಜಿತರ ಪ್ರತಿನಿಧಿಗಳೊಂದಿಗೆ ಒಪ್ಪಂದ ಮಾಡಿಕೊಂಡು ಬರಹದಲ್ಲಿ ಒಂದು ಯೋಜನೆಯನ್ನು ರೂಪಿಸಬಹುದು. ಅದರ ಮೂಲಕ ಈ ಪ್ರಕರಣದ ಮೇರೆಗೆ ಅನುಮತಿಸಬಹುದಾದ ರಜೆಯ ಮಂಜೂರಾತಿಯನ್ನು ವಿನಿಯಮಿಸಬಹುದು.

(11) (10)ನೇ ಉಪ–ಪ್ರಕರಣದ ಮೇರೆಗೆ ರೂಪಿಸಿದ ಯೋಜನೆಯನ್ನು ಕಾರ್ಯಸಂಸ್ಥೆಯ ಆವರಣದಲ್ಲಿನ ಅನುಕೂಲಕರವಾದ ಸ್ಥಳಗಳಲ್ಲಿ ಹಚ್ಚತಕ್ಕದ್ದು ಮತ್ತು ಅದು ಜಾರಿಗೆ ಬಂದಂಥ ದಿನಾಂಕದಿಂದ ಹನ್ನೆರಡು ತಿಂಗಳುಗಳ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು ಮತ್ತು ಆ ತರುವಾಯ ನಿಯೋಜಕನು (10)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ನಿಯೋಜಿತರ ಪ್ರತಿನಿಧಿಗಳ ಒಪ್ಪಿಗೆಯಿಂದ ಒಂದು ಕಾಲಕ್ಕೆ ಹನ್ನೆರಡು ತಿಂಗಳುಗಳ ಇನ್ನೂ ಹೆಚ್ಚಿನ ಅವಧಿಗಾಗಿ ತಿದ್ದುಪಡಿ ಸಹಿತ ಅಥವಾ ಅದಿಲ್ಲದೆ ನವೀಕರಿಸಬಹುದು.

(12) (10) ಮತ್ತು (11) ನೇ ಉಪ–ಪ್ರಕರಣಗಳ ಮೇರೆಗೆ ತತ್ಕಾಲದಲ್ಲಿ ಪ್ರವರ್ತನೆಯಲ್ಲಿರುವ ಯೋಜನೆಗೆ ಅನುಸಾರವಾಗಿ ನಿರಾಕರಣೆಯು ಇದ್ದ ಹೊರತು (8) ನೇ ಉಪ–ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸದೇ ಇರುವಂಥ ರಜೆಗಾಗಿನ ಅರ್ಜಿಯನ್ನು ನಿರಾಕರಿಸತಕ್ಕದಲ್ಲ.

(13) ಸಂದರ್ಭಾನುಸಾರ (1)ನೇ ಉಪ–ಪ್ರಕರಣ ಅಥವಾ (2) ನೇ ಉಪ–ಪ್ರಕರಣದ ಮೇರೆಗೆ ರಜೆಗೆ ಹಕ್ಕುಳ್ಳವನಾಗಿರುವ ನಿಯೋಜಿತನ ನಿಯೋಜನೆಯನ್ನು ಅವನು ಹಕ್ಕುಳ್ಳವನಾಗಿರುವಂಥ ಇಡೀ ರಜೆಯನ್ನು ಅವನು ತೆಗೆದುಕೊಳ್ಳುವುದಕ್ಕೆ ಮುಂಚೆ ನಿಯೋಜಕನು ಕೊನೆಗೊಳಿಸಿದ್ದರೆ ಅಥವಾ ಅಂಥ ರಜೆಗಾಗಿ ಅರ್ಜಿಯನ್ನು ಹಾಕಿಕೊಂಡಿದ್ದು ಮತ್ತು ಅದನ್ನು ಮಂಜೂರು ಮಾಡಿಲ್ಲದೆ ಇದ್ದು ಅವನು ರಜೆಯನ್ನು ಪಡೆಯುವುದಕ್ಕೆ ಮುಂಚೆ ನಿಯೋಜಿತನು ಅವನ ನಿಯೋಜನೆಯನ್ನು ಬಿಟ್ಟು ಹೋದರೆ ತೆಗೆದುಕೊಳ್ಳದೇ ಇರುವ ರಜೆಗೆ ಸಂಬಂಧಿಸಿದಂತೆ 16ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಮೊಬಲಗಳನ್ನು ನಿಯೋಜಕನು ಅವನಿಗೆ ಸಂದಾಯ ಮಾಡತಕ್ಕದ್ದು ಮತ್ತು ಅಂಥ ಸಂದಾಯವನ್ನು ನಿಯೋಜಕನು ನಿಯೋಜಿತನ ನಿಯೋಜನೆಯನ್ನು ಕೊನೆಗೊಳಿಸಿರುವಲ್ಲಿ ಅಂಥ ಕೊನೆಗೊಳಿಸುವಿಕೆಯ ತರುವಾಯ ಎರಡನೇ ಕೆಲಸದ ದಿವಸವು ಮುಕ್ತಾಯವಾಗುವುದಕ್ಕೆ ಮುಂಚೆ ಮತ್ತು ನಿಯೋಜಿತನು ಅವನ ನಿಯೋಜನೆಯನ್ನು ಬಿಟ್ಟು ಹೋಗಿರುವಲ್ಲಿ ಮುಂದಿನ ವೇತನ ದಿವಸದಂದು ಅಥವಾ ಅದಕ್ಕೆ ಮುಂಚೆ ಸಂದಾಯ ಮಾಡತಕ್ಕದ್ದು.

(14) ನಿಯೋಜಿತನು ತೆಗೆದುಕೊಳ್ಳದೇ ಇರುವ ರಜೆಯನ್ನು ಸೇವೆಯಿಂದ ಬಿಡುಗಡೆ ಮಾಡುವುದಕ್ಕೆ ಅಥವಾ ವಜಾ ಮಾಡುವುದಕ್ಕೆ ಮುಂಚೆ ಕೊಡಲು ಅಗತ್ಯಪಡಿಸಿದ ಯಾವುದೇ ನೋಟೀಸಿನ ಅವಧಿಯನ್ನು ಲೆಕ್ಕ ಹಾಕುವಲ್ಲಿ ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**16. ರಜಾ ಅವಧಿಯಲ್ಲಿ ಮಜೂರಿಗಳು:–** 15ನೇ ಪ್ರಕರಣದ ಮೇರೆಗೆ ಅವನಿಗೆ ಕೊಡಬಹುದಾದ ರಜೆ ಯಾವುದೇ ಅಧಿಕಕಾಲಿಕ ಮಜೂರಿಯನ್ನು ಮತ್ತು ಬೋನಸ್‌ನ್ನು ಹೊರತುಪಡಿಸಿ, ಆದರೆ ತುಟಿಭತ್ಯೆ ಮತ್ತು ಆಹಾರ ಧಾನ್ಯಗಳು ಮತ್ತು ಇತರ ವಸ್ತುಗಳನ್ನು ನಿಯೋಜಿತನಿಗೆ ರಿಯಾಯಿತಿ ಮಾರಾಟದ ಮೂಲಕ ಒದಗಿ ಬರುವ ಅನುಕೂಲತೆಗೆ ಸಮನಾದ ನಗದನ್ನು ಒಳಗೊಂಡು ಅವನ ರಜೆಯ ನಿಕಟ ಪೂರ್ವದ ತಿಂಗಳಿನಲ್ಲಿ ಅವನು ಕೆಲಸ ಮಾಡಿದಂಥ ದಿವಸಗಳಿಗಾಗಿನ ಅವನ ಒಟ್ಟು ಪೂರ್ಣ ಕಾಲಾವಧಿ ಗಳಿಕೆಗಳ ದೈನಿಕ ಸರಾಸರಿಗೆ ಸಮನಾದ ದರದಲ್ಲಿ ಸಂದಾಯ ಮಾಡತಕ್ಕದ್ದು.

(2) ಆಹಾರ ಧಾನ್ಯಗಳು ಮತ್ತು ಇತರ ವಸ್ತುಗಳನ್ನು ನಿಯೋಜಿತನಿಗೆ ರಿಯಾಯಿತಿ ಮಾರಾಟದ ಮೂಲಕ ಒದಗಿಸಿಬಂದ ಅನುಕೂಲತೆಗೆ ಸಮಾನವಾದ ನಗದನ್ನು ನಿಗದಿತ ಕುಟುಂಬಕ್ಕೆ ಕೊಡಬಹುದಾದ ಆಹಾರ ಧಾನ್ಯ ಮತ್ತು ಇತರೆ ವಸ್ತುಗಳ ಗರಿಷ್ಠ ಪ್ರಮಾಣದ ಆಧಾರದ ಮೇಲೆ ನಿಯಮಿಸಬಹುದಾದಷ್ಟು ಬಾರಿ ಲೆಕ್ಕ ಹಾಕತಕ್ಕದ್ದು.

**ವಿವರಣೆ:–** 8ನೇ ಪ್ರಕರಣದ (3) ನೇ ಉಪ–ಪ್ರಕರಣದ ವಿವರಣೆಗಳು ಈ ಉಪ–ಪ್ರಕರಣದ ಮೇರೆಗೆ ನಿಗದಿತ ಕುಟುಂಬವನ್ನು ನಿರ್ಧರಿಸುವ ಉದ್ದೇಶಗಳಿಗಾಗಿ ಅನ್ವಯವಾಗತಕ್ಕದ್ದು.

**17. ಕೆಲವು ಸಂದರ್ಭಗಳಲ್ಲಿ ಮುಂಗಡವಾಗಿ ಸಂದಾಯ:–** ವಯಸ್ಕನ ಸಂದರ್ಭದಲ್ಲಿ ನಾಲ್ಕು ದಿವಸಗಳಿಗೆ ಮತ್ತು ಯುವ ವ್ಯಕ್ತಿಯ ಸಂದರ್ಭದಲ್ಲಿ ಐದು ದಿವಸಗಳಿಗೆ ಕಡಿಮೆ ಇಲ್ಲದಷ್ಟು ರಜೆಯನ್ನು ಕೊಡಲಾಗಿರುವ ನಿಯೋಜಿತನಿಗೆ ಅವನ ರಜೆಯು ಪ್ರಾರಂಭವಾಗುವುದಕ್ಕೆ ಮುಂಚೆ ಕೊಡಲಾದ ರಜಾ ಅವಧಿಗಾಗಿ ಬರಬೇಕಾದ ಮಜೂರಿಗಳನ್ನು ಸಂದಾಯ ಮಾಡತಕ್ಕದ್ದು.

**18. ಸಂದಾಯ ಮಾಡದ ಮಜೂರಿಗಳ ವಸೂಲಿಯ ವಿಧಾನ:–** ಈ ಅಧ್ಯಾಯದ ಮೇರೆಗೆ ನಿಯೋಜಕನು ಸಂದಾಯ ಮಾಡಬೇಕೆಂದು ಅಗತ್ಯಪಡಿಸಿದ ಆದರೆ ಅವನು ಸಂದಾಯ ಮಾಡಿಲ್ಲದ ಯಾವುದೇ ಮೊತ್ತವು ಮಜೂರಿಗಳ ಸಂದಾಯ ಅಧಿನಿಯಮ 1936 (ಕೇಂದ್ರ ಅಧಿನಿಯಮ 1936 ರIV) ರ ಉಪಬಂಧಗಳ ಮೇರೆಗೆ ವಿಳಂಬಿತ ಮಜೂರಿಗಳಂತೆ ವಸೂಲೀಯವಾಗತಕ್ಕದ್ದು.

**19. ನಿಯಮ ರಚನಾಧಿಕಾರ:–** ರಾಜ್ಯ ಸರ್ಕಾರವು ಈ ಅಧ್ಯಾಯದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಿಸಬಹುದಾದಂಥ ವಿವರಗಳನ್ನೊಳಗೊಂಡ ರಿಜಿಸ್ಟರುಗಳನ್ನು ಇಡಲು ಮತ್ತು ಪರಿಶೀಲಕರ ಪರೀಕ್ಷೆಗಾಗಿ ಲಭ್ಯಗೊಳಿಸುವಂತೆ ಅಗತ್ಯಪಡಿಸಿ ನಿಯಮಗಳನ್ನು ರಚಿಸಬಹುದು.

**20. ಕಾರ್ಯಸಂಸ್ಥೆಗಳನ್ನು ವಿನಾಯಿತಿಗೊಳಿಸಲು ಅಧಿಕಾರ:–** ಕಾರ್ಯಸಂಸ್ಥೆಯಲ್ಲಿನ ನಿಯೋಜಿತರಿಗೆ ಅನ್ವಯವಾಗಬಹುದಾದ ರಜಾ ನಿಯಮಗಳು ಈ ಕಾರ್ಯಸಂಸ್ಥೆಯಲ್ಲಿನ ನಿಯೋಜಿತರಿಗೆ ಅನ್ವಯವಾಗಬಹುದಾದ ರಜಾ ನಿಯಮಗಳು ಈ ಅಧ್ಯಾಯವು ಉಪಬಂಧ ಮಾಡುವಂಥ ಪ್ರಯೋಜನಗಳಿಗಿಂತ ಅದರ ಅಭಿಪ್ರಾಯದಲ್ಲಿ ಕಡಿಮೆ ಅನೂಕೂಲಕರವಾಗಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ ಅದು ಅಧಿಸೂಚನೆಯ ಮೂಲಕ ಆ ಕಾರ್ಯಸಂಸ್ಥೆಯನ್ನು ಈ ಅಧ್ಯಾಯದ ಎಲ್ಲ ಅಥವಾ ಯಾವುದೇ ಉಪಬಂಧದಿಂದ ಈ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು ವಿನಾಯಿತಿಗೊಳಿಸಬಹುದು.

## ಅಧ್ಯಾಯ–V

## ಮಜೂರಿಗಳು ಮತ್ತು ನಷ್ಟ ಪರಿಹಾರ ಮತ್ತು ಪ್ರಸೂತಿ ಸೌಕರ್ಯ

**21. ಮಜೂರಿಗಳ ಸಂದಾಯ ಅಧಿನಿಯಮದ ಅನ್ವಯ:–** (1) ಮಜೂರಿಗಳ ಸಂದಾಯ ಅಧಿನಿಯಮ 1936 (ಕೇಂದ್ರ ಅಧಿನಿಯಮ 1936ರ IV) (ಈ ಪ್ರಕರಣದಲ್ಲಿ **'**ಸದರಿ ಅಧಿನಿಯಮ**'** ಎಂದು ಉಲ್ಲೇಖಿಸಲಾಗಿದೆ) ಏನೇ ಅಡಕವಾಗಿದ್ದಾಗ್ಯೂ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ (2)ನೇ ಉಪ–ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಸದರಿ ಅಧಿನಿಯಮವು ಅಥವಾ ಅದರ ಯಾವುದೇ ಉಪಬಂಧವು ರಾಜ್ಯ ವಿಧಾನಮಂಡಲವು ಈ ಅಧಿನಿಯಮವನ್ನು ಅಂಗೀಕರಿಸುವ ದಿನಾಂಕದಂದು ಜಾರಿಯಲ್ಲಿದ್ದಂತೆ ಈ ಅಧಿನಿಯಮ ಅನ್ವಯವಾಗುವಂಥ ಕಾರ್ಯಸಂಸ್ಥೆಗಳಲ್ಲಿನ ನಿಯೋಜಿತರೆಲ್ಲರಿಗೂ ಅಥವಾ ಅವರ ಯಾವುದೇ ವರ್ಗಕ್ಕೆ ಮತ್ತು ಅವರ ನಿಯೋಜಕರಿಗೆ ಅನ್ವಯವಾಗುತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಆ ತರುವಾಯ

ಸದರಿ ಅಧಿನಿಯಮ ಅಥವಾ ಅದರ ಉಪಬಂಧಗಳು ನಿಯೋಜಕರಿಗೆ ಮತ್ತು ನಿಯೋಜಿತರಿಗೆ ಈ ಅಧಿನಿಯಮದಲ್ಲಿ ಅಧಿನಿಯಮಿತಗೊಳಿಸಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(2) ಸದರಿ ಅಧಿನಿಯಮದ ಉಪಬಂಧಗಳನ್ನು (1)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಕಾರ್ಯಸಂಸ್ಥೆಗೆ ಅನ್ವಯ ಮಾಡಿದ ಮೇಲೆ ಈ ಅಧಿನಿಯಮದ ಮೇರೆಗೆ ನೇಮಕ ಮಾಡಿದ ಪರಿಶೀಲಕನನ್ನು ಅವನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಸದರಿ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಪರಿಶೀಲಕನೆಂಬುದಾಗಿ ಭಾವಿಸತಕ್ಕದ್ದು.

**22. ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮದ ಅನ್ವಯ:–** ರಾಜ್ಯ ವಿಧಾನಮಂಡಲವು ಈ ಅಧಿನಿಯಮವನ್ನು ಅಂಗೀಕರಿಸಿದ ದಿನಂಕದಂದು ಜಾರಿಯಲ್ಲಿದ್ದಂತೆ ಕಾರ್ಮಿಕ ನಷ್ಟ ಪರಿಹಾರ ಅಧಿನಿಯಮ 1923 (ಕೇಂದ್ರ ಅಧಿನಿಯಮ 1923ರ VIII) ದ ಉಪಬಂಧಗಳು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ರಾಜ್ಯ ಸರ್ಕಾರವು ಅದರ ಮೇರೆಗೆ ರಚಿಸಿದ ನಿಯಮಗಳ ಯಥೋಚ್ಛಿತ ವ್ಯತ್ಯಾಸಗಳೊಂದಿಗೆ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ನಿಯೋಜಿತರಿಗೆ ಮತ್ತು ನಿಯೋಜಕರಿಗೆ ಅನ್ವಯವಾಗತಕ್ಕದ್ದು.

**23.** (*********)

## ಅಧ್ಯಾಯ– VI

## ಮಕ್ಕಳ ಮತ್ತು ಮಹಿಳೆಯರ ನಿಯೋಜನೆ

**24. ಮಕ್ಕಳ ನಿಯೋಜನೆಯ ನಿಷೇಧ:–** ಯಾವುದೇ ಕಾರ್ಯಸಂಸ್ಥೆಯಲ್ಲಿ ಯಾವುದೇ ಮಗುವನ್ನು ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಹಾಗೆ ಮಾಡಲು ಅನುಮತಿಸತಕ್ಕದ್ದಲ್ಲ.

**25. ರಾತ್ರಿ ವೇಳೆಯಲ್ಲಿ ಮಹಿಳೆಯರು ಮತ್ತು ಯುವ ವ್ಯಕ್ತಿಗಳ ನಿಯೋಜನೆಯ ನಿಷೇಧ:–** ಯಾವಳೇ ಮಹಿಳೆ ಅಥವಾ ಹನ್ನೆರಡು ಮತ್ತು ಹದಿನೈದರ ನಡುವಿನ ವಯಸ್ಸಿನ ಯುವ ವ್ಯಕ್ತಿಯನ್ನು ನಿಯೋಜಿತನಾಗಿಯೇ ಆಗಲಿ ಅಥವಾ ಅನ್ಯಥಾ ಆಗಲಿ ರಾತ್ರಿ ವೇಳೆಯಲ್ಲಿ ಯಾವುದೇ ಕಾರ್ಯ ಸಂಸ್ಥೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಹಾಗೆ ಮಾಡಲು ಅನುಮತಿಸತಕ್ಕದ್ದಲ್ಲ.

## ಅಧ್ಯಾಯ–VII

## ಜಾರಿ ಮತ್ತು ಪರಿಶೀಲನೆ

**26. ಪರಿಶೀಲಕರು:–** (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಅದು ಸೂಕ್ತವೆಂದು ಯೋಚಿಸುವಂಥ ವ್ಯಕ್ತಿಗಳನ್ನು ಅಥವಾ ಅಂತಹ ವರ್ಗದ ವ್ಯಕ್ತಿಗಳನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಅನುಕ್ರಮವಾಗಿ ಅದು ಅವರಿಗೆ ವಹಿಸಿಕೊಡಬಹುದಾದಂಥ ಸ್ಥಳೀಯ ಪರಿಮಿತಿಗಳೊಳಗೆ ಪರಿಶೀಲಕರಾಗಿ ಮತ್ತು ಸಹಾಯಕ ಪರಿಶೀಲಕರೆಂದು ನೇಮಕ ಮಾಡಬಹುದು.

(2) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಅದು ಸೂಕ್ತವೆಂದು ಯೋಚಿಸುವಂಥ ಸರ್ಕಾರಿ ಅಧಿಕಾರಿಗಳನ್ನು ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉದ್ದೇಶಕ್ಕಾಗಿ ಅದು ಅನುಕ್ರಮವಾಗಿ ಅವರಿಗೆ ವಹಿಸಿಕೊಡಬಹುದಾದಂಥ ಸ್ಥಳೀಯ ಪರಿಮಿತಿಗಳೊಳಗೆ ಅಡಿಷನಲ್ ಪರಿಶೀಲಕರಾಗಿರಲು ನೇಮಕ ಮಾಡಬಹುದು

(3) ಯಾವುದೇ ಪ್ರದೇಶದಲ್ಲಿ ಒಬ್ಬನಿಗಿಂತ ಹೆಚ್ಚು ಪರಿಶೀಲಕರು ಇರುವಲ್ಲಿ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಅಂಥ ಪರಿಶೀಲಕರು ಅನುಕ್ರಮವಾಗಿ ಚಲಾಯಿಸತಕ್ಕಂಥ ಅಧಿಕಾರಗಳನ್ನು ಘೋಷಿಸಬಹುದು.

(4) ಕರ್ನಾಟಕದಲ್ಲಿನ ಕಾರ್ಮಿಕ ಕಮೀಷನರ್ ಇಡೀ ಕರ್ನಾಟಕ ರಾಜ್ಯಕ್ಕಾಗಿ ಈ ಅಧಿನಿಯಮದ ಉದ್ದೇಶಗಳಿಗಾಗಿ ಮುಖ್ಯ ಪರಿಶೀಲಕನಾಗಿರತಕ್ಕದ್ದು.

**27. ಪರಿಶೀಲಕರ ಅಧಿಕಾರಿಗಳು ಮತ್ತು ಕರ್ತವ್ಯಗಳು:–** ಈ ಬಗ್ಗೆ ರಾಜ್ಯ ಸರ್ಕಾರವು ರಚಿಸಿದ ಯಾವುದೇ ನಿಯಮಗಳಿಗೊಳಪಟ್ಟು ಪರಿಶೀಲಕನು ಅವನ ಅಧಿಕಾರ ವ್ಯಾಪ್ತಿಯ ಪ್ರದೇಶದೊಳಗೆ;

(ಕ) ಎಲ್ಲಾ ಯುಕ್ತ ಕಾಲಗಳಲ್ಲಿ ಮತ್ತು ಅವನು ಸೂಕ್ತವೆಂದು ಯೋಚಿಸುವಂತೆ ರಾಜ್ಯ ಸರ್ಕಾರದ ಸೇವೆಯಲ್ಲಿನ ವ್ಯಕ್ತಿಗಳಾಗಿರುವವರ ಅಂತ ಸಹಾಯಕರೊಂದಿಗೆ ಕಾರ್ಯ ಸಂಸ್ಥೆಯಾಗಿರುವ ಅಥವಾ ಅವನು ಹಾಗೆ ನಂಬಲು ಕಾರಣವಿರುವಂಥ ಯಾವುದೇ ಸ್ಥಳವನ್ನು ಪ್ರವೇಶಿಸಬಹುದು:

(ಖ) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವನು ಅವಶ್ಯವೆಂದು ಭಾವಿಸುವಂಥ ಆವರಣಗಳ ಮತ್ತು ಯಾವುದೇ ನಿಯಮಿಸಲಾದ ರಿಜಿಸ್ಟರ್‌ಗಳು, ದಾಖಲೆಗಳು ಮತ್ತು ನೋಟಿಸುಗಳ ಪರೀಕ್ಷೆಯನ್ನು ಮಾಡಬಹುದು ಮತ್ತು ಆ ಸ್ಥಳದಲ್ಲೇ ಅಥವಾ ಅನ್ಯಥಾ ಯಾವನೇ ವ್ಯಕ್ತಿಯ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು; ಮತ್ತು

(ಗ) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯವಿರಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು:

ಪರಂತು ಯಾವನೇ ವ್ಯಕ್ತಿಯನ್ನು ಈ ಪ್ರಕರಣದ ಮೇರೆಗೆ ತನ್ನನ್ನೇ ಅಪರಾಧದಲ್ಲಿ ಸಿಕ್ಕಿಸುವಂಥಹ ಯಾವುದೇ ಪ್ರಶ್ನೆಗೆ ಉತ್ತರಿಸಲು ಅಥವಾ ಯಾವುದೇ ಸಾಕ್ಷ್ಯವನ್ನು ಕೊಡಲು ಅಗತ್ಯಪಡಿಸತಕ್ಕದ್ದಲ್ಲ.

**28. ಪರಿಶೀಲಕರು ಲೋಕ ನೌಕರರಾಗಿರುತ್ತಾರೆ:–** 26ನೇ ಪ್ರಕರಣದ ಮೇರೆಗೆ ಪರಿಶೀಲಕರಾಗಿ ನೇಮಕಗೊಂಡ ಅಥವಾ ಘೋಷಿತನಾದ ಪ್ರತಿಯೊಬ್ಬ ವ್ಯಕ್ತಿಯನ್ನು ಭಾರತೀಯ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರ ನೆಂಬುದಾಗಿ ಭಾವಿಸತಕ್ಕದ್ದು.

**29. ಪರಿಶೀಲನೆಗಾಗಿ ನಿಯೋಜಕರು ರಿಜಿಸ್ಟರುಗಳು, ದಾಖಲೆಗಳು ಇತ್ಯಾದಿಗಳನ್ನು ಹಾಜರುಪಡಿಸತಕ್ಕುದು:–** ಪ್ರತಿಯೊಬ್ಬ ನಿಯೋಜಕನು ಈ ಅಧಿನಿಯಮದ ಮೇರೆಗೆ ಮತ್ತು ಅದರ ಉದ್ದೇಶಗಳಿಗಾಗಿ ಇಡಲು ಅಗತ್ಯಪಡಿಸಿದ ಎಲ್ಲಾ ರಿಜಿಸ್ಟರು, ದಾಖಲೆಗಳು ಮತ್ತು ನೋಟಿಸುಗಳನ್ನು ಪರಿಶೀಲಕನ ಪರಿಶೀಲನೆಗಾಗಿ ಕೇಳಿದ ಕೂಡಲೇ ಹಾಜರುಪಡಿಸತಕ್ಕದ್ದು.

## ಅಧ್ಯಾಯ–VIII

## ಅಪರಾಧಗಳ, ದಂಡನೆಗಳು ಮತ್ತು ಪ್ರಕ್ರಿಯೆ

**30. ದಂಡನೆಗಳು:–** (1) 4, 5, 6, 7, 9, 10, 11, 12, 13, 15, 16, 24, 25 ಮತ್ತು 39ನೇ ಪ್ರಕರಣಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ ಅಪರಾಧ ನಿರ್ಣಯವಾದ ಮೇಲೆ ಮೊದಲನೆಯ ಅಪರಾಧಕ್ಕಾಗಿ ಇನ್ನೂರೈವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಮತ್ತು ಎರಡನೇ ಅಥವಾ ಯಾವುದೇ ತರುವಾಯದ ಅಪರಾಧಕ್ಕಾಗಿ ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) 8, 17, 29 ಮತ್ತು 34ನೇ ಪ್ರಕರಣಗಳ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾರೇ ಆಗಲಿ ಅಪರಾಧ ನಿರ್ಣಯವಾದ ಮೇಲೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**31. ಪ್ರತಿಕ್ರಿಯೆ:–** (1) ಈ ಅಧಿನಿಯಮ ಅಥವಾ ಅದರ ಮೇರೆಗೆ ಮಾಡಿದ ನಿಯಮಗಳ ಅಥವಾ ಆದೇಶಗಳ ಮೇರೆಗಿನ ಯಾವುದೇ ಪ್ರಾಸಿಕ್ಯೂಷನ್‌ನನ್ನು ಪರಿಶೀಲಕನ ಬರಹದಲ್ಲಿನ ಫಿರ್ಯಾದಿನ ಅಲ್ಲದೆ ಹೂಡತಕ್ಕದ್ದಲ್ಲ.

(2) ಎರಡನೇ ದರ್ಜೆಯ ಮ್ಯಾಜಿಸ್ಟ್ರೇಟನಿಗಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮ ಅಥವಾ ಅದರ ಮೇರೆಗೆ ಮಾಡಿದ ಯಾವುವೇ ನಿಯಮಗಳು ಅಥವಾ ಆದೇಶಗಳ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

**32. ಪ್ರಾಸಿಕ್ಯೂಷನ್‌ಗಳ ಕಾಲಪರಿಮಿತಿ:–** ಯಾವುದೇ ನ್ಯಾಯಾಲಯವು ಈ ಅಧಿನಿಯಮ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ಆದೇಶದ ಮೇರೆಗಿನ ಯಾವುದೇ ಅಪರಾಧದ ಸಂಜ್ಞಾನವನ್ನು ಆ ಅಪರಾಧವನ್ನು ಯಾವ ದಿವಸ ಮಾಡಲಾಗಿದೆ ಎಂದು ಹೇಳಲಾಗಿದೆಯೋ ಆ ದಿವಸದಿಂದ ಆರು ತಿಂಗಳುಗಳ ಒಳಗೆ ಅದರ ಬಗ್ಗೆ ಫಿರ್ಯಾದನ್ನು ಮಾಡಿದ್ದ ಹೊರತು, ತೆಗೆದುಕೊಳ್ಳತಕ್ಕದ್ದಲ್ಲ.

**33. ಪರಿಶೀಲಕರು ಇತ್ಯಾದಿಯವರನ್ನು ಅಡ್ಡಿಪಡಿಸಿದ್ದಕ್ಕಾಗಿ ದಂಡನೆ:–** ಈ ಅಧಿನಿಯಮದ ಮೇರೆಗೆ ಅವನಿಗೆ ಪ್ರದತ್ತ ಮಾಡಲಾದ ಯಾವುದೇ ಅಧಿಕಾರವನ್ನು ಚಲಾಯಿಸುವ ಪರಿಶೀಲಕನಿಗೆ ಅಥವಾ ಅಂತಹ ಅಧಿಕಾರವನ್ನು ಚಲಾಯಿಸುವಲ್ಲಿ ಪರಿಶೀಲಕನಿಗೆ ಕಾನೂನು ಸಮ್ಮತವಾಗಿ ನೆರವು ನೀಡುತ್ತಿರುವ ಯಾವನೇ ವ್ಯಕ್ತಿಗೆ ಉದ್ದೇಶ ಪೂರ್ವಕವಾಗಿ ಅಡ್ಡಿಪಡಿಸುವ ಅಥವಾ ಪರಿಶೀಲಕನು ಮಾಡಿದ ಯಾವುದೇ ಕಾನೂನು ಸಮ್ಮತ ನಿರ್ದೇಶನವನ್ನು ಪಾಲಿಸಲು ತಪ್ಪುವ ಯಾವನೇ ವ್ಯಕ್ತಿಯು ಇನ್ನೂರೈವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದು.

## ಅಧ್ಯಾಯ–IX

## ಸಂಕೀರ್ಣ

**34. ರಿಜಿಸ್ಟರುಗಳು ಮತ್ತು ದಾಖಲೆಗಳನ್ನು ಇಟ್ಟುಕೊಂಡು ಬರುವುದು ಮತ್ತು ನೋಟೀಸುಗಳ ಪ್ರದರ್ಶನ:–** ರಾಜ್ಯ ಸರ್ಕಾರದ ಸಾಮಾನ್ಯ ಮತ್ತು ವಿಶೇಷ ಆದೇಶಗಳಿಗೊಳಪಟ್ಟು, ನಿಯೋಜಕನು ನಿಯಮಿಸಬಹುದಾದಂಥ ರಿಜಿಸ್ಟರುಗಳು ಮತ್ತು ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ಅಂಥ ನೋಟೀಸನ್ನು ಅವನ ಕಾರ್ಯಸಂಸ್ಥೆಯ ಆವರಣದಲ್ಲಿ ಪ್ರದರ್ಶಿಸತಕ್ಕದ್ದು ಎಲ್ಲಾ ಅಂಥ ರಿಜಿಸ್ಟರುಗಳು ಮತ್ತು ದಾಖಲೆಗಳನ್ನು ಅವು ಸಂಬಂಧ ಪಡುವಂಥ ಕಾರ್ಯ ಸಂಸ್ಥೆಯ ಆವರಣದಲ್ಲಿ ಇಡತಕ್ಕದ್ದು.

**35. ಕೆಲವು ಹಕ್ಕುಗಳು ಮತ್ತು ವಿಶೇಷ ಅಧಿಕಾರಿಗಳನ್ನು ಉಳಿಸುವಿಕೆ:–** ಈ ಅಧಿನಿಯಮದಲ್ಲಿ ಇರುವುದು ಯಾವುದು, ಯಾವುದೇ ಕಾರ್ಯಸಂಸ್ಥೆಯಲ್ಲಿನ ನಿಯೋಜಿತನು ಅಂಥ ಸಂಸ್ಥೆಗೆ ಅನ್ವಯವಾಗುವ ಯಾವುದೇ ಇತರ ಕಾನೂನು, ಕರಾರು, ರೂಡಿ ಅಥವಾ ಆಚರಣೆಯ ಮೇರೆಗೆ ಅಥವಾ ಅಂಥ ಕಾರ್ಯ ಸಂಸ್ಥೆಯಲ್ಲಿನ ನಿಯೋಜಕ ಮತ್ತು ನಿಯೋಜಿತನನ್ನು ಬದ್ಧಗೊಳಿಸುವ ಯಾವುದೇ ಐತೀರ್ಪು, ಇತ್ಯರ್ಥ ಅಥವಾ ಒಪ್ಪಂದದ ಮೇರೆಗೆ ಅವನು ಹಕ್ಕುಳ್ಳವನಾಗಿರುವಂಥ ಯಾವುವೇ ಹಕ್ಕುಗಳು ಅಥವಾ ವಿಶೇಷ ಅಧಿಕಾರಿಗಳನ್ನು ಅಂತಹ

ಹಕ್ಕುಗಳು ಅಥವಾ ವಿಶೇಷ ಅಧಿಕಾರಿಗಳು ಅವನು ಈ ಅಧಿನಿಯಮದ ಮೇರೆಗೆ ಹಕ್ಕುಳ್ಳದನಾಗಿರಬಹುದಾದಂಥವುಗಳಿಗಿಂತ ಹೆಚ್ಚು ಅನುಕೂಲಕರವಾಗಿದ್ದರೆ ಅವನ್ನು ಬಾಧಿಸತಕ್ಕದ್ದಲ್ಲ.

**36. ರಕ್ಷಣೆ:–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕಾಗಿ ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರದ ಯಾವನೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳು ಇರತಕ್ಕದ್ದಲ್ಲ.

**37. ಅಧಿಕಾರಿಗಳ ಪ್ರತ್ಯಾಯೋಜನೆ:–** ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಅದಕ್ಕೆ ಅಧೀನನಾದ ಯಾವನೇ ಅಧಿಕಾರಿ ಅಥವಾ ಪ್ರಾಧಿಕಾರಿಯನ್ನು 1ನೇ ಪ್ರಕರಣದ (3) ಮತ್ತು 4 ನೇ ಉಪ–ಪ್ರಕರಣಗಳು, 3ನೇ ಪ್ರಕರಣದ (3) ಮತ್ತು (4) ನೇ ಉಪ–ಪ್ರಕರಣಗಳು 19ನೇ ಪ್ರಕರಣ, 20ನೇ ಪ್ರಕರಣ, 21ನೇ ಪ್ರಕರಣ, 26ನೇ ಪ್ರಕರಣ ಮತ್ತು 40ನೇ ಪ್ರಕರಣಗಳ ಮೇರೆಗಿನ ಅಧಿಕಾರಗಳನ್ನು ಹೊರತುಪಡಿಸಿ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪರಿಬಂಧಗಳು ಮತ್ತು ಷರತ್ತುಗಳು ಯಾವುದಾದರೂ ಇದ್ದರೆ ಅವುಗಳಿಗೊಳಪಟ್ಟು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ತನ್ನಲ್ಲಿ ನಿಹಿತವಾದ ಯಾವುದೇ ಒಂದು ಅಥವಾ ಹೆಚ್ಚಿನ ಅಧಿಕಾರಗಳನ್ನು ಚಲಾಯಿಸಲು ಅಧಿಕೃತಗೊಳಿಸಬಹುದು.

(2) (1) ನೇ ಉಪ–ಪ್ರಕರಣದ ಮೇರೆಗೆ ಪ್ರತ್ಯಾಯೋಜಿಸಲಾದ ಅಧಿಕಾರಗಳನ್ನು ಚಲಾಯಿಸುವುದು ರಾಜ್ಯ ಸರ್ಕಾರದ ಅಥವಾ ಈ ಬಗ್ಗೆ ಅದು ಶಕ್ತಗೊಳಿಸಬಹುದಾದಂಥ ವ್ಯಕ್ತಿಗಳ ನಿಯಂತ್ರಣ ಮತ್ತು ಪುನರೀಕ್ಷಣೆಗೆ ಒಳಪಟ್ಟಿರತಕ್ಕದ್ದು. ರಾಜ್ಯ ಸರ್ಕಾರವು ಹಾಗೆ ಶಕ್ತಗೊಳಿಸಲಾದ ಯಾವನೇ ವ್ಯಕ್ತಿಯ ಕಾರ್ಯಗಳು ಮತ್ತು ವ್ಯವಹರಣೆಗಳನ್ನು ನಿಯಂತ್ರಿಸಲು ಮತ್ತು ಪುನರೀಕ್ಷಣೆ ಮಾಡಲು ಸಹ ಅಧಿಕಾರವನ್ನು ಹೊಂದಿರತಕ್ಕದ್ದು.

**38. ಜಾತ್ರೆಗಳು ಮತ್ತು ಹಬ್ಬಗಳ ಕಾಲದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಅಮಾನತ್ತಿನಲ್ಲಿಡುವ ಸರ್ಕಾರದ ಅಧಿಕಾರ:–** ಜಾತ್ರೆಯ ಅಥವಾ ಹಬ್ಬದ ಅಥವಾ ಮೇಲಿಂದ ಮೇಲೆ ಬರುವ ಸಾರ್ವತ್ರಿಕ ದಿನಗಳಿಗೆ ಸಂಬಂಧಪಟ್ಟಂತೆ ಯಾವುದೇ ವಿಶೇಷ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಒಂದು ನಿರ್ದಿಷ್ಟ ಅವಧಿಗಾಗಿ ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉಪಬಂಧದ ಪ್ರವರ್ತನೆಯನ್ನು ಅಮಾನತ್ತಿನಲ್ಲಿಡಬಹುದು.

**39. ವಜಾ ನೋಟೀಸು:–** (1) ಯಾವನೇ ನಿಯೋಜಕನು ಆರು ತಿಂಗಳುಗಳಿಗಿಂತ ಕಡಿಮೆ ಇಲ್ಲದ ಅವಧಿಗಾಗಿ ನಿರಂತರವಾಗಿ ಅವನ ಅಧೀನದಲ್ಲಿ ಸೇವೆ ಸಲ್ಲಿಸಿರುವ ನಿಯೋಜಿತನನ್ನು ಸಮಂಜಸ ಕಾರಣಕ್ಕಾಗಿ ಅಲ್ಲದೆ ಮತ್ತು ಅವನಿಗೆ ಒಂದು ತಿಂಗಳು ಪೂರ್ವ ನೋಟಿಸು ಅಥವಾ ಅದಕ್ಕೆ ಬದಲಾಗಿ ವೇತನವನ್ನು ಕೊಟ್ಟಿದ್ದ ಹೊರತು ಮತ್ತು ಅಲ್ಲಿಯವರೆಗೆ ತೆಗೆದುಹಾಕತಕ್ಕದ್ದ. ಅಥವಾ ವಜಾ ಮಾಡತಕ್ಕದ್ದು:

ಪರಂತು, ನಿಯೋಜಿತನ ದುರ್ನಡತೆಯನ್ನು ಆ ಉದ್ದೇಶಕ್ಕಾಗಿ ನಡೆಸಿದ ವಿಚಾರಣೆಯಲ್ಲಿ ರುಜುವಾತಿನೊಂದಿಗೆ ದಾಖಲೆಯಲ್ಲಿ ತಂದಿರುವಲ್ಲಿ ಅವನು ಆ ನೋಟೀಸು ಅಥವಾ ಅಂತಹ ನೋಟಿಸಿಗೆ ಬದಲಾಗಿ ವೇತನಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದ ಮೇರೆಗೆ ತೆಗೆದುಹಾಕಲಾದ ಅಥವಾ ವಜಾ ಮಾಡಲಾದ ನಿಯೋಜಿತನು ನಿಯಮಿಸಬಹುದಾದಂಥ ಪ್ರದೇಶಗಳ ಮೇಲೆ ಅಥವಾ ನಿಯೋಜಿತರ ಅಂಥ ವರ್ಗಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವಂಥ ಅಧಿಕಾರಿಗಳಿಗೆ ಆ ತೆಗೆದು ಹಾಕುವಿಕೆಗೆ ಅಥವಾ ವಜಾ ಮಾಡಿರುವುದಕ್ಕೆ ಯಾವುದೇ ಸಮಂಜಸ ಕಾರಣವಿರಲಿಲ್ಲ ಅಥವಾ ನಿಯೋಜಕನು ತೀರ್ಮಾನಿಸಿದಂತೆ ತಾನು ದುರ್ನಡತೆಯ ತಪ್ಪಿತಸ್ಥನಾಗಿಲ್ಲವೆಂಬ ಆಧಾರದ ಮೇಲೆ ಅಪೀಲು ಮಾಡಿಕೊಳ್ಳಲು ಹಕ್ಕನ್ನು ಹೊಂದಿರತಕ್ಕದ್ದು.

(3) ಸಮಂಜಸ ಕಾರಣವಿಲ್ಲದೆ ಅಥವಾ ದುರ್ನಡತೆಯ ರುಜುವಾತಿಲ್ಲದೇ ನಿಯೋಜಿತನನ್ನು ತೆಗೆದು ಹಾಕಲಾಗಿದ್ದಲ್ಲಿ ಅಥವಾ ವಜಾ ಮಾಡಲಾಗಿದ್ದಲ್ಲಿ ಆ ನಿಯೋಜಕನು ಅವನನ್ನು ಪೂರ್ವ ಪದವಿಯಲ್ಲಿ ಇರಿಸಲು ಒಪ್ಪದಿದ್ದರೆ ಅವನು ಅಪೀಲು ಪ್ರಾಧಿಕಾರಿಯ ನಿರ್ಧರಿಸಬಹುದಾದಂಥ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಅಂಥ ನಷ್ಟ ಪರಿಹಾರವು ಸೇವೆಯ ಪ್ರತಿಯೊಂದು ವರ್ಷಕ್ಕೆ ಒಂದು ತಿಂಗಳ ವೇತನದಂತೆ ಲೆಕ್ಕ ಹಾಕಿದ ಮೊಬಲಗನ್ನು ಮೀರತಕ್ಕದ್ದಲ್ಲ. ಅದು ಯಾವುದೇ ಸಂದರ್ಭದಲ್ಲಿ ಆರು ತಿಂಗಳುಗಳ ವೇತನ ಗರಿಷ್ಠಕ್ಕೆ ಒಳಪಟ್ಟಿರತಕ್ಕದ್ದಲ್ಲ.

(4) ಅಪೀಲು ಪ್ರಾಧಿಕಾರದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅಂತಹ ಆದೇಶದ ಪುನರೀಕ್ಷಣೆಗಾಗಿ ಜಿಲ್ಲಾ ನ್ಯಾಯಾಧೀಶರಿಗೆ ಅರ್ಜಿ ಸಲ್ಲಿಸಬಹುದಾದ ಮತ್ತು ಅಂತಹ ಅರ್ಜಿ ಫಲಿತಾಂಶಕ್ಕೆ ಒಳಪಟ್ಟು ಅಫೀಲು ಪ್ರಾಧಿಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅದು ನಿಯೋಜಕ ಮತ್ತು ನಿಯೋಜಿತ ವ್ಯಕ್ತಿ ಇವರಿಬ್ಬರನ್ನು ಬದ್ಧಗೊಳಿಸತಕ್ಕದ್ದು.

(5) ಈ ಪ್ರಕರಣದ ಮೇರೆಗೆ ನಷ್ಟ ಪರಿಹಾರದಂತೆ ಸಂದಾಯವಾಗ ಬೇಕಾದ ಮೊಬಲಗು 30ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಜುಲ್ಮಾನೆಗೆ ಹೆಚ್ಚುವರಿಗಾಗಿ ಇರತಕ್ಕದ್ದು ಮತ್ತು ಜುಲ್ಮಾನೆಯಂತೆ ವಸೂಲಿಯವಾಗತಕ್ಕದ್ದು ಪಡೆದಿರುವ ಯಾವನೇ ನಿಯೋಜಿತನು ಅದೇ ಕ್ಲೇಮಿನ ಬಗ್ಗೆ ಸಿವಿಲ್ ದಾವೆಯನ್ನು ತರಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(6) ಈ ಪ್ರಕರಣದ ಮೇರೆಗೆ ನಷ್ಟ ಪರಿಹಾರವನ್ನು ಪಡೆದಿರುವ ಯಾವನೇ ನಿಯೋಜಿತನು ಅದೇ ಕ್ಲೇಮಿನ ಬಗ್ಗೆ ಸಿವಿಲ್ ದಾವೆಯನ್ನು ತರಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(7) ಯಾವುದೇ ಇತರ ಕಾನೂನಿನ ಮೇರೆಗೆ ಅಥವಾ ಐತೀರ್ಪು ಕರಾರು ಅಥವಾ ಸೇವಾ ಕರಾರಿನ ನಿಬಂಧನೆಗಳ ಮೇರೆಗೆ ಯಾವನೇ ನಿಯೋಜಿತನು (1) ನೇ ಉಪ–ಪ್ರಕರಣದಲ್ಲಿ ಅಥವಾ (3)ನೇ ಉಪ–ಪ್ರಕರಣದಲ್ಲಿ ಉಪಬಂಧಿಸಿರುವುದಕ್ಕಿಂತ ಹೆಚ್ಚಿನ ಅವಧಿಯ ನೋಟೀಸಿಗೆ ಅಥವಾ ಇನ್ನೂ ಅನುಕೂಲಕರ ಪ್ರಯೋಜನಗಳಿಗೆ ಹಕ್ಕುಳ್ಳವನಾಗಿದ್ದರೆ ಸದರಿ ಉಪ–ಪ್ರಕರಣಗಳ ಉಪ–ಬಂಧಗಳು ಈ ಅಧಿನಿಯಮದಲ್ಲಿ ಅಂಥ ನೋಟೀಸಿನ ಅವಧಿ ಮತ್ತು ಅಂಥ ಪ್ರಯೋಜನಗಳನ್ನು ಅಧಿನಿಯಮಿತಿಗೊಳಿಸಿದರೆ ಹೇಗೋ ಹಾಗೆ ಪರಿಣಾಮವುಳ್ಳದ್ದಾಗಿರತಕ್ಕದ್ದು.

**40. ನಿಯಮ ರಚನಾಧಿಕಾರ:–** (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ (1)ನೇ ಉಪ–ಪ್ರಕರಣದ ಮೇರೆಗೆ ರಚಿಸಿದ ನಿಯಮಗಳಲ್ಲಿ ನಿಯೋಜಿತರ ಆರೋಗ್ಯ ಮತ್ತು ಸುರಕ್ಷೆ ಮತ್ತು ಕಲ್ಯಾಣದ ಬಗ್ಗೆ ಉಪಬಂಧಿಸಬಹುದು.

(3) ಈ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವಲ್ಲಿ ರಾಜ್ಯ ಸರ್ಕಾರವು ಯಾವುದೇ ನಿಯಮದ ಉಲ್ಲಂಘನೆಗೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ಉಪಬಂಧಿಸಬಹುದು.

(4) ಈ ಪ್ರಕರಣದ ಮೂಲಕ ಪ್ರದತ್ತವಾದ ನಿಯಮ ರಚನಾಧಿಕಾರವು ನಿಯಮಗಳನ್ನು ಪೂರ್ವ ಪ್ರಕಟಣೆಯ ತರುವಾಯ ರಚಿಸಬೇಕೆಂಬ ಷರತ್ತಿಗೊಳಪಟ್ಟಿದೆ.

**41. ಅಧಿಸೂಚನೆಗಳನ್ನು ಮತ್ತು ನಿಯಮಗಳನ್ನು ರಾಜ್ಯ ವಿಧಾನಮಂಡಲ ಮುಂದೆ ಇರಿಸತಕ್ಕದ್ದು:–** 3ನೇ ಪ್ರಕರಣದ (3) ನೇ ಉಪ–ಪ್ರಕರಣದ ಮತ್ತು (4) ನೇ ಉಪ–ಪ್ರಕರಣದ 21ನೇ ಪ್ರಕರಣದ (1)ನೇ ಉಪ–ಪ್ರಕರಣ ಮತ್ತು 37ನೇ ಪ್ರಕರಣದ (1)ನೇ ಉಪ–ಪ್ರಕರಣ ಇವುಗಳ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಮತ್ತು 40ನೇ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮಗಳನ್ನು ಅದನ್ನು ಹೊರಡಿಸಿದ ಅಥವಾ ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅದಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದ ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ಅದಕ್ಕೆ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ಅಧಿಸೂಚನೆಯಲ್ಲಿ ಅಥವಾ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡು ಸದನಗಳು ಒಪ್ಪಿದರೆ ಅಥವಾ ಆ ಅಧಿಸೂಚನೆ ಅಥವಾ ನಿಯಮವನ್ನು ಮಾಡಕೂಡದೆಂದು ಎರಡು ಸದನಗಳು ಒಪ್ಪಿದರೆ ಆ ತರುವಾಯ ಆ ಅಧಿಸೂಚನೆ ಅಥವಾ ಸಂದರ್ಭಾನುಸಾರ ನಿಯಮವು ಹಾಗೆ ಮಾರ್ಪಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾತಕ್ಕದ್ದಲ್ಲ, ಅದಾಗ್ಯೂ, ಅಂತಹ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ಅಧಿಸೂಚನೆ ಅಥವಾ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿದ್ಧಾಂತಕ್ಕೆ ಬಾಧೆಯನ್ನು ಉಂಟು ಮಾಡತಕ್ಕದ್ದಲ್ಲ.

**42. ನಿರಸನ ಮತ್ತು ಉಳಿಸುವಿಕೆಗಳು:–** ಮುಂಬಯಿ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಮುಂಬಯಿ ಅಂಗಡಿಗಳು ಮತ್ತು ಕಾರ್ಯ ಸಂಸ್ಥೆಗಳ ಅಧಿನಿಯಮ. 1948 (ಮುಂಬಯಿ ಅಧಿನಿಯಮ 1947 ರ LXXIX) ಹೈದ್ರಾಬಾದ್ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಹೈದ್ರಾಬಾದ್ ಅಂಗಡಿಗಳು ಮತ್ತು ಕಾರ್ಯ ಸಂಸ್ಥೆಗಳ ಅಧಿನಿಯಮ, 1951 (ಹೈದ್ರಾಬಾದ್ ಅಧಿನಿಯಮ, 1951ರ X) ಮದ್ರಾಸು ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಮದ್ರಾಸ್ ಅಂಗಡಿಗಳು ಮತ್ತು ಕಾರ್ಯಸಂಸ್ಥೆಗಳ ಅಧಿನಿಯಮ, 1947 (ಮದ್ರಾಸ್ ಅಧಿನಿಯಮ 1947XXXVI) ಮತ್ತು ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಮೈಸೂರು ಅಂಗಡಿಗಳು ಮತ್ತು ಕಾರ್ಯಸಂಸ್ಥೆಗಳ ಅಧಿನಿಯಮ 1948 (ಮೈಸೂರು ಅಧಿನಿಯಮ 1948ರ–II) ಇವುಗಳನ್ನು ಈ ಮೂಲಕ ನಿರಸನಗೊಳಿಸಿದೆ:

ಪರಂತು, ಮೈಸೂರು ಸಾಮಾನ್ಯ ಖಂಡಗಳ ಅಧಿನಿಯಮ, 1899 (ಮೈಸೂರು ಅಧಿನಿಯಮ 1899ರ III)ರ 6ನೇ ಪ್ರಕರಣವು ಅಂಥ ನಿರಸನಕ್ಕೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8 ಮತ್ತು 26ನೇ ಪ್ರಕರಣಗಳು ಈ ಅಧಿನಿಯಮದ ಮೂಲಕ ಸದರಿ ಅಧಿನಿಯಮಗಳನ್ನು ನಿರಸನಗೊಳಿಸಲಾಗಿದ್ದು ಪುನಃ ಅಧಿನಿಯಮಿತಿಗೊಳಿಸಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**43. ಕೇಂದ್ರ ಅಧಿನಿಯಮ 1942ರ XVIII ದ ನಿರಸನ:–** ರಾಜ್ಯ ಯಾವುದೇ ಪ್ರದೇಶಕ್ಕೆ ಈ ಅಧಿನಿಯಮವು ಅನ್ವಯವಾಗುವಂಥ ದಿನಾಂಕದಂದು ಮತ್ತು ಅಂದಿನಿಂದ ವಾರದ ರಜಾದಿನಗಳ ಅಧಿನಿಯಮ, 1942 (ಕೇಂದ್ರ ಅಧಿನಿಯಮ 1942ರ XVIII) ವು ಅಂಥ ಪ್ರದೇಶದಲ್ಲಿ ನಿರಸನಗೊಳ್ಳತಕ್ಕದ್ದು:

ಪರಂತು, ಅಂಥ ನಿರಸನವು,–

(ಕ) ಸದರಿ ಅಧಿನಿಯಮಿತಿಯ ಪೂರ್ವ ಪ್ರವರ್ತನೆಯನ್ನು ಅಥವಾ ಅದರ ಮೇರೆಗೆ ಕ್ರಮಬದ್ಧವಾಗಿ ಮಾಡಿದ ಅಥವಾ ಮಾಡುವುದಕ್ಕೆ ಎಡೆ ಮಾಡಿಕೊಟ್ಟ ಯಾವುದೇ ಕಾರ್ಯವನ್ನು; ಅಥವಾ

(ಖ) ಸದರಿ ಅಧಿನಿಯಮಿತಿಯ ಮೇರೆಗೆ ಒದಗಿಬಂದ ಅಥವಾ ವಹಿಸಿದ ಯಾವುದೇ ಹಕ್ಕು ವಿಶೇಷ ಅಧಿಕಾರ, ಹೊಣೆಗಾರಿಕೆ ಅಥವಾ ಬಾಧ್ಯತೆಯನ್ನು; ಅಥವಾ

(ಗ) ಸದರಿ ಅಧಿನಿಯಮಿತಿಯ ವಿರುದ್ಧವಾಗಿ ಮಾಡಿದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ವಹಿಸಿದ ಯಾವುದೇ ದಂಡನೆ, ಮುಟ್ಟುಗೋಲು ಅಥವಾ ಶಿಕ್ಷೆಯನ್ನು; ಅಥವಾ

(ಘ) ಹಿಂದೆ ಹೇಳಿದಂತೆ ಯಾವುದೇ ಅಂಥ ಹಕ್ಕು, ವಿಶೇಷಾಧಿಕಾರ, ಹೊಣೆಗಾರಿಕೆ ಬಾಧ್ಯತೆ, ಮುಟ್ಟುಗೋಲು ಅಥವಾ ಶಿಕ್ಷೆಗೆ ಸಂಬಂಧಪಟ್ಟ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು, ಬಾಧಿಸತಕ್ಕದ್ದಲ್ಲ.

ಮತ್ತು ಈ ಅಧಿನಿಯಮವು ಆ ಪ್ರದೇಶಕ್ಕೆ ಅನ್ವಯಿಸದಿದ್ದರೆ ಹೇಗೋ ಹಾಗೆ ಯಾವುದೇ ಅಂಥ ತನಿಖೆ, ಕಾನೂನು ವ್ಯವಹರಣೆಯನ್ನು ಅಥವಾ ಪರಿಹಾರೋಪಾಯವನ್ನು ಹೂಡಬಹುದು ಅಥವಾ ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಯಾವುದೇ ಅಂಥ ದಂಡನೆ ಮುಟ್ಟುಗೋಲು ಅಥವಾ ಶಿಕ್ಷೆಯನ್ನು ವಿಧಿಸಬಹುದು.

**44. ತೊಂದರೆಗಳನ್ನು ನಿವಾರಿಸಲು ಅಧಿಕಾರ:–** ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದ ಅಧಿನಿಯಮಗಳ ಉಪಬಂಧಗಳಿಂದ ಈ ಅಧಿನಿಯಮದ ಉಪಬಂಧಗಳಿಗೆ ಪರಿವರ್ತನೆಗೊಳಿಸುವ ಪರಿಣಾಮವಾಗಿ ಸದರಿ ಉಪಬಂಧಗಳನ್ನು ಆಚರಣೆಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಈ ತೊಂದರೆ ನಿವಾರಿಸುವುದಕ್ಕಾಗಿ ತನಗೆ ಅವಶ್ಯ ಅಥವಾ ವಿಹಿತವೆಂದು ಕಂಡುಬರುವಂಥ ಉಪಬಂಧಗಳನ್ನು ಮಾಡಬಹುದು.

## ಅನುಸೂಚಿ

**(1ನೇ ಪ್ರಕರಣದ (4) ನೇ ಉಪ–ಪ್ರಕರಣವನ್ನು ನೋಡಿ)**

**ಸ್ಥಳಗಳ ಹೆಸರುಗಳು**

| | | |
|---|---|---|
| 1. ಅರಸೀಕೆರೆ ಪಟ್ಟಣ | 2. ಅಥಣಿ | 3. ಬಾಗಲಕೋಟೆ |
| 4. ಬೆಂಗಳೂರು ನಗರ | 5. ಬಂಗಾರಪೇಟೆ ಪಟ್ಟಣ | 6. ಬಂಟ್ವಾಳ |
| 7. ಬೆಳಗಾವಿ | 8. ಬೆಳ್ತಂಗಡಿ | 9. ಬಳ್ಳಾರಿ ನಗರ |
| 10. ಭದ್ರಾವತಿ ಪಟ್ಟಣ | 11. ಬೀದರ್ | 12. ಬಿಜಾಪುರ |
| 13. ಚಾಮರಾಜನಗರ ಪಟ್ಟಣ | 14. ಚನ್ನಪಟ್ಟಣ | 15. ಚಳ್ಳಕೆರೆ ಪಟ್ಟಣ |
| 16. ಚಿಕ್ಕಬಳ್ಳಾಪುರ ಪಟ್ಟಣ | 17. ಚಿಕ್ಕಮಗಳೂರು ಪಟ್ಟಣ | 18. ಚಿಂತಾಮಣಿ ಪಟ್ಟಣ |
| 19. ಚಿತ್ರದುರ್ಗ ಪಟ್ಟಣ | 20. ಕುಂದಾಪುರ | 21. ದಾವಣಗೆರೆ ನಗರ |
| 22. ಧಾರವಾಡ | 23. ದೊಡ್ಡಬಳ್ಳಾಪುರ ಪಟ್ಟಣ | 24. ಗದಗ್– ಬೆಟಗೇರಿ |
| 25. ಗೌರಿಬಿದನೂರು ಪಟ್ಟಣ | 26. ಗೋಕಾಕ್ | 27. ಗುಲ್ಬರ್ಗ |
| 28. ಗುಳೇದಗುಡ್ಡ | 29. ಹಡಗಲಿ ಪಂಚಾಯಿತಿ | 30. ಹಾರ್ನಹಳ್ಳಿ ಪಂಚಾಯಿತಿ ಪ್ರದೇಶ |
| 31. ಹರಿಹರ ಪಟ್ಟಣ | 32. ಹಾಸನ ಪಟ್ಟಣ | 33. ಹಿರಿಯೂರು |

34. ಹೊಸಪೇಟೆ ಪಟ್ಟಣ
35. ಹುಬ್ಬಳ್ಳಿ
36. ಇಳಕಲ್
37. ಜಮಖಂಡಿ
38. ಕಮಲಾಪುರ ಪಂಚಾಯಿತಿ ಪ್ರದೇಶ
39. ಕಂಪ್ಲಿ ಪಂಚಾಯಿತಿ ಪ್ರದೇಶ
40. ಕನಕಪುರ
41. ಕಾರ್ಕಳ
42. ಕಾರವಾರ
43. ಕೋಲಾರ ಪಟ್ಟಣ
44. ಕೋಲಾರ ಚಿನ್ನದ ಗಣಿ ಪ್ರದೇಶ
45. ಕೊಳ್ಳೆಗಾಲ
46. ಕೊಪ್ಪಳ
47. ಕೊಟ್ಟೂರು ಪಂಚಾಯಿತಿ ಪ್ರದೇಶ
48. ಕೂಡ್ಲಿಗಿ ಪಂಚಾಯಿತಿ ಪ್ರದೇಶ
49. ಮದ್ದೂರು
50. ಮಹಾಲಿಂಗಪುರ
51. ಮಳವಳ್ಳಿ
52. ಮಂಡ್ಯ ಪಟ್ಟಣ
53. ಮಧುಗಿರಿ ಪಟ್ಟಣ
54. ಮಂಗಳೂರು
55. ಮೂಡಬಿದ್ರಿ
56. ಮುಲ್ಕಿ
57. ಮೈಸೂರು ನಗರ
58. ನಂಜನಗೂಡು ಪಟ್ಟಣ
59. ನಿಪ್ಪಾಣಿ
60. ಪುತ್ತೂರು
61. ರಬಕವಿ – ಬನಹಟ್ಟಿ
62. ರಾಯಚೂರು
63. ರಾಮನಗರ
64. ಸಾಗರ
65. ಸಕಲೇಶಪುರ ಪಟ್ಟಣ
66. ಸಂಡೂರು
67. ಷಹಾಬಾದ್
68. ಶಿಕಾರಿಪುರ
69. ಶಿವಮೊಗ್ಗ ಪಟ್ಟಣ
70. ಶಿಡ್ಲಘಟ್ಟ
71. ಶಿರಾ ಪಟ್ಟಣ
72. ಸಿರಸಿ
73. ಸಿರಗುಪ್ಪ ಪಂಚಾಯಿತಿ ಪ್ರದೇಶ
74. ಶ್ರೀನಿವಾಸಪುರ
75. ಶ್ರೀರಂಗಪಟ್ಟಣ
76. ತೀರ್ಥಹಳ್ಳಿ
77. ತಿಪಟೂರು ಪಟ್ಟಣ
78. ತುಮಕೂರು ಪಟ್ಟಣ
79. ಉಡುಪಿ
80. ಯಾದಗಿರಿ

**ಅಧಿಸೂಚನೆ**

**ಬೆಂಗಳೂರು ದಿನಾಂಕ 31ನೇ ಡಿಸೆಂಬರ್ 1963**

ಜಿಎಸ್‌ಆರ್ 15–ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 8)ರ 40ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂಲಕ ಪ್ರಧಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ. ಅವುಗಳ ಕರಡನ್ನು ಸದರಿ ಪ್ರಕರಣವನ್ನು (4)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ 1963ರ ಮೇ 16ನೇ ದಿನಾಂಕದ ಕರ್ನಾಟಕ ರಾಜ ಪತ್ರದಲ್ಲಿ 1963ನೇ ಮೇ 10ನೇ ದಿನಾಂಕದ ಅಧಿಸೂಚನೆ ಸಂಖ್ಯೆ ಪಿಎಂಎಲ್ 82 ಎಲ್‌ಎಸ್‌ಸಿ 61ರಲ್ಲಿ ಪ್ರಕಟಿಸಲಾಗಿದೆ ಎಂದರೆ,–

**ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ನಿಯಮಗಳು 1963**

**1. ಶೀರ್ಷಿಕೆ:–** ಈ ನಿಯಮಗಳನ್ನು ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ನಿಯಮಗಳೆಂದು ಕರೆಯತಕ್ಕದ್ದು.

**2. ಪರಿಭಾಷೆಗಳು:–** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು;

(ಕ) 'ಅಧಿನಿಯಮ' ಎಂದರೆ, ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ; 1961

(ಖ) 'ನಮೂನೆ' ಎಂದರೆ, ಈ ನಿಯಮಗಳಿಗೆ ಲಗತ್ತಿಸಿದ ನಮೂನೆ;

(ಗ) 'ಸರ್ಕಾರ' ಎಂದರೆ, ಕರ್ನಾಟಕ ಸರ್ಕಾರ,.

(ಘ) 'ಅನುಸೂಚಿ' ಎಂದರೆ; ಈ ನಿಯಮಗಳಿಗೆ ಲಗತ್ತಿಸಿದ ಅನುಸೂಚಿ,

(ಙ) 'ಪ್ರಕರಣ' ಎಂದರೆ; ಈ ಅಧಿನಿಯಮದ ಪ್ರಕರಣ,

(ಚ) ಈ ಅಧಿನಿಯಮದಲ್ಲಿ ಉಪಯೋಗಿಸಿದ ಮತ್ತು ನಿಯಮಗಳಲ್ಲಿ ಪರಿಭಾಷಿಸಿಲ್ಲದ ಪದಗಳು ಮತ್ತು ಪದಾವಳಿಗಳು ಅಧಿನಿಯಮದಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥಗಳನ್ನು ಹೊಂದಿರತಕ್ಕದ್ದು.

**3. ಕಾರ್ಯಸಂಸ್ಥೆಗಳ ನೋಂದಣಿ ಇತ್ಯಾದಿ:–** (1) 4ನೇ ಪ್ರಕರಣದ 3ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಪ್ರತಿಯೊಂದು ಕಾರ್ಯಸಂಸ್ಥೆಯ ನಿಯೋಜಕನು ಸಂಬಧಪಟ್ಟ ಪ್ರದೇಶದ ಪರಿಶೀಲಕನಿಗೆ (1) ನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಫೀಜುಗಳೊಂದಿಗೆ "ಕ" ನಮೂನೆಯಲ್ಲಿ ವಿವರ ಪತ್ರವನ್ನು ಕಳುಹಿಸತಕ್ಕದ್ದು.

(2) (1)ನೇ ಉಪನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಫೀಜಗಳನ್ನು ಸ್ಥಳೀಯ ಖಜಾನೆಗೆ "XXI ಸಂಕೀರ್ಣ– ಖ ಕಾರ್ಮಿಕ' ಲೆಕ್ಕದ ಶೀರ್ಷಿಕೆಯ ಅಡಿಯಲ್ಲಿ ಸಂದಾಯ ಮಾಡತಕ್ಕದ್ದು ಮತ್ತು ಅದಕ್ಕಾಗಿ ಪಡೆದುಕೊಂಡ ರಸೀದಿಯನ್ನು "ಕ" ನಮೂನೆ ಜೊತೆಗೆ ಕಳುಹಿಸತಕ್ಕದ್ದು.

**4. ಕಾರ್ಯಸಂಸ್ಥೆಯನ್ನು ನೋಂದಾಯಿಸುವ ರೀತಿ ಮತ್ತು ನೋಂದಣಿ ಪ್ರಮಾಣಪತ್ರದ ನಮೂನೆ:–** 3ನೇ ನಿಯಮದಲ್ಲಿ ನಿಯಮಿಸಿದ ವಿವರಪತ್ರ ಮತ್ತು ಫೀಜುಗಳನ್ನು ಪರಿಶೀಲಕನು ಆ ವಿವರಣಾಪತ್ರದ ಸರಿತನದ ಬಗ್ಗೆ ಮನದಟ್ಟು ಮಾಡಿಕೊಂಡ ತರುವಾಯ "ಖ" ನಮೂನೆಯಲ್ಲಿರತಕ್ಕಂಥ ಕಾರ್ಯಸಂಸ್ಥೆಗಳ ರಿಜಿಸ್ಟರಿನಲ್ಲಿ

ಕಾರ್ಯಸಂಸ್ಥೇಯಲ್ಲಿ ನೊಂದಾಯಿಸಿತಕ್ಕದ್ದು ಮತ್ತು ನಿಯೋಜಕನು "ಗ" ನಮೂನೆಯಲ್ಲಿ ನೊಂದಣಿ ಪ್ರಮಾಣಪತ್ರವನ್ನು ಕೊಡತಕ್ಕದ್ದು.

**5. ಬದಲಾವಣೆಗಳನ್ನು ಅಧಿಸೂಚಿಸುವ ಬಗೆ:–** ನಿಯೋಜಕನು "ಫ" ನಮೂನೆಯಲ್ಲಿ 3ನೇ ನಿಯಮದ ಮೇರೆಗಿನ ಅವನ ವಿವರ ಪತ್ರದಲ್ಲಿ ಅಡಕವಾದ ಯಾವುದೇ ಮಾಹಿತಿಗೆ ಸಂಬಂಧಿಸಿದಂತೆ ಯಾವುದೇ ಬದಲಾವಣೆಯು ಆದ ತರುವಾಯ ಹದಿನೈದು ದಿವಸಗಳೊಳಗಾಗಿ ಪರಿಶೀಲಕನಿಗೆ ತಿಳಿಸತಕ್ಕದ್ದು.

**6. ಕೆಲವು ರಿಯಾಯಿತಿಗಳ ಸಮಾನ ನಗದನ್ನು ಲೆಕ್ಕ ಹಾಕುವುದು:–** (1) ರಜೆಯ ಮೇಲೆ ಹೋಗುವ ಕೆಲಸಗಾರರಿಗೆ ಸಂದಾಯವಾಗಬೇಕಾದ ಆಹಾರ ಧಾನ್ಯಗಳು ಮತ್ತು ಇತರ ವಸ್ತುಗಳನ್ನು ರಿಯಾಯಿತಿ ಮಾರಾಟದ ಮೂಲಕ ಒದಗಿ ಬರುವ ಪ್ರಯೋಜನದ ಸಮಾನ ನಗದು ಅಥವಾ ಮಜೂರಿಗಳ ಅತಿಕಾಲಿಕ ದರವನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ಅದು ಅವನ ರಜೆಗೆ ನಿಕಟ ಪೂರ್ವದ ತಿಂಗಳಿನಲ್ಲಿ ಅತಿ ಸಮೀಪದ ಮಾರುಕಟ್ಟೆಯಲ್ಲಿ ಇದ್ದ ಸರಾಸರಿ ದರಗಳ ಮೌಲ್ಯ ಮತ್ತು ಅವನು ಅರ್ಹನಾಗಿರುವ ಆಹಾರ ಧಾನ್ಯಗಳಿಗೆ ಮತ್ತು ಇತರ ವಸ್ತುಗಳಿಗೆ ಅನುಮತಿಸಲಾದ ರಿಯಾಯಿತಿ ರದಗಳ ಮೌಲ್ಯ ಇವುಗಳ ನಡುವಣ ವ್ಯತ್ಯಾಸವಾಗಿರತಕ್ಕದು.

(2) ಸಮಾನ ನಗದಿನ ಉದ್ದೇಶಕ್ಕಾಗಿ ಆಹಾರ ಧಾನ್ಯಗಳ ಮತ್ತು ಇತರ ವಸ್ತುಗಳ ತಿಂಗಳಿನ ಸರಾಸರಿ ಮಾರುಕಟ್ಟೆ ದರವು ಕಾರ್ಮಿಕ ಇಲಾಖೆಯು ಲೆಕ್ಕ ಹಾಕಿದಂತೆ ಇರತಕ್ಕದ್ದು.

**7. ಕಾರ್ಯಸಂಸ್ಥೆಗಳನ್ನು ತೆರೆಯುವ ಮತ್ತು ಮುಚ್ಚುವ ವೇಳೆಗಳನ್ನು ನಿಗದಿಪಡಿಸುವುದಕ್ಕಾಗಿ ವಿಚಾರಣೆ:–** (1) 11ನೇ ಪ್ರಕರಣದ (1) ನೇ ಉಪ–ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ ಸರ್ಕಾರವು ಈ ಕೆಳಕಂಡ ಉಪ–ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ 11ನೇ ಪ್ರಕರಣದ (2) ನೇ ಉಪ–ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸತಕ್ಕದ್ದು.

(2) ಸರ್ಕಾರದ ಅಂತಹ ಆದೇಶವನ್ನು ಮಾಡಲು ಅದರ ಉದ್ದೇಶದ ನೋಡೀಸನ್ನು ಕೊಡತಕ್ಕದ್ದು. ಆ ನೋಟಿಸು "ಜ" ನಮೂನೆಯಲ್ಲಿರತಕ್ಕದ್ದು ಮತ್ತು ಮಾಡಲು ಉದ್ದೇಶಿಸಲಾದ ಆದೇಶದ ಪ್ರತಿಯನ್ನು ಅದಕ್ಕೆ ಲಗತ್ತಿಸಿದ ಹೊರತು ಆ ಆದೇಶವು ಅನ್ವಯವಾಗತಕ್ಕಂಥ ಪ್ರದೇಶ ಮತ್ತು ಕಾರ್ಯಸಂಸ್ಥೆ ಅಥವಾ ಕಾರ್ಯಸಂಸ್ಥೆಗಳ ವರ್ಗ ಅಥವಾ ವರ್ಗಗಳು ನಿಗದಿಪಡಿಸಬೇಕೆಂದು ಪ್ರಸ್ತಾವಿಸಲಾಗಿರುವಂಥ ತೆರೆಯುವ ವೇಳೆಗಳು ಅಥವಾ ಮುಚ್ಚುವ ವೇಳೆಗಳು ಅಥವಾ ಅವೆರಡನ್ನು ಮತ್ತು ಯಾವ ದಿವಸಗಳಿಗಾಗಿ ಅಂತಹ ವೇಳೆಗಳನ್ನು ನಿಗದಿಪಡಿಸಬೇಕೆಂದು ಪ್ರಸ್ತಾವಿಸಲಾಗಿದೆಯೋ ಆ ದಿವಸವನ್ನು ನಿರ್ದಿಷ್ಟಪಡಿಸತಕ್ಕದ್ದು. ಆ ನೋಟೀಸು ಅಂತಹ ಆದೇಶಗಳಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಮತ್ತು ಸೂಚನೆಗಳು ಯಾವುದಾದರೂ ಇದ್ದರೆ ಅವುಗಳನ್ನು ಇಂತಹ ನೊಟೀಸಿನ ದಿನಾಂಕದಿಂದ ಒಂದು ತಿಂಗಳೊಳಗೆ ಆ ನೋಟಿಸಿನಲ್ಲಿ ನಮೂದಿಸಿದ ಅಧಿಕಾರಿಗೆ ಕಳುಹಿಸಬಹುದೆಂದು ಸಹ ತಿಳಿಸತಕ್ಕದ್ದು.

(3) ಆ ನೊಟೀಸನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದು ಮತ್ತು ಅಂತಹ ನೋಟಿಸಿನ ಪ್ರತಿಯನ್ನು ರಾಜ್ಯ ಸರ್ಕಾರವು ಸೂಕ್ತವೆಂದು ಭಾವಿಸುವಂತೆ ಆ ಆದೇಶವನ್ನು ಅನ್ವಯಿಸಬೇಕೆಂದು ಪ್ರಸ್ತಾವಿಸಲಾದಂಥ ಪ್ರದೇಶದಲ್ಲಿ ಅಂತ ಸಾರ್ವಜನಿಕ ಸ್ಥಳಗಳಲ್ಲಿ ಅಂಟಿಸತಕ್ಕದ್ದು. ಆ ನೋಟಿಸಿನ ಪ್ರತಿಗಳನ್ನು ಅಂತಹ ಪ್ರದೇಶವು ಯಾವುದರ ಅಧಿಕಾರ ವ್ಯಾಪ್ತಿಯಲ್ಲಿ ಇರುವುದೋ ಆ ಸ್ಥಳೀಯ ಪ್ರಾಧಿಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಸೂಕ್ತವೆಂದು ಭಾವಿಸವಂಥ ಸಂಘಗಳು ಅಥವಾ ಸಂಸ್ಥೆಗಳಿಗೆ ಕಳುಹಿಸತಕ್ಕದ್ದು. ನೊಟೀಸನ್ನು ಅಂತಹ ಪ್ರದೇಶದಲ್ಲಿ ಪ್ರಸಾರವನ್ನು ಹೊಂದಿರುವ ಕನಿಷ್ಟ ಪಕ್ಷ ಒಂದು ವೃತ್ತಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು.

(4) ರಾಜ್ಯ ಸರ್ಕಾರವು 11ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ ಅದು ಸ್ವೀಕರಿಸಿದ ಎಲ್ಲಾ ಆಕ್ಷೇಪಣೆಗಳನ್ನು ಮತ್ತು ಸೂಚನೆಗಳನ್ನು ಪರ್ಯಾಲೋಚಿಸತಕ್ಕದ್ದು.

**8. ಮಜೂರಿಗಳ ಸಹಿತ ರಜೆ ರಿಜಿಸ್ಟರು:–** 1) ನಿಯೋಜಕರು "ಚ" ನಮೂನೆಯಲ್ಲಿ ಮಜೂರಿಗಳ ರಜೆ ರಿಜಿಸ್ಟರನ್ನು ಇಡತಕ್ಕದ್ದು ಮತ್ತು ಅದು ಯಾವ ವರ್ಷಕ್ಕೆ ಸಂಬಂಧಪಟ್ಟಿದೆಯೋ ಆ ವರ್ಷಕ್ಕೆ 1ನೇ ಸೆಪ್ಟಂಬರ್‌ನ ತರುವಾಯ ಮೀರದಂತೆ "ಛ" ನಮೂನೆಯಲ್ಲಿ ಸಂಬಂಧಪಟ್ಟ ಪರಿಶೀಲಕನಿಗೆ ವಿವರ ಪಟ್ಟಿಕೆಯನ್ನು ಸಲ್ಲಿಸತಕ್ಕದ್ದು:

ಪರಂತು, ಕಾರ್ಯಸಂಸ್ಥೆಯು ಮಾಮೂಲಾಗಿ ಇಟ್ಟುಕೊಂಡು ಬಂದಿರುವ ಯಾವುದೇ ಹಾಜರಿಪಟ್ಟಿ ಅಥವಾ ರಿಜಿಸ್ಟರು ಅಥವಾ ನಿಯೋಜಕನು ಕೊಟ್ಟ ವಿವರ ಪಟ್ಟಿಕೆಯು ಆ ಕಾರ್ಯಸಂಸ್ಥೆಯಲ್ಲಿ ನಿಯೋಜಿತರಾದ ಯಾವನೇ ಅಥವಾ ಎಲ್ಲಾ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಅಧಿನಿಯಮದ 4ನೇ ಅಧ್ಯಾಯವನ್ನು ಜಾರಿಗೊಳಿಸುವುದಕ್ಕಾಗಿ ವಿವರಗಳನ್ನು ಕೊಟ್ಟಿದೆ ಎಂದು ಪರೀಶಿಲಕನು ಅಭಿಪ್ರಾಯ ಪಡುವಲ್ಲಿ ಅವನು ಬರಹದಲ್ಲಿನ ಅದೇಶದ ಮೂಲಕ ಅಂಥ ಹಾಜರಿಪಟ್ಟಿ ರಿಜಿಸ್ಟರು ಅಥವಾ ವಿವರ ಪಟ್ಟಿಕೆಯನ್ನು ಅದು ಹೋಲುವಷ್ಟರಮಟ್ಟಿಗೆ ಆ ಕಾರ್ಯಸಂಸ್ಥೆಗಾಗಿ ಈ ನಿಯಮದ ಮೇರೆಗೆ ಅಗತ್ಯಪಡಿಸಿದ ರಿಜಿಸ್ಟರು ಅಥವಾ ವಿವರಪಟ್ಟಿಕೆಗೆ ಬದಲಾಗಿ ಇಟ್ಟುಕೊಂಡು ಬರತಕ್ಕದ್ದು ಮತ್ತು ಅವುಗಳನ್ನು ಹಾಗೆಂದು ಪರಿಗಣಿಸತಕ್ಕದ್ದೆಂದು ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ರಿಜಿಸ್ಟರನ್ನು ಅದರಲ್ಲಿನ ಕೊನೆಯ ನಮೂದಿನ ತರುವಾಯ ಮೂರು ವರ್ಷಗಳ ಅವಧಿಯವರೆಗೆ ಪರಿರಕ್ಷಿಸತಕ್ಕದ್ದು ಮತ್ತು ಅದನ್ನು ತಗಾದೆ ಮಾಡಿದಾಗ ಪರಿಶೀಲಕನ ಮುಂದೆ ಹಾಜರುಪಡಿಸತಕ್ಕದ್ದು.

**(9) ನಿಯೋಜಿತರಾದ ವ್ಯಕ್ತಿಗಳ ಮಜೂರಿಗಳ ರಜೆ ಪುಸ್ತಕ:–** (1) ನಿಯೋಜಕನು "ಜ" ನಮೂನೆಯಲ್ಲಿ "ಮಜೂರಿಗಳ ಸಹಿತ ರಜೆ ಪುಸ್ತಕ" ಎಂದು ಕರೆಯಲಾದ ಪುಸ್ತಕವನ್ನು ಪ್ರತಿಯೊಬ್ಬ ನಿಯೋಜಿತನಿಗೆ ಒದಗಿಸತಕ್ಕದ್ದು. ಆ ಪುಸ್ತಕವು ನಿಯೋಜಿತನ ಸ್ವತ್ತಾಗಿರತಕ್ಕದ್ದು ಮತ್ತು ಅದರಲ್ಲಿ ಕಾಲಕಾಲಕ್ಕೆ ನಿಯೋಜಕನು ರಜೆ ದಿವಸಗಳ ದಿನಾಂಕಗಳು ಅಥವಾ ಸೇವಾ ಭಂಗ ನಮೂದನೆಗಳನ್ನು ಮಾಡತಕ್ಕದ್ದು. ನಿಯೋಜಕನು ನಮೂದುಗಳನ್ನು ಮಾಡುವುದಕ್ಕೆ ಅದನ್ನು ಒಂದು ಬಾರಿಗೆ ಹತ್ತು ದಿವಸಗಳಿಗಿಂತ ಹೆಚ್ಚಾಗಿ ಇಟ್ಟುಕೊಳ್ಳತಕ್ಕದ್ದಲ್ಲ.

(2) ನಿಯೋಜಕನು, ನಿಯೋಜಿತನು ಅವನ ಮಜೂರಿಗಳ ಸಹಿತ ರಜೆ ಪುಸ್ತಕವನ್ನು ಕಳೆದುಕೊಂಡಿದ್ದಾನೆಂದು ಮನದಟ್ಟು ಮಾಡಿಕೊಂಡ ಮೇಲೆ ಅವನಿಗೆ 25 ಪೈಸೆ ಸಂದಾಯದ ಮೇಲೆ ಅದರ ದ್ವಿಪ್ರತಿಯನ್ನು ಒದಗಿಸತಕ್ಕದ್ದು.

**10. ನಿಯೋಜಿತನಿಂದ ವೈದ್ಯಕೀಯ ಪ್ರಮಾಣಪತ್ರದ ಹಾಜರುಪಡಿಸುವಿಕೆ:–** ನಿಯೋಜಕನು ಬರಹದಲ್ಲಿ ಹಾಗೆ ಅಗತ್ಯಪಡಿಸಿದರೆ ನಿಯೋಜಿತನು ಗೈರು ಹಾಜರಿಯ ಕಾರಣ ಮತ್ತು ಅವರ ಅಭಿಪ್ರಾಯದಲ್ಲಿ ನಿಯೋಜಿತನು ಅವನು ಕೆಲಸಕ್ಕೆ ಹಾಜರಾಗಲು ಅಸಮರ್ಥನಾದಂಥ ಅವಧಿಯನ್ನು ತಿಳಿಸುವ ನೋಂದಾಯಿತ ಅಥವಾ ಮನ್ನಣೆ ಪಡೆದ ವೈದ್ಯ ವೃತ್ತಿಗಳ ಅಥವಾ ವೈದ್ಯ ಅಥವಾ ಹಕೀಮನು ರುಜು ಮಾಡಿದ ವೈದ್ಯಕೀಯ ಪ್ರಮಾಣಪತ್ರವನ್ನು ಒಪ್ಪಿಸತಕ್ಕುದ್ದು.

**11. ಅವನಿಗೆ ಒಂದು ವರ್ಷದಲ್ಲಿ ಬರಬೇಕಾದ ಮಜೂರಿಗಳ ಸಹಿತ ರಜೆಯನ್ನು ಅವನು ಉಪಯೋಗಿಸಿಕೊಳ್ಳದೆ ಇರುವುದಕ್ಕಾಗಿ ನಿಯೋಜಿತನಿಂದ ನೋಟೀಸು:–** 15ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ಕಾರ್ಯಸಂಸ್ಥೆಯಲ್ಲಿ 240 ದಿವಸಗಳ ಅವಧಿಯ ನಿರಂತರ ಸೇವೆಯನ್ನು ಮುಗಿಸುವುದಕ್ಕಿಂತ ಮುಂಚೆ ಅಥವಾ

ಆ ತರುವಾಯ ನಿಯೋಜಿತನು ನಿಯೋಜಕನಿಗೆ ಮುಂದೆ ಬರುವ 240 ದಿವಸಗಳ ಅವಧಿಯಲ್ಲಿ ಬಾಕಿಯಾಗುವ ಮಜೂರಿ ಸಹಿತ ರಜೆಗಳನ್ನು ಅವನು ಉಪಯೋಗಿಸಿಕೊಳ್ಳದೇ ಇರುವ ಅವನ ಸಹಿತ ರಜೆಗಳನ್ನು ಅವನು ಉಪಯೋಗಿಸಿಕೊಳ್ಳದೇ ಇರುವ ಅವನ ಉದ್ದೇಶದ ನೋಟೀಸನ್ನು ಕೊಡಬಹುದು. ನಿಯೋಜಿಕನು ಆ ರಿಜಿಸ್ಟರಿನಲ್ಲಿ ಮತ್ತು ಅಂಥ ನಿಯೋಜಿತನ ಮಜೂರಿಗಳ ಸಹಿತ ರಜೆಯ ಪುಸ್ತಕದಲ್ಲಿ ಈ ಬಗ್ಗೆ ನಮೂದನೆಯನ್ನು ಮಾಡತಕ್ಕದ್ದು.

**12. ನಿಯೋಜಕನು ಮಜೂರಿಗಳ ಸಹಿತ ರಜೆಯ ಕಾರ್ಯಕ್ರಮವನ್ನು ತಯಾರಿಸತಕ್ಕದ್ದು:–** ಯಾವ ವರ್ಷದಲ್ಲಿ ಮಜೂರಿಗಳ ಸಹಿತ ರಜೆಯು ಒದಗಿಬರುವುದೋ ಆ ವರ್ಷದಲ್ಲಿ ಅದನ್ನು ಅವನು ಉಪಯೋಗಿಸಿಕೊಳ್ಳದೇ ಇರುವ ಅವನ ಉದ್ದೇಶದ ಬಗ್ಗೆ ನೋಟಿಸನ್ನು ಕೊಟ್ಟಿರುವ ನಿಯೋಜಿತನಿಗೆ ಸಂಬಂಧಿಸಿದಂತೆ ಹೊರತು ನಿಯೋಜಕನು ಪ್ರತಿಯೊಂದು 240 ದಿವಸಗಳ ಎರಡು ಅವಧಿಗಳ ಮಜೂರಿಗಳ ಸಹಿತ ಅವನ ರಜೆಯನ್ನು ಮಾಡಿಟ್ಟುಕೊಂಡಿರುವ ನಿಯೋಜಿತನನ್ನು ಒಳಗೊಂಡು ಸಂದರ್ಭಾನುಸಾರ ಪ್ರತಿಯೊಬ್ಬ ನಿಯೋಜತನಿಗೆ ಅಥವಾ ನಿಯೋಜಿತರ ಗುಂಪುಗಳಿಗೆ ಮಜೂರಿಗಳ ಸಹಿತ ರಜೆಗಳನ್ನು ಯಾವ ದಿನಾಂಕಗಳಂದು ಕೊಡತಕ್ಕದ್ದೋ ಆ ದಿನಾಂಕಗಳನ್ನು ನಿರೂಪಿಸಿ ರಜಾ ದಿವಸಗಳ ಕಾರ್ಯಕ್ರಮಗಳನ್ನು ತಯಾರಿಸತಕ್ಕದ್ದು ಮತ್ತು ಹಾಗೆ ನಿಗದಿಪಡಿಸಿದ ದಿನಾಂಕಗಳ ನೋಟಿಸನ್ನು ಪ್ರತಿಯೊಬ್ಬ ನಿಯೋಜಕನಿಗೆ ಕೊಡತಕ್ಕದ್ದು. ನಿಯೋಜಕನು ಹಾಗೆ ನಿಗದಿಪಡಿಸಿದ ಯಾವುದೇ ದಿನಾಂಕವು ಯಾವುದೇ ವೈಯಕ್ತಿಕ ಪ್ರಕರಣದಲ್ಲಿ ನಿಯೋಜಿತನು ಮಜೂರಿಗಳ ಸಹಿತ ರಜೆಯನ್ನು ಇನ್ನು ಮೊದಲೇ ತೆಗೆದುಕೊಳ್ಳಲು ಒಪ್ಪಿದ ಹೊರತು, ನಿಯೋಜಕನು ಹಿಂದೆ ಹೇಳಿದಂತೆ ನೋಟಿಸನ್ನು ಕೊಟ್ಟಿರುವಂಥ ದಿನಾಂಕದಿಂದ ಮೂರು ವಾರಗಳಿಗಿಂತ ಮುಂಚಿತವಾಗಿರೆತಕ್ಕದ್ದದಲ್ಲ. ಅವಶ್ಯಕವಾದ ನಮೂದನೆಗಳನ್ನು ರಿಜಿಸ್ಟರು ಮತ್ತು ಮಜೂರಿಗಳ ಸಹಿತ ರಜೆ ಪುಸ್ತಕದಲ್ಲಿ ಮಾಡತಕ್ಕದ್ದು.

**13. ಒಂದೇ ಕುಟುಂಬದ ಸದಸ್ಯರಿಗೆ ಅದೇ ದಿನಾಂಕದಂದು ರಜೆಯನ್ನು ಕೊಡತಕ್ಕದ್ದು:–** ಸಂದರ್ಭಗಳು ಅನುಮತಿಸುವಷ್ಟರ ಮಟ್ಟಿಗೆ ಒಂದೇ ಕುಟುಂಬದ ಸದಸ್ಯರಾಗಿರುವ ನಿಯೋಜಿತರಿಗೆ ಅದೇ ದಿನಾಂಕದಂದು ರಜೆಯನ್ನು ಕೊಡತಕ್ಕದ್ದು.

**14. ರಜೆಗಾಗಿ ನಿಗದಿಪಡಿಸಿದ ದಿನಾಂಕಗಳ ಬದಲಾವಣೆಯ ಬಗೆ ನಿಯೋಜಕನಿಂದ ನೊಟೀಸು:–** ರಜೆಗಾಗಿ ನಿಗದಿಪಡಿಸಿದ ದಿನಾಂಕಗಳನ್ನು ನಿಯೋಜಕನಿಗೆ ಹದಿನೈದು ದಿವಸಗಳ ನೊಟೀಸನ್ನು ಕೊಟ್ಟ ತರುವಾಯ ಮಾತ್ರವೇ ಬದಲಾಯಿಸಬಹುದು.

**15. ನಿಯೋಜಿತರ ನಡುವೆ ರಜೆಯ ವಿನಿಮಯ:–** ಯಾವನೇ ನಿಯೋಜಿತನು ನಿಯೋಜನಕನ ಅನುಮೋದನೆಯೊಂದಿಗೆ ಅವನ ರಜೆಯ ಅವಧಿಯನ್ನು ಇನ್ನೊಬ್ಬ ನಿಯೋಜಿತನೊಂದಿಗೆ ವಿನಿಮಯ ಮಾಡಿಕೊಳ್ಳಬಹುದು.

**16. ಕಾರ್ಯಸಂಸ್ಥೆಯ ಸ್ವಚ್ಛತೆ:–** (1) (ಕ) ಪ್ರತಿಯೊಂದು ಕಾರ್ಯಸಂಸ್ಥೆಯಲ್ಲಿ ಕೊಠಡಿಗಳ ಎಲ್ಲಾ ಒಳಗೋಡೆಗಳು ಮತ್ತು ಅಂತಹ ಕೊಠಡಿಗಳ ಎಲ್ಲಾ ಒಳಮಾಳಿಗೆಗಳು ಅಥವಾ ಛಾವಣಿಗಳು (ಅಂಥ ಗೋಡೆಗಳು, ಒಳಮಾಳಿಗೆಗಳು ಅಥವಾ ಛಾವಣಿಗಳಿಗೆ ಗಿಲಾವು ಮಾಡಿರಲಿ ಅಥವಾ ಮಾಡಿಲ್ಲದಿರಲಿ) ಮತ್ತು ಎಲ್ಲಾ ದಾರಿಗಳು ಮತ್ತು ಪಾವಟಿಗಳಿಗಳಿಗೆ ಕೊನೆಯ ಸಲ ಸುಣ್ಣ ಹೊಡೆದಾಗಿನ ಅವಧಿಯಿಂದ ಕನಿಷ್ಟ ಪಕ್ಷ ವರ್ಷದಲ್ಲೊಮ್ಮೆ ಸುಣ್ಣ ಹಚ್ಚತಕ್ಕದ್ದು. ಎಲ್ಲಾ ತೊಲೆಗಳಿಗೆ, ದೂಲಗಳಿಗೆ, ಬಾಗಿಲುಗಳಿಗೆ ಕಿಟಕಿ ಚೌಕಟ್ಟುಗಳಿಗೆ ಮತ್ತು ಇತರ ಮರದ ಸಾಮಾನಿಗೆ ನೆಲಗಳನ್ನು ಹೊರತುಪಡಿಸಿ ಸುಣ್ಣು ಹಚ್ಚುವುದನ್ನಾಗಲಿ ಅಥವಾ ಬಣ್ಣ ಹಚ್ಚವುದನ್ನಾಗಲಿ ಕೊನೆಯ ಸಲ ಸುಣ್ಣ ಹಚ್ಚಿದ ಅಥವಾ ಬಣ್ಣ ಹಚ್ಚಿದಾಗಿನ ಅವಧಿಯಿಂದ ಪ್ರಾರಂಭಿಸಿ ವರ್ಷಕ್ಕೆ ಕನಿಷ್ಟ ಒಂದು ಬಾರಿ ಮಾಡತಕ್ಕದ್ದು ಅಥವಾ ಕೊನೆಯ ಬಾರಿ ಬಣ್ಣ ಹಚ್ಚಿದ ಅಥವಾ ವಾರ್ನಿಷು ಮಾಡಿದ ಅವಧಿಯಿಂದ ಪ್ರಾರಂಬಿಸಿ ಏಳು ವರ್ಷಗಳಿಗೆ ಒಂದು ಬಾರಿ ಬಣ್ಣ ಹಚ್ಚತಕ್ಕದ್ದು ಅಥವಾ ವಾರ್ನಿಷು ಮಾಡತಕ್ಕದ್ದು ಮತ್ತು ಸ್ವಚ್ಛ ಸ್ಥಿತಿಯಲ್ಲಿ ಇಡತಕ್ಕದ್ದು.

(ಖ) ನಿರ್ದಿಷ್ಟಪಡಿಸಿದ ಭಾಗಗಳಿಗೆ ಪದೇ ಪದೇ ಸಂಸ್ಕರಣೆಯನ್ನು ಪರಿಶೀಲಕನು ಬರಹದಲ್ಲಿನ ಆದೇಶದ ಮೂಲಕ ಅಗತ್ಯಪಡಿಸಿದ ಹೊರತು ಎಲ್ಲಾ ಒಳರಚನೆಯ ಕಬ್ಬಿಣ ಮತ್ತು ಉಕ್ಕಿನ ಸಾಮಾನಿಗೆ ಕೊನೆಯದಾಗಿ ಬಣ್ಣ ಹಚ್ಚಿದ ವಾರ್ನಿಷು ಮಾಡಿದ ಅವಧಿ ಹಚ್ಚತಕ್ಕದ್ದು ಅಥವಾ ವಾರ್ನಿಷು ಮಾಡತಕ್ಕದ್ದು ಯಾವ ದಿನಾಂಕದಂದು ಸುಣ್ಣ ಹಚ್ಚಲಾಯಿತೋ ಬಣ್ಣ ಹಚ್ಚಲಾಯಿತೋ ಅಥವಾ ವಾರ್ನಿಷು ಹಚ್ಚುವುದನ್ನು ಮಾಡಲಾಯಿಯೋ ಆ ದಿನಾಂಕವನ್ನು 1ನೇ ನಮೂನೆಯಲ್ಲಿ ಕ್ರಮಬದ್ಧವಾಗಿ ನಮೂದಿಸತಕ್ಕದ್ದು ಅದನ್ನು ಅಗತ್ಯಪಡಿಸಿದಾಗ ಪರಿಶೀಲಕನಿಗೆ ತೋರಿಸತಕ್ಕದ್ದು;

(ಗ) ಈ ಉಪ–ನಿಯಮದ ಉಪಬಂಧಗಳು;

(i) ಸಾಮಾಗ್ರಿಗಳನ್ನು ದಾಸ್ತಾನಿಗಾಗಿ ಮಾತ್ರ ಉಪಯೋಗಿಸುವ ಕೊಠಡಿಗಳಿಗೆ;

(ii) ವಿದ್ಯನ್ಮುಲಾಮು ಮಾಡಿದ ಕಬ್ಬಿಣ ಹೆಂಚುಗಳು ಕಲ್ನಾರು ತಗಡುಗಳು ಅಥವಾ ಅಂಥದೇ ವಸ್ತು ಅಥವಾ ಹೊಳೆಯುವ ಇಟ್ಟಿಗೆಗಳಿಂದ ಮಾಡಿದಂಥ ಕೊಠಡಿಗಳ ಗೋಡೆಗಳು ಅಥವಾ ಮೇಲ್ಚಾವಣಿಗಳಿಗೆ;

(iii) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಯಾವ ಕಾರ್ಯಸಂಸ್ಥೆ ಅಥವಾ ಅದರ ಭಾಗಕ್ಕೆ ಸುಣ್ಣ ಬಳಿಯುವುದು ಅಥವಾ ಬಣ್ಣ ಲೇಪಿಸುವುದು ಅನವಶ್ಯವೆನಿಸುವ ಯಾವುದೇ ಇತರ ಕಾರ್ಯಸಂಸ್ಥೇ ಅಥವಾ ಅದರ ಭಾಗಗಳಿಗೆ

– ಅನ್ವಯವಾಗತಕ್ಕದ್ದಲ್ಲ.

(2) ಕಾರ್ಯಸಂಸ್ಥೆಯಲ್ಲಿನ ಯಾವುದೇ ಆವರಣದಲ್ಲಿ ಯಾವುದೇ ಕಸ, ಹೊಲಸು ಅಥವಾ ಚೂರುಪಾರನ್ನು 12 ಗಂಟೆಗಳಿಗಿಂತ ಹೆಚ್ಚಿಗೆ ರಾಶಿ ಬೀಳಲು ಅಥವಾ ಇರಲು ಬಿಡತಕ್ಕದ್ದಲ್ಲ ಪರಿಶೀಲಕನು ಅನುಮೋದಿಸಿದಂಥ ರೀತಿಯಲ್ಲಿ ಅದನ್ನು ವಿಲೆ ಮಾಡತಕ್ಕದ್ದು.

(3) ಪ್ರತಿಯೊಂದು ಕಾರ್ಯಸಂಸ್ಥೆಯನ್ನು, ಸುತ್ತಣ ಕೌಂಪೌಂಡನ್ನು ಸ್ವಚ್ಛ ಮತ್ತು ನಿರ್ಮಲ ಸ್ಥಿತಿಯಲ್ಲಿ ಇಟ್ಟಿರತಕ್ಕದ್ದು.

**17. ಕಾರ್ಯಸಂಸ್ಥೆಯಲ್ಲಿ ಸಾಕಷ್ಟು ಬೆಳಕಿರತಕ್ಕದ್ದು:–** ಕಕ್ಕಸುಗಳು, ದಾರಿಗಳು, ಮೆಟ್ಟಿಲುಗಳು, ಎತ್ತಿಗೆಗಳು ಕಾರ್ಯಸಂಸ್ಥೆಯ ಬಯಲಿನ ಪ್ರವೇಶ ದ್ವಾರವನ್ನು ಮುಚ್ಚಿಲ್ಲದಿರುವಷ್ಟರ ಮಟ್ಟಿಗೆ ಕೆಲಸದ ವೇಳೆಗಳಲ್ಲಿ ಅವುಗಳ ಮೂಲಕ ಚಲಿಸುವುದು ಅಥವಾ ಹಾದು ಹೋಗುವುದರ ಸುರಕ್ಷೆಯನ್ನು ಖಚಿತಪಡಿಸುವಂಥ ಬೆಳಕನ್ನು ಒದಗಿಸತಕ್ಕದ್ದು.

**18. ಒಂದಕ್ಕಿಂತ ಹೆಚ್ಚಿನ ಅಂತಸ್ತಿನ ಕಟ್ಟಡಕ್ಕೆ ಎರಡು ಮೆಟ್ಟಿಲು ಕಾಲುಗಳನ್ನು ಒದಗಿಸತಕ್ಕದ್ದು:** ಕಾರ್ಯಸಂಸ್ಥೆಯ ಪ್ರತಿಯೊಂದು ಭಾಗದಿಂದ ನೆಲದ ಮಟ್ಟಕ್ಕೆ ನೇರವಾಗಿ ಮತ್ತು ನಿರಾಂತಕವಾದ ಪ್ರವೇಶಾವಕಾಶಗಳನ್ನು ಒದಗಿಸುವ ಹಾಗೆ ಕಟ್ಟಡದ ಒಳಗಡೆಯಾಗಲಿ ಅಥವಾ ಹೊರಗಡೆಯಾಗಲಿ ಕಾಯಂ ಆಗಿ ನೆಲೆಗೊಳಿಸಿದ್ದ ಕನಿಷ್ಟ ಪಕ್ಷ ಎರಡು ಮೆಟ್ಟಿಲುಗಳ ಸಾಲುಗಳನ್ನು ಅಥವಾ ಮೆಟ್ಟಿಲುಗಳನ್ನು ಒದಗಿಸತಕ್ಕದ್ದು. ಅಂತಹ ಮೆಟ್ಟಿಲುಗಳ ಸಾಲುಗಳಿಗೆ ಸೂಕ್ತವಾದ ಮತ್ತು ಸಾಕಾಷ್ಟಾದ ಹಸ್ತಕಟಾಂಜನ ಅಥವಾ ಇತರ ಅನುಕೂಲಕರ ಆಸರೆಯನ್ನು ಒದಗಿಸತಕ್ಕದ್ದು. 40 ವ್ಯಕ್ತಿಗಳಿಗಿಂತ ಕಡಿಮೆಯವರನ್ನು ನಿಯೋಜಿಸಿಕೊಳ್ಳುವ ಕಾರ್ಯಸಂಸ್ಥೆಯಲ್ಲಿ ಪರಿಶೀಲಕನು ಎರಡನೇ ಮೆಟ್ಟಿಲುಗಳ ಸಾಲು ಅಥವಾ ಮೆಟ್ಟಿಲುಗಳಿಗೆ ಬದಲಾಗಿ ಬೆಂಕಿಯ ಸಂದರ್ಭದಲ್ಲಿ ಪ್ರಕರಣದ ಸನ್ನಿವೇಶಗಳಲ್ಲಿ ಯಥೋಚಿತವಾಗಿ ಅಗತ್ಯವಾಗಿರುವಂಥ ತಪ್ಪಿಸಿಕೊಳ್ಳುವ ಇತರ ಸಾಧನೆಗಳನ್ನು ಅಂಗೀಕರಿಸಬಹುದು.

**19. ಹೊರಗಡೆಯ ಮೆಟ್ಟಿಲುಗಳಿಗೆ ಹೊರಹೋಗುವ ದಾರಿಗಳು ಒಳಗಡೆಯಿಂದ ತೆರೆಯುವಂತಿರತಕ್ಕದ್ದು:–** ಹೊರಗಡೆಯ ಮೆಟ್ಟಿಲುಸಾಲುಗಳಿಗೆ ಪ್ರವೇಶಾಕಾಶವನ್ನು ಕೊಡುವ ಪ್ರತಿಯೊಂದು ಕಿಟಕಿ ಅಥವಾ ಬಾಗಿಲನ್ನು ಒಳಗಡೆಯಿಂದ ಕೂಡಲೇ ತೆರೆಯುವ ಹಾಗೆ ವ್ಯವಸ್ಥೆಗೊಳಿಸತಕ್ಕದ್ದು.

**20. ಬೆಂಕಿಯ ವಿರುದ್ಧ ಮುನ್ನೆಚ್ಚರಿಕೆ:–** ಯಾವುದೇ ಕಾರ್ಯಸಂಸ್ಥೆಯಲ್ಲಿ ಯಾವುದೇ ದಹ್ಯ ಸಾಮಾಗ್ರಿಯ ತೀರಾ ಹತ್ತಿರದಲ್ಲಿ ಯಾವನೇ ವ್ಯಕ್ತಿಯು ಧೂಮಪಾನ ಮಾಡತಕ್ಕದ್ದಲ್ಲ ಅಥವಾ ತೆರೆದ ದೀಪವನ್ನು ಉಪಯೋಗಿಸತಕ್ಕದ್ದಲ್ಲ ಅಥವಾ ಯಾವುದೇ ಅಂತಹ ದೀಪವನ್ನು ಉಪಯೋಗಿಸುವಂತೆ ಮಾಡತಕ್ಕದ್ದ ಅಥವಾ ಉಪಯೋಗಿಸುವಂತೆ ಅನುವಂತಿಸತಕ್ಕದ್ದಲ್ಲ.

**21. ಪರಿಶೀಲಕರ ಕರ್ತವ್ಯಗಳು:–** ಪರಿಶೀಲಕನು ಈ ಅಧಿನಿಯಮದ ಅಥವಾ ಈ ನಿಯಮಗಳ ಉಪಬಂಧಗಳ ಮತ್ತು ಈ ಅಧಿನಿಯಮದ ಮೇರೆಗೆ ಸರ್ಕಾರವು ಮಾಡಿದ ಯಾವುದೇ ಆದೇಶವನ್ನು ಸರಿಯಾಗಿ ಪಾಲಿಸಲಾಗುತ್ತಿದೆಯೋ ಎಂಬುದರ ಬಗ್ಗೆ ತಾನೇ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಅವನಿಗೆ ಅವಶ್ಯವೆಂದು ಕಂಡುಬರಬಹುದಾದಂಥ ಪರೀಕ್ಷೆಯನ್ನು ಮಾಡತಕ್ಕದ್ದು.

ವಿಶೇಷವಾಗಿ,–

(i) ಕಾರ್ಯಸಂಸ್ಥೆಯು ಅಧಿನಿಯಮದ ಮೇರೆಗೆ ಕ್ರಮಬದ್ಧವಾಗಿ ನೋಂದಾಯಿತವಾಗಿದೆ;

(ii) ಅಧಿನಿಯಮದ ಅಥವಾ ಈ ನಿಯಮಗಳಮೇರೆಗೆ ಇಡಬೇಕೆಂದು ಅಥವಾ ಪ್ರದರ್ಶಿಸಬೇಕೆಂದು ಅಗತ್ಯಪಡಿಸಿದ ರಿಜಿಸ್ಟರುಗಳು, ದಾಖಲೆಗಳು ಮತ್ತು ನೋಟೀಸುಗಳನ್ನು ಯುಕ್ತವಾಗಿ ಇಡಲಾಗಿದೆ ಅಥವಾ ಪ್ರದರ್ಶಿಸಲಾಗಿದೆ;

(iii) ಅಧಿನಿಯಮದ ಮೇರೆಗೆ ಕೊಡಬೇಕಾದ ಅಥವಾ ಪಾಲಿಸಬೇಕಾದ ವಿಶ್ರಾಂತಿಯ ಮಧ್ಯಂತರಗಳು ಮತ್ತು ರಜಾ ದಿವಸ ಕೊಡಲಾಗಿದೆ ಮತ್ತು ಪಾಲಿಸಲಾಗಿದೆ ಮತ್ತು ಅಧಿನಿಯಮದ ಮೇರೆಗೆ ವಿಧಿಸಿದ ಕೆಲಸದ ವೇಳೆಗಳ ಮಿತಿಗಳು ಮತ್ತು ಹರಡುವಿಕೆಯನ್ನು ಕೊಡಲಾಗುತ್ತಿದೆ ಮತ್ತು ಪಾಲಿಸಲಾಗುತ್ತಿದೆ ಮತ್ತು ಅಧಿನಿಯಮದ ಮೇರೆಗೆ ವಿಧಿಸಿದ ಕೆಲಸದ ವೇಳೆಗಳ ಮಿತಿಗಳು ಮತ್ತು ಹರಡುವಿಕೆಯನ್ನು ಮೀರಲಾಗಿಲ್ಲ.

(iv) ತೆರೆಯುವ ಮತ್ತು ಮುಚ್ಚುವ ವೇಳೆಗಳಿಗೆ ಸಂಬಂಧಿಸಿದಂತೆ ಅಧಿನಿಯಮದ ಉಪಬಂಧಗಳು ಮತ್ತು ಸರ್ಕಾರವು ಹೊರಡಿಸಿದ ಯಾವುದೇ ಅಧಿಸೂಚನೆಯನ್ನು ಸರಿಯಾಗಿ ಪಾಲಿಸಲಾಗುತ್ತಿದೆ;

(v) ರಜೆಗೆ ಸಂಬಂಧಿಸಿದಂತೆ ಅಧಿನಿಯಮದ ಉಪಬಂಧಗಳು ಮತ್ತು ನಿಯಮಗಳನ್ನು ಸರಿಯಾಗಿ ಪಾಲಿಸಲಾಗುತ್ತಿದೆ;

(vi) ಸ್ವಚ್ಛತೆ, ಬೆಳಕಿನ ವ್ಯವಸ್ಥೆ ಮತ್ತು ಬೆಂಕಿಯ ವಿರುದ್ಧ ಮುನ್ನೆಚ್ಚರಿಕೆಗೆ ಸಂಬಂಧಿಸಿದ ಈ ನಿಯಮಗಳ ಉಪಬಂಧಗಳನ್ನು ಸರಿಯಾಗಿ ಪಾಲಿಸಲಾಗುತ್ತಿದೆ;

(vii) ಅತಿಕಾಲಿಕ ಕೆಲಸಕ್ಕಾಗಿ ಸಂದಾಯಕ್ಕೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳನ್ನು ಸರಿಯಾಗಿ ಪಾಲಿಸಲಾಗುತ್ತಿದೆ;

(viii) ಯಾವುದೇ ಕಾರ್ಯಸಂಸ್ಥೆಯಲ್ಲಿ ಯಾವುದೇ ಮಗುವು ಕೆಲಸ ಮಾಡಲು ಅವಕಾಶ ಕೊಟ್ಟಿಲ್ಲ:

– ಇವುಗಳ ಬಗ್ಗೆ ಮನದಟ್ಟು ಮಾಡಿಕೊಳ್ಳತಕ್ಕದ್ದು.

(2) ಅಂತಹ ಪರೀಕ್ಷೆಯನ್ನು ನಡೆಸುವುದಕ್ಕಾಗಿ ಪರಿಶೀಲಕನು ಅವನು ಅವಶ್ಯವೆಂದು ಭಾವಿಸಬಹುದಾದಂಥ ಆವರಣದ ಮೇಲಿನ ವ್ಯಕ್ತಿಯನ್ನು ಪ್ರಶ್ನಿಸಬಹುದು, ಪರಂತು, ಈ ನಿಯಮದ ಮೇರೆಗೆ ಅಂತಹ ಯಾವನೇ ವ್ಯಕ್ತಿಯನ್ನು ಯಾವ ಪ್ರಶ್ನೆಗೆ ಉತ್ತರವು ಅವನನ್ನು ಅಪರಾಧದಲ್ಲಿ ಸಿಕ್ಕಿ ಸುವಂಥದು ಆಗಿದೆಯೋ ಆ ಯಾವುದೇ ಪ್ರಶ್ನೆಗೆ ಉತ್ತರಿಸಲು ಅಗತ್ಯಪಡಿಸಬೇಕಾಗಿಲ್ಲ.

**21ಕ. ಪ್ರಾಸಿಕ್ಯೂಷನ್ನಿಗಾಗಿ ಪ್ರಕ್ರಿಯೆ:–** ಅಧಿನಿಯಮ, ನಿಯಮಗಳು ಅಥವಾ ಅದರ ಮೇರೆಗೆ ಮಾಡಿದ ಆದೇಶಗಳ ಮೇರೆಗೆ ದಂಡನೀಯವಾಗದ ಅಪರಾಧಕ್ಕೆ ಸಂಬಂಧಿಸಿದಂತೆ ಫಿರ್ಯಾದನ್ನು ಸಲ್ಲಿಸುವುದಕ್ಕೆ ಮುಂಚೆ ಪರಿಶೀಲಕನು ಮುಖ್ಯ ಪರಿಶೀಲಕನ ಪೂರ್ವಾನುಮೋದನೆಯನ್ನು ಪಡೆಯತಕ್ಕದ್ದು.

**22. ಪರಿಶೀಲಕನು ವಯಸ್ಸಿನ ಬಗ್ಗೆ ಖಚಿತಪಡಿಸಿಕೊಳ್ಳುವುದು:–** ಪರಿಶೀಲಕನು ಯಾವನೇ ನಿಯೋಜಿತನಿಗೆ ಸಂಬಂಧಿಸಿದಂತೆ ನೋಂದಾಯಿತ ವೈದ್ಯ ವೃತ್ತಿಗನಿಂದ ವಯಸ್ಸಿನ ಪ್ರಮಾಣಪತ್ರವನ್ನು ಹಾಜರುಪಡಿಸುವಂತೆ ನಿಯೋಜಕನನ್ನು ಅಗತ್ಯಪಡಿಸಬಹುದು, ಅಂತಹ ಪ್ರಮಾಣಪತ್ರವು "ಞ" ನಮೂನೆಯಲ್ಲಿರತಕ್ಕದ್ದು.

**23. ಪರಿಶೀಲಕನು ದಿನಚರಿಯನ್ನು ಒಪ್ಪಿಸುವುದು:–** ಪರಿಶೀಲಕನು ಮಾಸಿಕ ಕಟ್ಟುಗಳಲ್ಲಿ ಜೋಡಿಸಿದ ಅವನ ಪರಿಶೀಲನಾ ದಾಖಲೆಗಳ ಕಡತವನ್ನು ಇಡತಕ್ಕದ್ದು ಮತ್ತು ಅವನು ಯಾರಿಗೆ ಅಧೀನನಾಗಿರುವನೋ ಆ ಅಧಿಕಾರಿಗೆ 15ನೇ ದಿವಸಂದು "ಟ" ನಮೂನೆಯಲ್ಲಿ ದಿನಚರಿಯನ್ನು ಒಪ್ಪಿಸತಕ್ಕದ್ದು.

**24. ರಿಜಿಸ್ಟರುಗಳು ಮತ್ತು ದಾಖಲೆಗಳನ್ನು ಇಡುವುದು ಮತ್ತು ನೋಟಿಸುಗಳನ್ನು ಪ್ರದರ್ಶಿಸುವುದು:–** (1) ಪ್ರತಿಯೊಬ್ಬ ನಿಯೋಜಕನು "ಠ" ನಮೂನೆಯಲ್ಲಿ ನಿಯೋಜನಾ ರಿಜಿಸ್ಟರನ್ನು ಇಡತಕ್ಕದ್ದು, ಪರಂತು, ತೆರೆಯುವ ಮತ್ತು ಮುಚ್ಚುವ ವೇಳೆಗಳು ಸಾಮಾನ್ಯವಾಗಿ ಏಕರೂಪದ್ದವುಗಳು ಆಗಿದ್ದರೆ ನಿಯೋಜಕನು 'ಡ' ನಮೂನೆ ಅಂತಹ ರಿಜಿಸ್ಟರನ್ನು ಇಡಬಹುದು.

(2) (1)ನೇ ಉಪ–ನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ನಿಯೋಜಕನು ಸದರಿ ಉಪ–ನಿಯಮದಲ್ಲಿ ಉಪಬಂಧಿಸಿದಂತೆ ರಿಜಿಸ್ಟರನ್ನು ಇಡುವುದಕ್ಕೆ ಬದಲು ಅವನು ಕಾರ್ಯಸಂಸ್ಥೆಯಲ್ಲಿ ನಿಯೋಜಿತರು ಕೆಲಸ ಮಾಡಬೇಕಾದ ದೈನಂದಿನ ವೇಳೆಗಳು ಮತ್ತು ಅವರಿಗೆ ಕೊಡಬೇಕಾದ ವಿಶ್ರಾಂತಿ ಮತ್ತು ಭೋಜನಗಳಿಗಾಗಿನ ಮಧ್ಯಂತರಗಳನ್ನು ನಿರ್ದಿಷ್ಟಪಡಿಸಿ ನೋಟಿಸನ್ನು ಪ್ರದರ್ಶಿಸಬಹುದು ಆ ನೊಟೀಸು "ಢ" ನಮೂನೆಯಲ್ಲಿರತಕ್ಕದ್ದು ಮತ್ತು ಅದನ್ನು ಯಾವ ಮೊದಲನೇ ವಾರದಲ್ಲಿ ಅಂತ ನೊಟೀಸಿನಲ್ಲಿ ಕೆಲಸದ ವೇಳೆಗಳನ್ನು ನಿರ್ದಿಷ್ಟಪಡಿಸತಕ್ಕದ್ದೋ ಆ ಮೊದಲನೇ ವಾರದ ನಿಕಟಪೂರ್ವದ ಶನಿವಾರದಂದು ಮುಚ್ಚುವ ವೇಳೆಯನ್ನು ಮೀರದಂತೆ ಪ್ರದರ್ಶಿಸತಕ್ಕದ್ದು ಅದರಲ್ಲಿ ನಿರ್ದಿಷ್ಟಪಡಿಸಿದ ಕೆಲಸದ ವೇಳೆಗಳನ್ನು ಪಾಲಿಸುತ್ತಿರುವವರೆಗೆ ಅದನ್ನು ಪ್ರದರ್ಶಿಸುವುದನ್ನು ಮುಂದುವರೆಸತಕ್ಕದ್ದು.

(3) (2) ನೇ ಉಪ–ನಿಯಮದಲ್ಲಿ ಉಲ್ಲೇಖಿಸಿದ ನೊಟೀಸನ್ನು ನಿಯೋಜಕನು ಪ್ರದರ್ಶಿಸಿರುವಲ್ಲಿ ಅವನು "ಣ" ನಮೂನೆಯಲ್ಲಿ ಕೆಲಸದ ವೇಳೆಗಳ ದಾಖಲೆಯನ್ನು ಇಡತಕ್ಕದ್ದು.

(4) ಪ್ರತಿಯೊಬ್ಬ ನಿಯೋಜಕನೂ ಅವನು ನಿಯೋಜಿಸಿಕೊಂಡ ವ್ಯಕ್ತಿಗಳಿಗೆ ಯಾವ ದಿವಸ ಅಥವಾ ದಿವಸಗಳಂದು ರಜಾ ದಿನವನ್ನು ಕೊಡತಕ್ಕದ್ದೋ ಆ ದಿವಸ ಅಥವಾ ದಿವಸಗಳನ್ನು ನಿರ್ದಿಷ್ಟಪಡಿಸಿ "ತ" ನಮೂನೆಯಲ್ಲಿ ನೋಟಿಸನ್ನು ಅವನ ಕಾರ್ಯಸಂಸ್ಥೆಯಲ್ಲಿ ಪ್ರದರ್ಶಿಸತಕ್ಕದ್ದು, ಆ ನೋಟೀಸನ್ನು ಜಾರಿಗೆ ಬರುವಂಥ ಮೊದಲನೇ ವಾರದ ನಿಕಟಪೂರ್ವದ ಶನಿವಾರದಂದು ಅದು ಸಂಬಂಧಪಡುವ ವ್ಯಕ್ತಿಗಳು ಕೆಲಸವನ್ನು ನಿಲ್ಲಿಸುವುದಕ್ಕೆ ಮುಂಚೆ ಪ್ರದರ್ಶಿಸತಕ್ಕದ್ದು.

(5) ಪ್ರತಿಯೊಬ್ಬ ನಿಯೋಜಕನು ಅವನ ಕಾರ್ಯಸಂಸ್ಥೆಯಲ್ಲಿ ಅಧಿನಿಯಮದ ಮತ್ತು ಈ ನಿಯಮಗಳ ಉದ್ಧೃತಗಳನ್ನು ಒಳಗೊಂಡಿರುವ ನೋಟೀಸನ್ನು ಇಂಗ್ಲೀಷಿನಲ್ಲಿ ಮತ್ತು ಬಹುಸಂಖ್ಯಾತ ನಿಯೋಜಿತರ ಭಾಷೆಯಲ್ಲಿ ಪ್ರದರ್ಶಿಸತಕ್ಕದ್ದು.

(6) ಈ ನಿಯಮಗಳ ಮೇರೆಗೆ ಪ್ರದರ್ಶಿಸಬೇಕೆಂದು ಅಗತ್ಯಪಡಿಸಿದ ನೋಟೀಸನ್ನು ಅದು ಯಾರನ್ನು ಬಾಧಿಸುತ್ತದೆಯೋ ಆ ಯಾವನೇ ವ್ಯಕ್ತಿಯು ಕೂಡಲೇ ನೋಡಬಹುದಾದ ಮತ್ತು ಓದಬಹುದಾದಂಥ ರೀತಿಯಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ಅದು ವಿಕೃತಗೊಂಡಾಗಲೆಲ್ಲಾ ಅಥವಾ ಅನ್ಯಥಾ ಸ್ಪಷ್ಟವಾಗಿ ಮತ್ತು ಸ್ಫುಟವಾಗಿರುವುದು ನಿಂತು ಹೋದಾಗಲೆಲ್ಲಾ ಅದನ್ನು ನವೀಕರಿಸತಕ್ಕದ್ದು.

(7) ಈ ನಿಯಮಗಳ ಮೇರೆಗೆ ನಿಯೋಜಕನು ಇಡಬೇಕೆಂದು ಅಗತ್ಯಪಡಿಸಿದಂಥ ಯಾವುದೇ ರಿಜಿಸ್ಟರು ಅಥವಾದಾಖಲೆಯಲ್ಲಿ ಯಾವುದೇ ದಿವಸಕ್ಕೆ ಸಂಬಂಧಿಸಿದಂಥನಮೂದನೆಗಳನ್ನು ಅಂಥ ದಿವಸದಂದು ಮಾಡತಕ್ಕದ್ದು.

(8) ಈ ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು ಯಾವುದೇ ಕ್ಯಾಲೆಂಡರ್ ವರ್ಷಕ್ಕೆ ಸಂಬಂಧಿಸಿದ ರಿಜಿಸ್ಟರು. ದಾಖಲೆಗಳು ಮತ್ತು ನೋಟೀಸುಗಳನ್ನು ಮುಂದಿನ ಕ್ಯಾಲೆಂಡರ್ ವರ್ಷದ ಕೊನೆಯವರೆಗೆ ಪರಿರಕ್ಷಿಸತಕ್ಕದ್ದು.

(9) ನಿಯೋಜಕನು ಬರಹದಲ್ಲಿ ಸಲ್ಲಿಸಿದ ಯಾವುದೇ ಅರ್ಜಿಯ ಮೇಲೆ ಸರ್ಕಾರಕ್ಕೆ ಅಂಥ ನಿಯೋಜಕನು ಇಟ್ಟುಕೊಂಡು ಬಂದಿರುವ ಯಾವುದೇ ಹಾಜರಿಪಟ್ಟಿ, ರಿಜಿಸ್ಟರು ಅಥವಾ ದಾಖಲೆಯು ಅವನ ಕಾರ್ಯಸಂಸ್ಥೆಯಲ್ಲಿ ನಿಯೋಜಿತರಾದೆಲ್ಲ ಅಥವಾಯಾವನೇ ವ್ಯಕ್ತಿಗೆ ಸಂಬಂಧಿಸಿದಂತೆ ಈ ನಿಯಮದ ಮೇರೆಗೆ ನಿಯಮಿಸಿದ ಯಾವುದೇ ರಿಜಿಸ್ಟರು ದಾಖಲೆ ಅಥವಾ ನೋಟೀಸಿನಲ್ಲಿ ತೋರಿಸಬೇಕೆಂದು ಅಗತ್ಯಪಡಿಸಿದ ವಿವರಗಳನ್ನು ಕೊಡುತ್ತದೆ ಎಂದು ಮನದಟ್ಟಾದರೆ ರಾಜ್ಯ ಸರ್ಕಾರವು ಬರಹದಲ್ಲಿನ ಆದೇಶದ ಮೂಲಕ ಅಂಥ ಹಾಜರಿಪಟ್ಟಿ, ರಿಜಿಸ್ಟರು ಅಥವಾದಾಖಲೆಯನ್ನು ಸಂದರ್ಭಾನುಸಾರ ಅಂಥ ರಿಜಿಸ್ಟರು ದಾಖಲೆ ಅಥವಾನೋಟೀಸಿನ ಬದಲಾಗಿ ಅದಕ್ಕೆ ಹೋಲುವಷ್ಟರ ಮಟ್ಟಿಗೆ ಇಟ್ಟುಕೊಂಡು ಬರತಕ್ಕದ್ದೆಂದು, ನಿರ್ದೇಶಿಸಬಹುದು.

(10) (5)ನೇ ಉಪ ನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಈ ನಿಯಮಗಳ ಮೇರೆಗೆ ಇಟ್ಟುಕೊಂಡು ಬರಬೇಕೆಂದು, ಪ್ರದರ್ಶಿಸಬೇಕೆಂದು ಅಥವಾ ಕೊಡಬೇಕೆಂದು ಅಗತ್ಯ ಪಡಿಸಿದ ಎಲ್ಲಾ ರಿಜಿಸ್ಟರುಗಳು, ದಾಖಲೆಗಳು, ಹಾಜರಿಪಟ್ಟಿಗಳು ಮತ್ತು ನೋಟೀಸುಗಳು ಇಂಗ್ಲಿಷಿನಲ್ಲಿ ಅಗಲಿ ಅಥವಾ ಕನ್ನಡದಲ್ಲಿ ಅಗಲಿ ಇರತಕ್ಕದ್ದು.

(11) ಪ್ರತಿಯೊಬ್ಬ ನಿಯೋಜಕನು ಒಂದು ಸಂದರ್ಶನ ಪುಸ್ತಕವನ್ನು ಇಟ್ಟುಕೊಂಡು ಬರತಕ್ಕದ್ದು ಅದರಲ್ಲಿ ಆ ಕಾರ್ಯಸಂಸ್ಥೆಗೆ ಸಂದರ್ಶನ ಕೊಡುವ ಪರಿಶೀಲಕನು ಅವನ ಪರಿಶೀಲನೆಯ ಕಾಲದಲ್ಲಿ ಬೆಳಕಿಗೆ ಬರಬಹುದಾದ ಯಾವುದೇ ನ್ಯೂನತೆಗಳ ಬಗ್ಗೆ ಅವನ ಷರಾಗಳನ್ನು ದಾಖಲು ಮಾಡಬಹುದು ಮತ್ತು ಅದನ್ನು ಪರಿಶೀಲಕನು ಹಾಗೆ ಮಾಡಲು ಅಗತ್ಯ ಪಡಿಸಿದಾಗಲೆಲ್ಲಾ ಹಾಜರುಪಡಿಸಕ್ಕದ್ದು.

ಕಾರ್ಯಸಂಸ್ಥೆಯ ವ್ಯಾಪಾರ ಮತ್ತು ವ್ಯವಹಾರಕ್ಕೆ ಸಂಬಂಧಿಸಿದಂತೆ ಉಪಯೋಗಿಸಿದ ಕಚೇರಿ ಉಗ್ರಾಣ, ಗೋದಾಮು, ಸರಕುಗಳ ಉಗ್ರಾಣ ಅಥವಾ ಕೆಲಸದ ಸ್ಥಳವು ಆ ಕಾರ್ಯಸಂಸ್ಥೆಯ ಆವರಣವಲ್ಲದ ಇತರ ಆವರಣದಲ್ಲಿ ಇರುವಲ್ಲಿ ಈ ಅಧಿನಿಯಮ ಮತ್ತು ಈ ನಿಯಮಗಳ ಮೇರೆಗೆ ಇಟ್ಟುಕೊಂಡು ಬರಬೇಕೆಂದು ಪ್ರದರ್ಶಿಸಬೇಕೆಂದು ಅಥವಾ ಕೊಡಬೇಕೆಂದು ಅಗತ್ಯಪಡಿಸಿದ ಎಲ್ಲಾ ರಿಜಿಸ್ಟರುಗಳು, ದಾಖಲೆಗಳು, ಹಾಜರಿ ಪಟ್ಟಿಗಳು,

ಸಂದರ್ಶನ ಪುಸ್ತಕ ಮತ್ತು ನೋಟಿಸುಗಳನ್ನು ಅಂತಹ ಕಚೇರಿ, ಉಗ್ರಾಣ, ಗೋದಾಮು, ಸರಕುಗಳ ಉಗ್ರಾಣ ಅಥವಾ ಕೆಲಸದ ಸ್ಥಳಕ್ಕೆ ಸಂಬಂಧಿಸಿದಂತೆ ಮತ್ತು ಅಲ್ಲಿ ಪ್ರತ್ಯೇಕವಾಗಿ ಹಾಗೆ ಇಟ್ಟುಕೊಂಡು ಬರತಕ್ಕದ್ದು, ಪ್ರದರ್ಶಿಸತಕ್ಕದ್ದು ಅಥವಾ ಕೊಡತಕ್ಕದ್ದು.

**25. 39ನೇ ಪ್ರಕರಣದ ಮೇರೆಗಿನ ಅಫಿಲುಗಳು:–** (1) ಕಾರ್ಮಿಕ ಅಸಿಸ್ಟೆಂಟ್ ಕಮೀಷನರ್‌ಗಳು ಅವರವರ ಅಧಿಕಾರ ವ್ಯಾಪ್ತಿಯ ಪ್ರದೇಶಗಳೊಳಗೆ 39ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗಿನ ಆದೇಶಗಳಿಗೆ ಸಂಬಂಧಿಸಿದಂತೆ ಅಪೀಲುಗಳನ್ನು ಮಾಡಿಕೊಳ್ಳತಕ್ಕ ಅಧಿಕಾರಿಗಳಾಗಿತಕ್ಕದ್ದು.

(2) ಅಂತಹ ಪ್ರತಿಯೊಂದು ಅಪೀಲನ್ನು ನಿಯೋಜಿತನಿಗೆ ಆತನನ್ನು ತೆಗೆದು ಹಾಕುವ ಅಥವಾ ವಜಾ ಮಾಡುವುದಕ್ಕಾಗಿನ ಆದೇಶವನ್ನು ಅವನಿಗೆ ತಿಳಿಸಿದಂಥ ದಿನಾಂಕದಿಂದ 30 ದಿವಸಗಳೊಳಗೆ ಸಲ್ಲಿಸತಕ್ಕದ್ದು:

ಪರಂತು, ಸಕಾಲದೊಳಗೆ ಅಫೀಲನ್ನು ಸಲ್ಲಿಸಲಾಗದೇ ಇರುವುದಕ್ಕೆ ಸಾಕಷ್ಟು ಕಾರಣಗಳನ್ನು ಅಪೀಲುದಾರನು ತೋರಿಸಿದರೆ ಸದರಿ 30 ದಿವಸಗಳ ಅವಧಿಯ ತರುವಾಯ ಅಫೀಲನ್ನು ಅಂಗೀಕರಿಸಬಹುದು.

(3) ಪ್ರತಿಯೊಂದು ಅಪೀಲು ಆದೇಶಕ್ಕೆ ಆಕ್ಷೇಪಣೆಯ ಆಧಾರಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿರುವ ವಿವರಣೆ ಪತ್ರದ ರೂಪದಲ್ಲಿ ಇರತಕ್ಕದ್ದು ಮತ್ತು ಅದರೊಂದಿಗೆ ಅಫೀಲನ್ನು ಯಾವ ಆದೇಶದ ವಿರುದ್ಧ ಸಲ್ಲಿಸಲಾಗಿದೆಯೋ ಆ ಆದೇಶದ ಪ್ರತಿಯು ಇರತಕ್ಕದ್ದು.

**26. ನಿಯಮಗಳ ಉಲ್ಲಂಘನೆಗಾಗಿ ದಂಡನೆ:–** 8,9–12,14,–16–17–,18–,19–20 ಅಥವಾ 21ನೇ ನಿಯಮಗಳನ್ನು ಉಲ್ಲಂಘಿಸುವವರು ಯಾರೇ ಆಗಲಿ ಅಪರಾಧ ನಿರ್ಣಯವಾದ ಮೇಲೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದು.

**ನಮೂನೆ "ಕ"**

**(3ನೇ ನಿಯಮವನ್ನು ನೋಡಿ)**

[**4 (1)ನೇ ಪ್ರಕರಣದ ಮೇರೆಗೆ ವಿವರಣಾ ಪತ್ರ**]

1. ಕಾರ್ಯಸಂಸ್ಥೆಯ ಹೆಸರು, ಯಾವುದಾದರೂ ಇದ್ದರೆ, ಅದು.

2. ಕಾರ್ಯಸಂಸ್ಥೆಯ ಅಂಚೆ ವಿಳಾಸ ಮತ್ತು ಇರುವ ಸ್ಥಳ.

3. ಅಂಗಡಿಗೆ ಲಗತ್ತಾದ ಆದರೆ ಅಂಗಡಿಯ ಆವರಣದಿಂದ ಬೇರೆ ಆವರಣದಲ್ಲಿ ಇರುವ ಕಚೇರಿ ಉಗ್ರಾಣ, ಗೋದಾಮು, ಸರಕುಗಳ ಉಗ್ರಾಣ ಅಥವಾ ಕೆಲಸದ ಸ್ಥಳ ಯಾವುದಾದರೂ ಇದ್ದರೆ ಅದು ಇರುವ ಸ್ಥಳ.

4. ನಿಯೋಜಕನ ಹೆಸರು.

5. ನಿಯೋಜಕನ ನಿವಾಸದ ವಿಳಾಸ.

6. ವ್ಯವಸ್ಥಾಪಕನು ಯಾವನಾದರೂ ಇದ್ದರೆ ಅವನ ಹೆಸರು ಮತ್ತು ಅವನ ನಿವಾಸದ ವಿಳಾಸ.

7. ಕಾರ್ಯಸಂಸ್ಥೆಯ ಪ್ರವರ್ಗ, ಅಂದರೆ ಅದು ಅಂಗಡಿಯೇ ಅಥವಾ ವಾಣಿಜ್ಯ ಕಾರ್ಯಸಂಸ್ಥೆಯೇ ವಸತಿಯ ಹೊಟೇಲ್ ಉಪಹಾರ ಗೃಹವೇ, ಭೋಜನ ಗೃಹವೇ, ಥಿಯೇಟರೇ ಅಥವಾ ಇತರ ಸಾರ್ವಜನಿಕ ವಿನೋದ ಅಥವಾ ಮನೋರಂಜನಾ ಸ್ಥಳವೇ.

8. ವ್ಯವಹಾರದ ಸ್ವರೂಪ.

9. ವ್ಯವಹಾರವನ್ನು ಪ್ರಾರಂಭಿಸಿದ ದಿನಾಂಕ.

10. ಕಾರ್ಯಸಂಸ್ಥೆಯಲ್ಲಿ ನಿಯೋಜಿತರಾದ ನಿಯೋಜಕನ ಕುಟುಂಬದ ಸದಸ್ಯರ ಹೆಸರು

ವಯಸ್ಕರು..................................
ಪುರುಷರು .............................
ಮಹಿಳೆಯರು .........................
ಯುವ ವ್ಯಕ್ತಿಗಳು ........................
ಒಟ್ಟು .......................................

11. ವ್ಯವಸ್ಥಾಪನೆಯ ಸ್ಥಾನದಲ್ಲಿರುವ ಇತರ ವ್ಯಕ್ತಿಗಳ ಅಥವಾ ವಿಶ್ವಾಸದನಾತೆಯಲ್ಲಿ ತೊಡಗಿರುವ ನಿಯೋಜಿತರ ಹೆಸರುಗಳು

(ಯುವ ವ್ಯಕ್ತಿಗಳ ಸಂದರ್ಭದಲ್ಲಿ ಲಿಂಗ ಮತ್ತು ವಯಸ್ಸನ್ನು ಸೂಚಿಸಿ)

12. ನಿಯೋಜಿತರ ಒಟ್ಟು ಸಂಖ್ಯೆ

ವಯಸ್ಕರು..................................
ಪುರುಷರು .............................
ಮಹಿಳೆಯರು .........................
ಯುವ ವ್ಯಕ್ತಿಗಳು ........................
ಒಟ್ಟು .......................................
ದಿನಾಂಕ ................................. (ನಿಯೋಜಕರು ರುಜು)

---

**ಟಿಪ್ಪಣಿ:** (1) 1ನೇ ಅನುಸೂಚಿಯಲ್ಲಿ ನಿಯಮಿಸಿದಂಥ ಫೀಜಿನೊಂದಿಗೆ ಸಂಬಂಧಪಟ್ಟ ಸ್ಥಳೀಯ ಪ್ರದೇಶದ ಪರಿಶೀಲಕನಿಗೆ ವಿವರ ಪತ್ರವನ್ನು ಕಳುಹಿಸತಕ್ಕದ್ದು.

(2) 3ನೇ ಬಾಬನ್ನು ಕಚೇರಿ ಉಗ್ರಾಣ ಇತ್ಯಾದಿಗಳನ್ನು ಅಧಿನಿಯಮದ ಮೇರೆಗೆ ಪ್ರತ್ಯೇಕವಾಗಿ ನೊಂದಾಯಿಸದೆ ಇದ್ದಾಗ ಮಾತ್ರ ಭರ್ತಿ ಮಾಡತಕ್ಕದ್ದು ಅಂತಹ ಕಚೇರಿಗಳು, ಉಗ್ರಾಣಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ 10–11, 12ನೇ ಬಾಬುಗಳ ಮೇರೆಗೆ ಅಗತ್ಯಪಡಿಸಿದ ವಿವರಗಳನ್ನು ಈ ವಿವರಣಾ ಪತ್ರದಲ್ಲಿ ಪ್ರತ್ಯೇಕವಾಗಿ ಕೊಡತಕ್ಕದ್ದು.

## ನಮೂನೆ "ಖ"

### (4ನೇ ನಿಯಮ ನೋಡಿ)

### ಭಾಗ–1

| ಕ್ರಮ ಸಂಖ್ಯೆ | ನೋಂದಣಿ ಪ್ರಮಾಣಪತ್ರದ ಸಂಖ್ಯೆ | ನಿಯೋಜಕನ ಹೆಸರು | ವ್ಯವಸ್ಥಾಪಕನು ಯಾವನಾದರೂ ಇದ್ದರೆ ಅವನ ಹೆಸರು | ಕಾರ್ಯಸಂಸ್ಥೆಯ ಅಂಚೆ ವಿಳಾಸ | ಕಾರ್ಯಸಂಸ್ಥೆ ಯಾವುದಾದರೂ ಇದ್ದರೆ ಅದರ ಹೆಸರು | ವ್ಯವಹಾರದ ಸ್ವರೂಪ | ನಿಯೋಜಕನ ಕುಟುಂಬದ ಸದಸ್ಯರ ಸಂಖ್ಯೆ ವಯಸ್ಕರು ಪುರುಷರು ಮಹಿಳೆಯರು ಯುವ ವ್ಯಕ್ತಿಗಳು | ವಿಶ್ವಾಸ ನಾತೆಯಲ್ಲಿ ತೊಡಗಿರುವ ನಿಯೋಜಿತನ ವ್ಯವಸ್ಥಾಪನೆ ಸ್ಥಾನದಲ್ಲಿರುವ ಇತರೆ ವ್ಯಕ್ತಿಗಳ ಸಂಖ್ಯೆ | ನಿಯೋಜಿತರ ಒಟ್ಟು ಸಂಖ್ಯೆ ವಯಸ್ಕರು ಪುರುಷರು ಮಹಿಳೆಯರು ಯುವ ವ್ಯಕ್ತಿಗಳು | ಷರಾ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |

***ಭಾಗ–I ಅಂಗಡಿಗಳು

ಭಾಗ–II ವಾಣಿಜ್ಯ ಕಾರ್ಯಸಂಸ್ಥೆಗಳು

**ನಮೂನೆ "ಗ"**

**(4ನೇ ನಿಯಮ, ನೋಡಿ)**

ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 ಕಾರ್ಯಸಂಸ್ಥೆಯ ನೊಂದಣಿ ಪ್ರಮಾಣ ಪತ್ರ

ಕಾರ್ಯಸಂಸ್ಥೆಯ ಅಥವಾ ನಿಯೋಜಕನ ಹೆಸರು......................
ವ್ಯವಹಾರದ ಸ್ವರೂಪ..............................................................
ಕಾರ್ಯಸಂಸ್ಥೆಯ ಅಂಚೆ ವಿಳಾಸ.............................................
ನೊಂದಣಿ ಸಂಖ್ಯೆ....................................................................

ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ
ಅಧಿನಿಯಮ 1961ರ ಮೇರೆಗಿನ ಪರಿಶೀಲಕನ ಕಚೇರಿ

ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961ರ ಮೇರೆಗೆ................. ಆಗಿ......................ನ್ನು 19..................ನೇ ದಿವಸದಂದು ನೋಂದಾಯಿಸಲಾಗಿದೆಯೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮದ 1961 ಮೇರೆಗಿನ ಕಾರ್ಮಿಕ ಅಧಿಕಾರಿ ಮತ್ತು ಪರಿಶೀಲಕ

ಮೊಹರು

---

*ಇಲ್ಲಿ ಕಾರ್ಯಸಂಸ್ಥೆಯ ಪ್ರವರ್ಗವನ್ನು ನಮೂದಿಸಿ

**ನಮೂನೆ "ಘ"**

**(5ನೇ ನಿಯಮ ನೋಡಿ)**

**ಬದಲಾವಣೆ ನೋಟೀಸು**

ಈಗಾಗಲೇ ನೋಂದಾಯಿತವಾದ ಕಾರ್ಯಸಂಸ್ಥೆಯ ಹೆಸರು.................
ನಿಯೋಜಕನ ಹೆಸರು....................
ನೊಂದಣಿ ಪ್ರಮಾಣಪತ್ರ ಸಂಖ್ಯೆ................................
(ವಿಳಾಸ)

19...............ರ.......................ನೇ ದಿವಸ

ಗೆ:

ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ

1961ರ ಮೇರೆಗಿನ ಪರಿಶೀಲಕ

ನಮೂನೆ 'ಕ' ನಲ್ಲಿ ನಿಮಗೆ ಕಳುಹಿಸಿದ ಮಾಹಿತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಬದಲಾವಣೆ ಆಗಿದೆ ಎಂದು ಈ ಮೂಲಕ ನೊಟೀಸನ್ನು ಕೊಡಲಾಗಿದೆ. ಇದನ್ನು ದಯವಿಟ್ಟು ಗಮನಿಸಿ

ನಿಯೋಜಕನ ರುಜು

**ನಮೂನೆ "ಙ"**

**(7ನೇ ನಿಯಮ ನೋಡಿ)**

........................ರಿಂದ ಪರಿಣಾಮಕಾರಿಯಾಗುವಂತೆ................ಯಲ್ಲಿರುವ ಯಾವುದೇ ಅಂಗಡಿಗಳು/ ವಾಣಿಜ್ಯ ಕಾರ್ಯಸಂಸ್ಥೆಗಳನ್ನು...............ಕ್ಕಿಂತ ಮುಂಚೆ ಯಾವುದೇ ದಿವಸದಂದು ತೆರೆಯತಕ್ಕದ್ದಲ್ಲ ಮತ್ತು ಅಥವಾ........... ತರುವಾಯ ಮುಚ್ಚತಕ್ಕದ್ದಲ್ಲವೆಂದು ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961ರ 11ನೇ ಪ್ರಕರಣದ (1) ನೇ ಉಪ–ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಲು ಸರ್ಕಾರವು ಉದ್ದೇಶಿಸಿರುವ ಬಗ್ಗೆ ಈ ಮೂಲಕ ನೊಟೀಸನ್ನು ಕೊಡಲಾಗಿದೆ.

ಮೇಲಿನ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೇಯನ್ನು ಸಲ್ಲಿಸಲು ಅಥವಾ ಯಾವುದೇ ಸಲಹೆಯನ್ನು ಮಾಡಲು ಇಚ್ಛಿಸುವ ಯಾವನೇ ವ್ಯಕ್ತಿಯು ಅದನ್ನು ಬರಹದಲ್ಲಿ ಕಾರ್ಮಿಕ ಕಮೀಷನರಿಗೆ................19 ............... ದಿವಸದ ................ ಮುಂಚೆ ಕಳುಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
.............................
ಸರ್ಕಾರದ ಕಾರ್ಯದರ್ಶಿ,
ಸಾರ್ವಜನಿಕ ಆರೋಗ್ಯ, ಕಾರ್ಮಿಕ ಮತ್ತು ಪೌರಾಡಳಿತ ಇಲಾಖೆ

**ನಮೂನೆ "ಚ"**
**(8ನೇ ನಿಯಮ ನೋಡಿ)**
**ಮಜೂರಿಗಳ ಸಹಿತ ರಜೆ ರಿಜಿಸ್ಟರು**
**ಕಾರ್ಯಸಂಸ್ಥೆ...............**
**ಇಲಾಖೆ..........................**

| ಕ್ರಮ ಸಂಖ್ಯೆ | ವಯಸ್ಕ/ಯುವ ವ್ಯಕ್ತಿಯ ನಿಯೋಜನೆಯ ರಿಜಿಸ್ಟರಿನಲ್ಲಿ ಕ್ರ.ಸಂ. | ಹೆಸರು | ತಂದೆಯ ಹೆಸರು | ಸೇವೆಗೆ ಸೇರಿದ ದಿನಾಂಕ | ಭಾಗಗಳು | | | ಅನೈಚ್ಛಿಕ ನಿಯೋಜನೆ | ಇತರೆ | .......ರಿಂದ ಬಾಕಿಯಾಗುವ ರಜೆ | ಮುಂದಿನ ಹನ್ನೆರಡು ತಿಂಗಳುಗಳಲ್ಲಿ ರಜೆಯು ಬೇಕಾಗಿಲ್ಲವೋ ಹೇಗೆ | ಬಿಡುಗಡೆಯಾದ ನಿಯೋಜಿತ | | | ಬಾಕಿಯಾಗಿ ರಜೆಗೆ ಬದಲಾಗಿ ಮಾಡಿದ ಹಣ ಸಂದಾಯದ ದಿನಾಂಕ ಮತ್ತು ಮೊಬಲಗು | ಷರಾ |
|---|---|---|---|---|---|---|---|---|---|---|---|---|---|---|---|---|
| | | | | | ಕಾಯಿಲೆ ಮತ್ತು ಅಪಘಾತ | ಅಧಿಕೃತ ರಜೆ | ಬೀಗಮುದ್ರೆ ಅಥವಾ ಕಾನೂನುಬದ್ಧ ಮುಷ್ಕರ | | | | | ಇಯೋಜಿತನಾದ ವ್ಯಕ್ತಿಗೆ ರಜೆಯನ್ನು ಯಾವ ದಿನಾಂಕದಿಂದ ಕೊಡಲಾಗಿದೆಯೋ ಆ ದಿನಾಂಕ | .......ರಂದು ಪರಿಶ್ರಮ ಧನವನ್ನು ಸಂದಾಯ ಕೊಡಲಾಗಿದೆ | ಬಿಡುಗಡೆಯಾದ ದಿನಾಂಕ | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |

**ನಮೂನೆ "ಭ"**

**(8ನೇ ನಿಯಮವನ್ನು ನೋಡಿ**

**ಮಜೂರಿಗಳ ಸಹಿತ ರಜೆ–ವಾರ್ಷಿಕ ವಿವರ ಪಟ್ಟಿಕೆ**

**ಕಾರ್ಯಸಂಸ್ಥೆಯ ಹೆಸರು...............................**

**19–ಡಿಸೆಂಬರ್ 31ಕ್ಕೆ ಮುಕ್ತಾಯಗೊಳ್ಳುವ ವರ್ಷಕ್ಕಾಗಿ**

ನಿಯೋಜಕನ ಹೆಸರು...................................

ಜಿಲ್ಲೆ.............................................................

ಅಂಚೆ ವಿಳಾಸ.............................................

ಕಾರ್ಯಸಂಸ್ಥೆಯ ಸ್ವರೂಪ............................

ವರ್ಷದಲ್ಲಿ ನಿಯೋಜಿತರಾದ ವ್ಯಕ್ತಿಗಳ ಒಟ್ಟು ಸಂಖ್ಯೆ,–

ಪುರುಷರು.............................................

ಮಹಿಳೆಯರು.........................................

ಯುವ ವ್ಯಕ್ತಿಗಳು....................................

ವರ್ಷದಲ್ಲಿ ಹನ್ನೆರಡು ತಿಂಗಳುಗಳ ನಿರಂತರ ಸೇವೆಯನ್ನು ಮುಗಿಸಿರುವ ವ್ಯಕ್ತಿಗಳ ಸಂಖ್ಯೆ,–

ಪುರುಷರು.............................................

ಮಹಿಳೆಯರು.........................................

ಯುವ ವ್ಯಕ್ತಿಗಳು....................................

ವರ್ಷದಲ್ಲಿ ಯಾರಿಗೆ ರಜೆಯನ್ನು ಕೊಡಲಾಗಿದೆಯೋ ಆ ವ್ಯಕ್ತಿಗಳ ಸಂಖ್ಯೆ,–

ಪುರುಷರು.............................................

ಮಹಿಳೆಯರು.........................................

ಯುವ ವ್ಯಕ್ತಿಗಳು....................................

ರಜೆ ದಿವಸಗಳು ಒದಗಿಬಂದಂಥ ವರ್ಷದಲ್ಲಿ ರಜೆಯನ್ನು ಉಪಯೋಗಿಸಿಕೊಳ್ಳದಿರುವ ಬಗ್ಗೆ ನೋಟೀಸನ್ನು ಕೊಟಿರುವ ವ್ಯಕ್ತಿಗಳ ಸಂಖ್ಯೆ,–

ಪುರುಷರು.............................................

ಮಹಿಳೆಯರು.........................................

ಯುವ ವ್ಯಕ್ತಿಗಳು....................................

**ನಮೂನೆ "ಜ"**

**(9ನೇ ನಿಯಮ ನೋಡಿ)**

**ಮಜೂರಿಗಳ ಸಹಿತ ರಜೆ**

(ನಮೂನೆ "ಚ" ರಿಜಿಸ್ಟರಿನಂತೆ ಬೈಂಡ್ ಮಾಡಿದ ದಪ್ಪ ಹಾಳೆಯ ಮೇಲೆ ನಿಯೋಜಿತನಾದ ಪ್ರತಿಯೊಬ್ಬ ವ್ಯಕ್ತಿಗಾಗಿ ಪ್ರತ್ಯೇಕವಾಗಿ ತಯಾರು ಮಾಡಿರಬೇಕು.

**ನಮೂನೆ "ಝ"**

**(16 (2)ನೇ ನಿಯಮವನ್ನು ನೋಡಿ)**

**ಸುಣ್ಣ ಹೊಡೆಯುವುದು ಇತ್ಯಾದಿ**

| ಕಾರ್ಯಸಂಸ್ಥೆಯ ಭಾಗ ಉದಾಹರಣೆಗೆ, ಕೊಠಡಿಯ ಹೆಸರು | ಸುಣ್ಣ ಹೊಡೆದ ಬಣ್ಣ ಬಳಿದ ಅಥವಾ ವಾರ್ನಿಷ್ ಮಾಡಿದ ಭಾಗಗಳು ಉದಾ: ಒಳಮಾಳಿಗೆ ಗೋಡೆಗಳು ಒಳಮಾಳಿಗೆಗಳು ಮರಗೆಲಸಗಳು ಇತ್ಯಾದಿ | ಸಂಸ್ಕರಣೆ (ಸುಣ್ಣ ಹೊಡೆಯಲಾಗಿದೆಯೇ ಬಣ್ಣ ಬಳಿದಿದೆಯೇ ಅಥವಾ ವಾರ್ನಿಷ್ ಮಾಡಲಾಗಿದೆಯೇ) | ಸುಣ್ಣ ಹೊಡೆದ ಬಣ್ಣ ಬಳಿದ ಅಥವಾ ವಾರ್ನಿಷ್ ಮಾಡಿದಂಥ ದಿನಾಂಕ (ಇಂಗ್ಲಿಷ್ ಕ್ಯಾಲೆಂಡರ್ ಪ್ರಕಾರ) | | | ಅಧಿಭೋಗದಾರ ಅಥವಾ ನಿಯೋಜಕ ಸಹಿ | ಷರಾ |
|---|---|---|---|---|---|---|---|
| | | | ದಿವಸ | ತಿಂಗಳು | ವರ್ಷ | | |
| 1 | 2 | 3 | 4 | | | 5 | 6 |

................................
ಅಧಿಭೋಗದಾರನ ಸಹಿ

................................
ನಿಯೋಜಕನ ರುಜು

**ನಮೂನೆ “ಇ”**

**(22ನೇ ನಿಯಮವನ್ನು ನೋಡಿ)**

**ಪ್ರಮಾಣಪತ್ರದ ನಮೂನೆ**

....................ನಲ್ಲಿ ವಾಸಿಸುತ್ತಿರುವ..............ರವರ ಮಗ/ಮಗಳಾದ (ಹೆಸರು)..............ನನ್ನು ನಾನು ಖುದ್ದಾಗಿ ಪರೀಕ್ಷಿಸಿದ್ದೇನೆಂದು ಮತ್ತು ಅವನು/ಅವಳು ಅವನ/ಅವಳ ಹನ್ನೆರಡನೇ/ಹದಿನೇಳನೆಯ ವಯಸ್ಸನ್ನು ಪೂರ್ಣಗೊಳಿಸಿದ್ದಾನೆ/ಳೆ ಎಂದು ನಾನು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ವಿವರಣೆಯ ಗುರುತುಗಳು

ಹೆಬ್ಬೆಟ್ಟಿನ ಗುರುತು ಅಥವಾ ರುಜು

ವೈದ್ಯವೃತ್ತಿಗೆ

**ನಮೂನೆ “ಟ”**

**(23ನೇ ನಿಯಮವನ್ನು ನೋಡಿ)**

**..............19..............ಮುಗಿಯುವ ತಿಂಗಳಿಗಾಗಿ ಪರಿಶೀಲಕನ ದಿನಚರಿ**

| ದಿನಾಂಕ | ಸ್ಥಳ | ಪರಿಶೀಲಿಸಿದ ಕಾರ್ಯಸಂಸ್ಥೆ | ನಿರ್ದಿಷ್ಟ ಉದ್ದೇಶಗಳಿಗಾಗಿ ಪರಿಶೀಲಿಸಿದ ಕಾರ್ಯ ಸಂಸ್ಥೆಗಳು | ಕಂಡುಬಂದ ನ್ಯೂನತೆಗಳ ಬಗ್ಗೆ ಷರಾ ಕೊಟ್ಟ ನಿರ್ದೇಶನಗಳು ಮತ್ತು ಆದೇಶಗಳು |
|---|---|---|---|---|
| 1 | 2 | 3 | 4 | 5 |

**ನಮೂನೆ "ಠ"**

**(24 (1)ನೇ ನಿಯಮವನ್ನು ನೋಡಿ)**

**ನಿಯೋಜನೆಯ ರಿಜಿಸ್ಟರು**

ತಿಂಗಳು ವರ್ಷ

| ನಿಯೋಜಿತರಾದ ವ್ಯಕ್ತಿಗಳ ಹೆಸರು | ಯುವ ವ್ಯಕ್ತಿಗಳೇ ಅಥವಾ ಅಲ್ಲವೇ | ದಿವಸಗಳು ಅಥವಾ ತಿಂಗಳು | | | | ಅತಿಕಾಲಿಕ ಕೆಲಸವನ್ನು ಮಾಡಿದಂಥ ದಿವಸಗಳು ಮತ್ತು ಪ್ರತಿಯೊಂದು ದಿವಸದಂದು ಅಂಥ ಅತಿಕಾಲಿಕದ ವ್ಯಾಪ್ತಿ | ತಿಂಗಳಿನಲ್ಲಿ ಅತಿಕಾಲಿಕವಾಗಿ ಕೆಲಸ ಮಾಡಿದ ವ್ಯಾಪ್ತಿ | ವರ್ಷದಲ್ಲಿ ಹಿಂದೆ ಅತಿಕಾಲಿಕವಾಗಿ ಕೆಲಸ ಮಾಡಿದ ವ್ಯಾಪ್ತಿ |
|---|---|---|---|---|---|---|---|---|
| | | ನಿಯೋಜನೆಯು ಪ್ರಾರಂಭ ವಾಗುವಂಥ ಕಾಲ | ನಿಯೋಜನೆಯ ನಿಂತುಹೋಗುವ ಕಾಲ | ವಿರಾಮ ಕಾಲ | ತಿಂಗಳಿನಲ್ಲಿ ಕೆಲಸ ಮಾಡಿದ ಒಟ್ಟು ಗಂಟೆಗಳು | | | |
| 1 | 2 | 3 | 4 | 5 | 6 | 7 | 8 | 9 |
| | | | | | | | | |

**ಟಿಪ್ಪಣಿ.**– 24(4)ನೇ ನಿಯಮದ ಉಲ್ಲೇಖಿದ ನೋಟೀಸಿಗೆ ಅನುಸಾರವಾಗಿ ರಜೆ ದಿವಸವನ್ನು ಕೊಟ್ಟಿರುವಂಥ ಯಾವುದೇ ದಿವಸಕ್ಕೆ ಸಂಬಂಧಪಟ್ಟ ಅಂಕಣದಲ್ಲಿ "ಎಚ್" ಗುರುತನ್ನು ಮಾಡತಕ್ಕದ್ದು.

## ನಮೂನೆ "ಡ"

**(24 (1)ನೇ ನಿಯಮವನ್ನು ನೋಡಿ)**

**ನಿಯೋಜನಾ ರಿಜಿಸ್ಟರು**

**ತೆರೆಯುವ ಮತ್ತು ಮುಚ್ಚುವ ವೇಳೆಗಳು ಸಾಮಾನ್ಯವಾಗಿ ಏಕರೂಪವಾಗಿರುವಲ್ಲಿ**

ತಿಂಗಳು................. ವರ್ಷ.................

| ನಿಯೋಜಿತರಾದ ವ್ಯಕ್ತಿಗಳ ಹೆಸರು | ಯುವವ್ಯಕ್ತಿಯೇ ಅಥವಾ ಅಲ್ಲವೇ | ನಿಯೋಜನೆಯು ನಿಂತು ಹೋಗುವಂಥ ಕಾಲ | ವಿಶ್ರಾಂತಿ ಬಿಡುವು | ಕೆಲಸ ಮಾಡಿದ ಘಂಟೆಗಳು<br>1 2 3 4 5 6 7 8 9 10 11 | ತಿಂಗಳಿನ ಕೆಲಸ ಮಾಡಿದ ಒಟ್ಟು ಗಂಟೆಗಳು | ಅತಿಕಾಲಿಕ ಕೆಲಸವನ್ನು ಮಾಡಿದಂಥ ದಿವಸಗಳು ಮತ್ತು ಪ್ರತಿಯೊಂದು ಸಂದರ್ಭದಲ್ಲಿ ಅಂಥ ಅತಿಕಾಲಿಕದ ವ್ಯಾಪ್ತಿ | ತಿಂಗಳಿನಲ್ಲಿ ಕೆಲಸ ಮಾಡಿದ ಅತಿಕಾಲಿಕ ವ್ಯಾಪ್ತಿ | ಈ ವರ್ಷದಲ್ಲಿ ಹಿಂದೆ ಕೆಲಸ ಮಾಡಿದ ಅತಿಕಾಲಿಕ ವ್ಯಾಪ್ತಿ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |

**ಟಿಪ್ಪಣಿ.–** 24(4)ನೇ ನಿಯಮದಲ್ಲಿ ಉಲ್ಲೇಖಿಸಿದ ನೋಟೀಸಿಗೆ ಅನುಸಾರವಾಗಿ ರಜಾ ದಿವಸವನ್ನು ಕೊಟ್ಟಿರುವಂಥ ಯಾವುದೇ ಸಂಬಂಧಪಟ್ಟ ಅಂಕಣದಲ್ಲಿ "ಎಚ್" ಗುರುತನ್ನು ಮಾಡತಕ್ಕದ್ದು.

**ನಮೂನೆ "ಢ"**

**(24 (2)ನೇ ನಿಯಮವನ್ನು ನೋಡಿ)**

**ನೋಟೀಸು**

ನಿಯೋಜಿತರಾದ ವ್ಯಕ್ತಿಗಳ ಕೆಲಸದ ದೈನಂದಿನ ಅವಧಿಗಳು

...................19...................ರಂದು ಪ್ರಾರಂಭಿಸಿ

ನಿಯೋಜಕನ ಅಥವಾ ಕಾರ್ಯಸಂಸ್ಥೆಯ ಹೆಸರು ಇಲಾಖೆಯ ವಿವರಣೆ (ಅನ್ವಯವಾದರೆ)

| ನಿಯೋಜಿತರಾದ ವ್ಯಕ್ತಿಗಳ ಹೆಸರುಗಳು | ದಿವಸ | | | ನಿಯೋಜನೆಯ ಮುಕ್ತಾಯ |
|---|---|---|---|---|
| | ಯುವ ವ್ಯಕ್ತಿಯೇ ಅಥವಾ ಅಲ್ಲವೇ | ನಿಯೋಜನೆಯ ಪ್ರಾರಂಭ | ಭೋಜನಗಳಿಗಾಗಿ ಮತ್ತು ವಿಶ್ರಾಂತಿಗಾಗಿ ಬಿಡುವುಗಳು | |
| | | | | |

(ರುಜು)

ನಿಯೋಜಕ

...................19...................ದಿನಾಂಕ

**ಟಿಪ್ಪಣಿ:** 1) ಈ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬೇಕಾದ ಗಂಟೆಗಳು ಅತಿಕಾಲಿಕವನ್ನು ಹೊರತುಪಡಿಸಿ ಕೆಲಸ ಮಾಡಬೇಕಾದ ಗಂಟೆಗಳು

2) ಭೋಜನಗಳು ಮತ್ತು ವಿಶ್ರಾಂತಿಗಾಗಿನ ಬಿಡುವುಗಳು ಎಂಬ ಶೀರ್ಷಿಕೆಯ ಅಡಿಯಲ್ಲಿನ ನಮೂದುಗಳು ಬಿಡುವುಗಳು ಪ್ರಾರಂಭವಾಗಬೇಕಾದ ಮತ್ತು ಕೊನೆಗೊಳ್ಳಬೇಕಾದಂಥ ವಾಸ್ತವಿಕ ಕಾಲಗಳಾಗಿರತಕ್ಕದ್ದು (ಉದಾ: ಅಪರಾಹ್ನ 1 ರಿಂದ 2 ರವರೆಗೆ)

**ನಮೂನೆ “ಣ”**

**(24 (3)ನೇ ನಿಯಮವನ್ನು ನೋಡಿ)**

**ನಿಯೋಜಿತರಾದ ವ್ಯಕ್ತಿಗಳ ಕೆಲಸದ ಘಂಟೆಗಳ ದಾಖಲೆ**

(ಢ ನಮೂನೆಯಲ್ಲಿ ನೋಟೀಸನ್ನು ಪ್ರದರ್ಶಿಸಿದಾಗ ಮಾತ್ರ ಉಪಯೋಗಿಸಬೇಕು) ಇಲಾಖೆಯ ವಿವರಣೆ

(ಅನ್ವಯವಾದರೆ)

.................ವರ್ಷ .................ತಿಂಗಳು

| ನಿಯೋಜಿತರಾದ ವ್ಯಕ್ತಿಗಳ ಹೆಸರುಗಳು | ಯುವ ವ್ಯಕ್ತಿಯೇ ಅಥವಾ ಅಲ್ಲವೇ | ತಿಂಗಳಿನಲ್ಲಿ ಕೆಲಸ ಮಾಡಿದ ಒಟ್ಟು ಗಂಟೆಗಳು | ಅತಿಕಾಲಿಕ ಕೆಲಸವನ್ನು ಮಾಡಿದಂಥ ದಿವಸಗಳು ಮತ್ತು ಪ್ರತಿ ಸಂದರ್ಭದಲ್ಲಿ ಅಂಥ ಅತಿಕಾಲಿಕದ ವ್ಯಾಪ್ತಿ | ತಿಂಗಳಿನಲ್ಲಿ ಕೆಲಸ ಮಾಡಿದ ಅತಿಕಾಲಿಕ ವ್ಯಾಪ್ತಿ | ವರ್ಷದಲ್ಲಿ ಹಿಂದೆ ಕೆಲಸಮಾಡಿದ ಅತಿಕಾಲಿಕ ವ್ಯಾಪ್ತಿ |
|---|---|---|---|---|---|

**ಟಿಪ್ಪಣಿ:–** ಯಾವುದೇ ದಿವಸಕ್ಕೆ ಸಂಬಂಧಿಸಿದ ನಮೂನೆಗಳನ್ನು ಆ ದಿವಸದಲ್ಲಿ ಮಾಡತಕ್ಕದ್ದು.

**ನಮೂನೆ "ತ"**

**(24 (4)ನೇ ನಿಯಮವನ್ನು ನೋಡಿ)**

**ನೋಟೀಸು**

**ರಜಾದಿನ**

ಈ ವಾಣಿಜ್ಯ ಕಾರ್ಯಸಂಸ್ಥೆಯಲ್ಲಿ

ಅಂಗಡಿಯಲ್ಲಿ ನಿಯೋಜಿತರಾದ ವ್ಯಕ್ತಿಗಳಿಗೆ*

ಈ ನೋಟೀಸಿನ ದಿನಾಂಕದ ತರುವಾಯದ ವಾರದಲ್ಲಿ ಮತ್ತು ಇನ್ನೂ ಮುಂದಿನ ನೋಟೀಸಿನವರೆಗೆ ಕೆಳಗೆ ಹೆಸರಿಸಿದ ದಿವಸದಂದು ರಜಾದಿನವನ್ನು ಕೊಡತಕ್ಕದ್ದು**

| ***ನಿಯೋಜಿತರಾದ ವ್ಯಕ್ತಿಗಳ ಹೆಸರು ಅಥವಾ ವರ್ಗ | ರಜಾದಿನವನ್ನು ಅನುಮತಿಸಿರುವಂಥ ದಿವಸ |
|---|---|
| | |

ನಿಯೋಜಕನ ರುಜು

ದಿನಾಂಕ.............

*ಸಂಬಂಧಪಡದಂಥ ಪದಗಳನ್ನು ಹೊಡೆದುಹಾಕಿ

**ಒಂದು ವಾರಕ್ಕೆ ಮಾತ್ರ ನೋಟೀಸನ್ನು ಅನ್ವಯಿಸಲು ಉದ್ದೇಶಿಸಿದ್ದರೆ "ಮತ್ತು ಮುಂದಿನ ನೋಟೀಸಿನವರೆಗೆ" ಎಂಬ ಪದಗಳನ್ನು ಹೊಡೆದು ಹಾಕಿ

***ನಿಯೋಜಿತರಾದ ಎಲ್ಲಾ ವ್ಯಕ್ತಿಗಳಿಗಾಗಿ ಅದೇ ದಿವಸವನ್ನು ನಿಗದಿಪಡಿಸಿದ್ದರೆ 'ಎಲ್ಲಾ' ಎಂಬ ಪದವನ್ನು ಮಾತ್ರ ಈ ಅಂಕಣದಲ್ಲಿ ಸೇರಿಸಬೇಕು.

**ಅನುಸೂಚಿ I**

**(3ನೇ ನಿಯಮವನ್ನು ನೋಡಿ)**

'ಕ' ನಮೂನೆಯಲ್ಲಿನ ವಿವರ ಪತ್ರವನ್ನು ಅನುಸೂಚಿಯಲ್ಲಿ ನಿಯಮಿಸಿದ ಫೀಜುಗಳ ಸಹಿತ ಪರಿಶೀಲಕನಿಗೆ ಕಳುಹಿಸತಕ್ಕದ್ದು.

| ಕ್ರ. ಸಂ. | ಕಾರ್ಯಸಂಸ್ಥೆಗಾಗಿನ ಪ್ರವರ್ಗ | ಫೀಜು ರೂ–ಪೈ |
|---|---|---|
| 1 | ಹತ್ತು ಅಥವಾ ಹೆಚ್ಚು ನಿಯೋಜಿತರನ್ನು ನಿಯೋಜಿಸಿಕೊಂಡಿರುವ ವಾಣಿಜ್ಯ ಕಾರ್ಯಸಂಸ್ಥೆಗಳು | 10–00 |
| 2 | ಹತ್ತಕ್ಕಿಂತ ಕಡಿಮೆ ನಿಯೋಜಿತರನ್ನು ನಿಯೋಜಿಸಿಕೊಂಡಿರುವ ವಾಣಿಜ್ಯ ಕಾರ್ಯಸಂಸ್ಥೆಗಳು | 5–00 |
| 3 | ಪೂರ್ಣವಾಗಿ ಹಾಲು, ತರಕಾರಿ, ಹಣ್ಣುಗಳು, ಮೀನುಮಾಂಸ ಬ್ರೆಡ್, ಪಾನ್, ಬೀಡಿ, ಸಿಗರೇಟುಗಳು ಮತ್ತು ಬೆಂಕಿಕಡ್ಡಿಗಳಲ್ಲಿ ವ್ಯವಹರಿಸುವ ಅಂಗಡಿಗಳನ್ನು ಹೊರತುಪಡಿಸಿ ಮತ್ತು ಹತ್ತು ಅಥವಾ ಹೆಚ್ಚು ನಿಯೋಜಿತರನ್ನು ನಿಯೋಜಿಸಿಕೊಂಡಿರುವ ಅಂಗಡಿಗಳು | 10–00 |
| 4 | ಪೂರ್ಣವಾಗಿ ಹಾಲು, ತರಕಾರಿಗಳು, ಹಣ್ಣುಗಳು ಮೀನುಮಾಂಸ ಬ್ರೆಡ್, ಪಾನ್, ಬೀಡಿ, ಸಿಗರೇಟುಗಳು ಮತ್ತು ಬೆಂಕಿಕಡ್ಡಿಗಳಲ್ಲಿ ವ್ಯವಹರಿಸುವ ಅಂಗಡಿಗಳನ್ನು ಹೊರತುಪಡಿಸಿ ಮತ್ತು ಹತ್ತಕ್ಕಿಂತ ಕಡಿಮೆ ನಿಯೋಜಿತರನ್ನು ನಿಯೋಜಿಸಿಕೊಂಡಿರುವ ಅಂಗಡಿಗಳು | 5–00 |
| 5 | ಪೂರ್ಣವಾಗಿ ಹಾಲು, ತರಕಾರಿಗಳು, ಹಣ್ಣುಗಳು ಮೀನುಮಾಂಸ ಬ್ರೆಡ್, ಪಾನು, ಬೀಡಿ ಸಿಗರೇಟು ಮತ್ತು ಬೆಂಕಿ ಕಡ್ಡಿಗಳಲ್ಲಿ ವ್ಯವಹರಿಸುವ ಅಂಗಡಿಗಳು | 2–00 |
| 6 | ವಸತಿ ಹೊಟೇಲುಗಳು | 1–00 |
| 7 | ಹತ್ತು ಅಥವಾ ಹೆಚ್ಚು ನಿಯೋಜಿತರನ್ನು ನಿಯೋಜಿಸಿಕೊಂಡಿರುವ ಫಲಾಹಾರ ಗೃಹಗಳು ಭೋಜನಗೃಹಗಳು | 10–00 |
| 8 | ಹತ್ತಕ್ಕಿಂತ ಕಡಿಮೆ ನಿಯೋಜಿತರನ್ನು ನಿಯೋಜಿಸಿಕೊಂಡಿರುವ ಉಪಾಹಾರ ಗೃಹಗಳು ಮತ್ತು ಭೋಜನ ಗೃಹಗಳು | 5–00 |
| 9 | ಥೀಯೇಟರುಗಳ ನತ್ತು ಸಾರ್ವಜನಿಕ ವಿನೋದ ಅಥವಾ ಮನರಂಜನೆಯ ಇತರ ಸ್ಥಳಗಳು | 10–00 |
| 10 | ಯಾರೇ ನಿಯೋಜಿತರನ್ನು ತೊಡಗಿಸಿಕೊಳ್ಳದೇ ಇರುವ ಕಾರ್ಯಸಂಸ್ಥೆ | 1–00 |

[ಸಂಖ್ಯೆ ಪಿಎಲ್ಎಂ 82 ಎಲ್ಎಸ್ಸಿ 61]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಎಚ್.ಎಲ್. ಲಿಂಗರಾಜ್ ಅರಸ್**

ಉಪ–ಕಾರ್ಯದರ್ಶಿ

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು. WD- /Vikasa Soudha/DTP-C6